
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಐಕ್ಯರಂಗ

ಸ್ವಾತಂತ್ರ್ಯ ದಿನ ವಿಶೇಷಾಂಕ - 1995



ಎಂಗೆಲ್ಸ್
ತನ್ನ ಗೆಳೆಯ ಮಾರ್ಕ್ಸ್
ನಂತರ ಆಧುನಿಕ ಶ್ರಮಜೀವಿ
ವರ್ಗದ ಅತ್ಯುತ್ಕೃಷ್ಟ
ವಿದ್ವಾಂಸರು ಹಾಗೂ
ಶಿಕ್ಷಕರು
- ಲೆನಿನ್



ಸ್ವಾತಂತ್ರ್ಯ
ಆಂದೋಲನದ ಆಶಯಗಳ,
ಆಕಾಂಕ್ಷೆಗಳ ಈಡೇರಿಕೆಗೆ
ಕನಸುಗಳನ್ನು ನನಸಾಗಿಸಲು
ಹೋರಾಟ
ಮುಂದುವರೆದಿದೆ

"ಐಕ್ಯರಂಗ" ಪತ್ರಿಕೆಯು 1995ನೇ ಇಸವಿಯಲ್ಲಿ 31ನೇ ವರ್ಷಕ್ಕೆ ಕಾಲಿಟ್ಟಿದೆ. ಈ ಸಂದರ್ಭದಲ್ಲಿ ನಾವು ಹೊರತರುತ್ತಿರುವ ಆಗಸ್ಟ್ 15ರ ವಿಶೇಷ ಸಂಚಿಕೆಗೆ ವಿಶೇಷ ಮಹತ್ವ ಇದೆ.

"ಐಕ್ಯರಂಗ"ವು ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರವಾಗಿದ್ದು ದೇಶದ ಕಾರ್ಮಿಕ ವರ್ಗ, ರೈತ ವರ್ಗ, ಕೃಷಿ ಕೂಲಿಕಾರ ವರ್ಗ, ಮಧ್ಯಮ ವರ್ಗ ಮತ್ತು ಗುತ್ತೇದಾರಿಯಲ್ಲದ ಬಂಡವಾಳ ವರ್ಗಗಳ ಸಂಯುಕ್ತ ರಂಗ - ಜನತಾ ಪ್ರಜಾಪ್ರಭುತ್ವ ಐಕ್ಯರಂಗ - ದ ಸಾಧನೆಗಾಗಿ ಮುಡಿಪಾಗಿಟ್ಟ ಪತ್ರಿಕೆ.

ಸಂಪಾದಕೀಯ

ಕಾರ್ಮಿಕ ವರ್ಗದ ನೇತೃತ್ವದಲ್ಲಿ ನಡೆಯುತ್ತಿರುವ ಈ ರಾಜಕೀಯ ಹೋರಾಟವು ಇಂದು ದೇಶದ ರಾಜಕೀಯದಲ್ಲಿ ನೂತನ ಆರ್ಥಿಕ ನೀತಿಗಳ ಮೂಲಕ ದೇಶದ ಸ್ವತಂತ್ರ ಆರ್ಥಿಕ ಬೆಳವಣಿಗೆಗೇ ಕೊಡಲಿ ಏಟು ಹಾಕುತ್ತಿರುವ ಕಾಂಗ್ರೆಸ್(ಐ)ಯನ್ನು ಸೋಲಿಸುವ ಉದ್ದೇಶವನ್ನಿಟ್ಟುಕೊಂಡಿದೆ. ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಕೊಡಲಿ ಏಟು ಕೊಡುತ್ತಿರುವ ಬಿಜೆಪಿಯಂತಹ ಕೋಮುವಾದಿ ಪಕ್ಷವನ್ನು ಸೋಲಿಸುವ ಉದ್ದೇಶವನ್ನಿಟ್ಟುಕೊಂಡಿದೆ. ದೇಶದಲ್ಲಿ ಎಡಪಕ್ಷಗಳ ಜನಪರ ಕನಿಷ್ಠ ಕಾರ್ಯಕ್ರಮದ ಆಧಾರದಲ್ಲಿ ದೇಶದಲ್ಲಿ ಜನತಾ ಚಳುವಳಿ ಸಾರ್ವತ್ರಿಕವಾಗಿ ದೇಶದಾದ್ಯಂತ ಬೆಳೆಯುವುದಕ್ಕೆ ಸಹಾಯಕವಾಗುವಂತಹ ಎಡ ಮತ್ತುಜಾತ್ಯಾತೀತ ಪ್ರಜಾಸತ್ತಾತ್ಮಕ ಪಕ್ಷಗಳ ಮತ್ತು ಶಕ್ತಿಗಳ ಪರ್ಯಾಯ ಸರಕಾರವು ಕೇಂದ್ರದಲ್ಲಿ ಬರುವುದಕ್ಕಾಗಿ ಹೋರಾಡುವ ಉದ್ದೇಶವನ್ನು ಇಟ್ಟುಕೊಂಡಿದೆ.

ಕರ್ನಾಟಕ ರಾಜ್ಯದಲ್ಲಿ ವಿಶಾಲವಾದ ಜನಪರ ಪ್ರಜಾಸತ್ತಾತ್ಮಕ ಚಳುವಳಿಯನ್ನು ಕಟ್ಟಿ ಬೆಳೆಸುವ ಮೂಲಕ ರಾಜ್ಯದಲ್ಲಿ ಬಹು ಬಡಜನ ವಿಭಾಗಗಳ ಆಶೋತ್ತರಗಳಿಗೆ ಸ್ಪಂದಿಸುವ ಅವುಗಳ ಪೂರೈಕೆಗೆ ಹೋರಾಡುವ ಎಡಶಕ್ತಿಗಳ ಚಳುವಳಿಯನ್ನು ಕಟ್ಟಿ ಬೆಳೆಸುವ ಕಾರ್ಯಕ್ರಮವನ್ನು ಸಿಪಿಐ(ಎಂ) ಪಕ್ಷವು ಹಮ್ಮಿಕೊಂಡಿದೆ.

ಈ ಎಲ್ಲಾ ಉದ್ದೇಶಗಳನ್ನು ಕೈಗೂಡಿಸಲು ರಾಜ್ಯದ ಜನತೆ ಖಂಡಿತವಾಗಿ ನಮ್ಮ ಪಕ್ಷಕ್ಕೆ ಬೆಂಬಲ ವ್ಯಕ್ತಪಡಿಸುವರು ಎಂಬ ವಿಶ್ವಾಸ ನಮಗಿದೆ.





ಪಕ್ಷದ ಮುಖಪತ್ರ "ಐಕ್ಯರಂಗ"ದ ಈ ವಿಶೇಷ ಸಂಚಿಕೆಗೆ ಸುಮಾರು 1 ಲಕ್ಷ ರೂಪಾಯಿಗಳಷ್ಟು ಜಾಹೀರಾತುಗಳನ್ನು ಕೊಡುವ ಮೂಲಕ ಪಕ್ಷದ ಚಟುವಟಿಕೆಗಳಿಗೆ ಪ್ರೋತ್ಸಾಹವಿತ್ತ ಎಲ್ಲಾ ಸಹೃದಯರಿಗೆ ನಮ್ಮ ವಿನಮ್ರ ಕೃತಜ್ಞತೆಗಳು.

ಸ್ವತಂತ್ರ ಭಾರತ 49ನೇ ವರ್ಷಕ್ಕೆ ಹೆಜ್ಜೆ ಇಟ್ಟಿರುವ ಸಂದರ್ಭದಲ್ಲಿ ದೇಶದ ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗಗಳಲ್ಲಿನ ಸನ್ನಿವೇಶವನ್ನು ಪರಿಶೀಲಿಸುವ, ಸ್ವಾತಂತ್ರ್ಯ ಆಂದೋಲನದ ಕನಸುಗಳು ಎಷ್ಟು ನನಸಾಗಿವೆ, ಆಶಯಗಳು ಎಷ್ಟು ಈಡೇರಿವೆ ಎಂದು ವಿಶ್ಲೇಷಿಸುವ ನಾಲ್ಕು ಲೇಖನಗಳೊಂದಿಗೇ ಈ ವರ್ಷ ಶ್ರಮಿಕ ವರ್ಗದ ವೈಜ್ಞಾನಿಕ ಸಿದ್ಧಾಂತದ ಪ್ರವರ್ತಕರಲ್ಲೊಬ್ಬರಾದ ಫ್ರೆಡರಿಕ್ ಎಂಗೆಲ್ಸ್‌ರವರ ಮರಣ ಶತಾಬ್ಧಿಯನ್ನು(ಜನನ: 28.11.1820 ಮರಣ: 5.8.1895) ವಿಶ್ವಾದ್ಯಂತ ದುಡಿಯುವ ಜನರು ಹಾಗೂ ಪ್ರಗತಿಪರರೆಲ್ಲಾ ಆಚರಿಸುತ್ತಿರುವ ಸಂದರ್ಭದಲ್ಲಿ ಈ ಮೇಧಾವಿಯ ಜೀವನ-ಕೊಡುಗೆಗಳ ಒಂದು ಚಿತ್ರ ನೀಡುವ ಲೇಖನಗಳ ಮೂಲಕ "ಐಕ್ಯರಂಗ" ಪಾಲ್ಗೊಳ್ಳುತ್ತಿದೆ.

ರಾಜ್ಯದ ಪುರೋಗಾಮಿ ರಾಜಕೀಯ ಚಳುವಳಿಗಳಿಗೆ ಶುಭ ಹಾರೈಸಿ ನಾವು ಈ "ವಿಶೇಷ ಸಂಚಿಕೆ"ಯನ್ನು ಬಿಡುಗಡೆ ಮಾಡಲಿಚ್ಛಿಸುತ್ತೇವೆ.

OUR THANKS TO





ಸಂಪುಟ 17

ಸಂಚಿಕೆ 36-37

ಸ್ವಾತ್ಯಂತ್ರ್ಯೋತ್ಸವ
ವಿಶೇಷಾಂಕ

ರೂ. 5.00

-ಹರ್ಕಿಶನ್ ಸಿಂಗ್ ಸುರ್ಜಿತ್

ನಲವತ್ತೊಂಭತ್ತನೇ ಸ್ವಾತಂತ್ರ್ಯ ದಿನದಂದು

ಈ ಬಾರಿಯ ಸ್ವಾತಂತ್ರ್ಯ ದಿನದಂದು ಹಾಗೂ ಅದರ ಮುನ್ನಾ ದಿನದಂದು ಎಂದಿನಂತೆ ದೇಶಬಾಂಧವರು ಎರಡು ಭಾಷಣಗಳನ್ನು ಕೇಳಿದರು - ಒಂದು ಪ್ರಧಾನಿಗಳದ್ದು. ಇನ್ನೊಂದು ರಾಷ್ಟ್ರಪತಿಗಳದ್ದು. ಆದರೆ ಈ ಎರಡು ಭಾಷಣಗಳಲ್ಲಿ ಕಂಡು ಬಂದ ನಿಲುವುಗಳು ತದ್ವಿರುದ್ಧವಾಗಿದ್ದವು.

ಆಗಸ್ಟ್ 15 ಭಾರತೀಯರಿಗೆ ಬಹಳ ಮಹತ್ವದ ದಿನ. 48 ವರ್ಷಗಳ ಹಿಂದೆ ಈ ದಿನ ಸುಮಾರು ಒಂದು ಶತಮಾನದ ದೀರ್ಘ ಹೋರಾಟದ ನಂತರ ಬ್ರಿಟಿಷ್ ಸಾಮ್ರಾಜ್ಯಶಾಹಿ ನೊಗವನ್ನು ಕಿತ್ತೆಸೆದು ದೇಶ ಸ್ವಾತಂತ್ರ್ಯಗಳಿಸಿತು. ಈ ದಿನ ದೇಶದ ಜನ, ಕಾರ್ಮಿಕ ವರ್ಗ, ರೈತಾಪಿ ವರ್ಗಗಳು ಹಾಗೂ ಇತರ ಶ್ರಮಜೀವಿಗಳು ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಮಾಡಿದ ಅಪಾರ ತ್ಯಾಗ, ಬಲಿದಾನಗಳನ್ನು ನೆನಪಿಸಿಕೊಳ್ಳುತ್ತೇವೆ. ಈ ದಿನ ರಾಷ್ಟ್ರೀಯ ಆಂದೋಲನದಲ್ಲಿ ರೂಪುಗೊಂಡ ಆಶಯಗಳನ್ನು, ನೀಡಿದ ಭರವಸೆಗಳನ್ನು ನೆನಪಿಸಿಕೊಳ್ಳುವ ದಿನವೂ ಕೂಡಾ.

ಸ್ವಾತಂತ್ರ್ಯ ಎಂದರೆ, ಹಸಿವು-ದಾರಿದ್ರ್ಯಗಳ ನಿರ್ಮೂಲನ, ಸ್ವಾತಂತ್ರ್ಯ ಎಂದರೆ ಬ್ರಿಟಿಶ್ ಸಾಮ್ರಾಜ್ಯಶಾಹಿಗಳು ದೇಶವನ್ನು ಲೂಟಿಹೊಡೆದು, ಜನಸಾಮಾನ್ಯರ ಮೇಲೆ ಅಗಣಿತ ಸಂಕಷ್ಟಗಳನ್ನು ಹೇರಿದ ಅತೀ ಕೆಟ್ಟ ರೀತಿಯ ಶೋಷಣೆಗೆ ವಿರುದ್ಧವಾದ ಶಾಂತಿ, ಸಮೃದ್ಧಿ, ಸಮಾನತೆ ಹಾಗೂ ಸರ್ವ ದೇಶಬಾಂಧವರ ಒಳಿತಿನ ಈಡೇರಿಕೆ ಎಂಬುದು ರಾಷ್ಟ್ರೀಯ ಆಂದೋಲನದ ಕನಸಾಗಿತ್ತು. ಎಂದಿನಂತೆ ಈ ವರ್ಷವೂ ಆಗಸ್ಟ್ 15ರಂದು ಭಾರತದ ಆಳರಸರು ಸ್ವಾತಂತ್ರ್ಯ ಆಂದೋಲನ ಕಂಡರಿಸಿದ್ದೇನು, ತಾವು ದೇಶದ ಜನಗಳಿಗೆ ಮಾಡಿದ್ದೇನು ಎಂಬುದರ ಲೆಕ್ಕ-ಪತ್ರ ಕೊಡುತ್ತಾರೆ ಎಂದು ಜನ ನಿರೀಕ್ಷಿಸಿದ್ದರು. ಈ ದೃಷ್ಟಿಯಿಂದ ರಾಷ್ಟ್ರಪತಿಗಳ ಪ್ರಸಾರ ಭಾಷಣ ಹಾಗೂ ಕೆಂಪು ಕೋಟೆಯಿಂದ ಪ್ರಧಾನ ಮಂತ್ರಿಗಳ ಭಾಷಣವನ್ನು ಪರಿಶೀಲಿಸಬೇಕು. ಒಂದೇ ಸಂದರ್ಭದಲ್ಲಿ ಬಂದಿರುವ ಈ ಎರಡು ಭಾಷಣಗಳಲ್ಲಿ ಭಿನ್ನ ನಿಲುವು ಎದ್ದು ಕಾಣುತ್ತಿದೆ.

ಸ್ವಾತಂತ್ರ್ಯ ಆಂದೋಲನದ ಕನಸುಗಳನ್ನು ನನಸು ಮಾಡಬೇಕೆಂದು ನೆನಪಿಸಿದ ರಾಷ್ಟ್ರಪತಿ ಭಾಷಣ

ರಾಷ್ಟ್ರಪತಿಗಳ ಭಾಷಣ ಸ್ವಾತಂತ್ರ್ಯ ಹೋರಾಟದಲ್ಲಿ "ನಮ್ಮ ವಿಶಾಲ ದೇಶದ ನಗರ, ಪಟ್ಟಣ, ಹಳ್ಳಿಗಾಡುಗಳಲ್ಲಿ ಎಚ್ಚೆತ್ತ, ಸ್ಫೂರ್ತಿ ಪಡೆದ ಕೋಟ್ಯಾಂತರ ಜನಗಳ ಸಂಕಟ ಮತ್ತು ತ್ಯಾಗಗಳನ್ನು" ನೆನಪಿಗೆ ತಂದಿತು. 15ನೇ ಆಗಸ್ಟ್ "ನಮ್ಮ ಹೋರಾಟದ ಒಂದು ಅಧ್ಯಾಯ ಕೊನೆಗೊಂಡದ್ದನ್ನು ಸೂಚಿಸುತ್ತದೆ. ಜತೆಗೇ ಇನ್ನೊಂದು ಗುರಿಸಾಧನೆಯ ಹೋರಾಟ ಇನ್ನೊಂದು ರಾಷ್ಟ್ರೀಯ ಹೋರಾಟ ಆ ಶುಭ ದಿನದಂದು ಆರಂಭಗೊಂಡದ್ದನ್ನು ಸೂಚಿಸುತ್ತದೆ. ಸಾಮಾಜಿಕ ನ್ಯಾಯದೊಂದಿಗೆ ಅಭಿವೃದ್ಧಿ ಇದು ನಮ್ಮ ರಾಷ್ಟ್ರೀಯ ಪುನರ್‍ರಚನೆಯ ಗುರಿ. ಭಾರತದ ಪುನರ್‍ರಚನೆ ಮಾಡುತ್ತಾ ನೆರೆದೇಶಗಳೊಂದಿಗೆ, ಇಡೀ ವಿಶ್ವದ ಜನಗಳೊಂದಿಗೆ ಶಾಂತಿ, ಗೆಳತನ ಹಾಗೂ ಸಹಕಾರಕ್ಕಾಗಿ ಪ್ರಯತ್ನಶೀಲರಾಗುತ್ತೇವೆ. ಈ ಮೂಲಕ ಸರ್ವರಿಗೂ ಉತ್ತಮ ಭವಿಷ್ಯ ರೂಪಿಸುವಲ್ಲಿ ನಮ್ಮ ನ್ಯಾಯಯುತ ಕೊಡುಗೆ ನೀಡಲು ಪ್ರಯತ್ನಿಸುತ್ತೇವೆ" ಎಂದರು ರಾಷ್ಟ್ರಪತಿಗಳು ತಮ್ಮ ಪ್ರಸಾರ ಭಾಷಣದಲ್ಲಿ.

"ಆದರೂ ಬಡತನ, ನಿರಕ್ಷರತೆ ಮತ್ತು ರೋಗಗ್ರಸ್ತತೆಯ ಸಮಸ್ಯೆಗಳು ನಮ್ಮನ್ನು ಕಾಡುತ್ತಿವೆ ಎಂಬುದರ ಬಗ್ಗೆಯೂ ಸಂಶಯವಿಲ್ಲ, ಇದಕ್ಕೆ ಸಂಬಂಧಪಟ್ಟಂತಿರುವ ಕೋಮುವಾದ, ಜಾತೀವಾದ ಮತ್ತು ಭ್ರಷ್ಟಾಚಾರದ ಪಿಡುಗುಗಳನ್ನು ಕೂಡಾ ಎದುರಿಸಿ ನಿರ್ಮೂಲನ ಮಾಡುವ ಕೆಲಸ ಇದೆ" ಎಂದು ಮುಂದುವರಿದು ನಮ್ಮ ಗಣತಂತ್ರದ ರಾಷ್ಟ್ರಪತಿಗಳು ಹೇಳಿದರು.

"ದೇಶ ಕಟ್ಟುವ, ಸ್ವಾತಂತ್ರ್ಯದ ಸಾಧನೆಗಳನ್ನು ಉಳಿಸಿ ಬೆಳೆಸುವ ಕರ್ತವ್ಯದಲ್ಲಿ ನಮ್ಮ ಪ್ರತಿಯೊಬ್ಬರಿಗೂ ಮಹತ್ವದ ಪಾತ್ರವಿದೆ" ಎಂದು ಜನರಿಗೆ ಹೇಳುತ್ತಾ ರಾಷ್ಟ್ರಪತಿಗಳು ತಮ್ಮ ಅಧಿಕಾರವನ್ನು ಪ್ರತಿಯೊಂದು ಆವಶ್ಯಕ ಸಂದರ್ಭದಲ್ಲಿ ಸೂಕ್ತರೀತಿಯಲ್ಲಿ ಬಳಸಬೇಕು ಎಂದರು. ಈಗಿನ ರಾಜಕೀಯ ವಾಸ್ತವತೆಯನ್ನು ಗಣನೆಗೆ ತಗೊಳ್ಳುತ್ತಾ ಶಂಕರ್ ದಯಾಳ್ ಶರ್ಮಾ ರವರು "ಜನಗಳಿಗೆ ಜವಾಬುದಾರರಾಗಿರುವುದು ನಮ್ಮ ರಾಜಕೀಯದ ಜೀವಾಳ. ಈ ರೀತಿ ಜನರ ಸೇವೆಯ ತಮಗೆ ವಿಧಿಸಿದ ಕರ್ತವ್ಯವನ್ನು ಅವರು ನಿಭಾಯಿಸುವಂತೆ ಒತ್ತಡ ತರಬೇಕು" ಎಂದರು.

"ಸುಧಾರಣೆ ಮತ್ತು ಪುನರ್‍ರಚನೆಗೆ ಏನಾದರೂ ಅರ್ಥ ಬರಬೇಕಾದರೆ ಅದರಿಂದ ಜನಸಾಮಾನ್ಯರಿಗೆ ಪ್ರಯೋಜನವಾಗಬೇಕು, ಅವರ ಜೀವನಮಟ್ಟ ಸುಧಾರಿಸಬೇಕು, ಅವರ ಹೊರೆಗಳು, ಆತಂಕಗಳು ಕಮ್ಮಿಯಾಗಬೇಕು. ಅಭಿವೃದ್ಧಿಯ ನಮ್ಮ ಪ್ರಯತ್ನಗಳಲ್ಲಿ ಆರ್ಥಿಕ, ಸಾಮಾಜಿಕ ಅಸಮಾನತೆಗಳನ್ನು ಕಮ್ಮಿ ಮಾಡುವುದು ನಮ್ಮ ಕೇಂದ್ರ ಗುರಿಯಾಗಿರಬೇಕು" ಎಂದು

ಸರಿಯಾದ ಮಾತು ಹೇಳಿದ ರಾಷ್ಟ್ರಪತಿಗಳು ವಿದೇಶಗಳಿಂದ ಪ್ರೇರಿತ ಭಯೋತ್ಪಾದನೆ, ಮಾದಕ ವಸ್ತುಗಳ ಕಳ್ಳಸಾಗಾಣಿಕೆಯೊಂದಿಗೆ ಹಾಗೂ ಸಂಘಟಿತ ಅಪರಾಧಗಳೊಂದಿಗೆ ದುಷ್ಟ ಸಂಬಂಧಗಳ ವಿರುದ್ಧ ಎಚ್ಚರಿಸಿದರು. ಅದೇ ವೇಳೆಗೆ "ನಾವು ಕ್ಷಿಪಣಿ ಮತ್ತು ಪರಮಾಣು ತಂತ್ರಜ್ಞಾನ ರಂಗಗಳಲ್ಲಿ ಭೇದ-ಭಾವ ಪೂರ್ಣ ಒಪ್ಪಂದಗಳ ವಿರುದ್ಧ ಎಂದೂ ತಲೆಬಾಗದೆ ನಮ್ಮ ವಿರೋಧವನ್ನು ಮುಂದುವರೆಸುತ್ತೇವೆ" ಎಂದೂ ಅವರು ಹೇಳಿದರು. ಸ್ವಾತಂತ್ರ್ಯಕ್ಕಾಗಿ ತಮ್ಮೆಲ್ಲವನ್ನು ಅರ್ಪಿಸಿದ ಜನಗಳ ಕನಸನ್ನು ನನಸು ಮಾಡೋಣ ಎಂದ್ನು ದೇಶಕ್ಕೆ ರಾಷ್ಟ್ರಪತಿಗಳು ಕರೆ ನೀಡಿದರು.

ಕನಸುಗಳನ್ನು ಮರೆತು ಬೆನ್ನು ತಟ್ಟಿಕೊಂಡ ಭಾಷಣ

ತದ್ವಿರುದ್ಧವಾಗಿ ಪ್ರಧಾನಮಂತ್ರಿಗಳ ಕೆಂಪು ಕೋಟೆ ಭಾಷಣ ತನ್ನ ಉದಾರೀಕರಣ ಆಡಳಿತವನ್ನು ವಿವಿಧ ರೀತಿಯಲ್ಲಿ ಸಮರ್ಥಿಸಿಕೊಳ್ಳುವಲ್ಲೇ ಸಮಯ ಕಳೆದ ಭಾಷಣ. ಸುಭಾಷ್ ಚಂದ್ರ ಬೋಸರನ ಜನ್ಮ ಶತಾಬ್ದಿಯ ಬಗ್ಗೆ ಪ್ರಾಸಂಗಿಕವಾಗಿ ಹೇಳಿದ ಒಂದೆರೆಡು ಮಾತು ಬಿಟ್ಟರೆ ಹಿನ್ನೋಟವೆಂಬುದು ಭಾಷಣದಲ್ಲಿ ಕಾಣಿಸಲೇ ಇಲ್ಲ. ರಾಯರಿಗೆ ಮತ್ತೆ ಈ ಸ್ವಾತಂತ್ರ್ಯೋತ್ಸವವೂ ತನ್ನ ಸರಕಾರದ ಅದರಲ್ಲೂ ಆರ್ಥಿಕ ರಂಗದ 'ಸಾಧನೆ'ಗಳ ಬಗ್ಗೆ ಬೆನ್ನು ತಟ್ಟಿ ಕೊಳ್ಳುವ ಒಂದು ವೇದಿಕೆಯಾಯಿತಷ್ಟೆ.

ಕಳೆದ ನಾಲ್ಕು ವರ್ಷಗಳಲ್ಲಿ ಒಂದಾದ ಮೇಲೊಂದರಂತೆ ಕಾಂಗ್ರೆಸ್ ಪಕ್ಷ ಮುಖ್ಯವಾಗಿ ಈ ನೀತಿಗಳಿಂದಾಗಿ ಅನುಭವಿಸಿದ ಚುನಾವಣಾ ಸೋಲುಗಳ ನಂತರ ಬಡತನ ನಿವಾರಣೆ ಸರಕಾರದ ಪ್ರಧಾನ ಆತಂಕ ಎಂದು ಘೋಷಿಸದೆ ಅವರಿಗೆ ವಿಧಿಯಿರಲಿಲ್ಲ. ಏಕೆಂದರೆ ರಾಯರ ಪ್ರಕಾರ ಇಡೀ ಆರ್ಥಿಕ ಉದಾರೀಕರಣದ ಉದ್ದೇಶ ಬಡವರ, ದುರ್ಬಲ ವಿಭಾಗಗಳ ಉದ್ಧಾರ!

ಈ ಬಡತನ ನಿರಕ್ಷರತೆ, ಹಸಿವು ಕಳೆದ ಕೆಲವು ವರ್ಷಗಳಿಂದ ಕಾಂಗ್ರೆಸ್‌ನ ಶಬ್ದಭಂಡಾರದಿಂದ ಕಾಣೆಯಾದ ಪದಗಳು. ಇವು ಮತ್ತೆ ಕಾಣಿಸಿಕೊಂಡಿರುವುದು ಚುನಾವಣೆಗಳು ಸಮೀಪಿಸಿತ್ತಿರುವುದರಿಂದ ಎಂಬುದು ಬೇರೆ ಮಾತು. ನಂಬಿದರೆ ನಂಬಿ ಬಿಟ್ಟರೆ ಬಿಡಿ- ರಾಯರ ಪ್ರಕಾರ ವಿದೇಶಗಳಿಂದ ಬಂಡವಾಳ ಆಕರ್ಷಿಸುವ, ದೇಶದ ಕೈಗಾರಿಕೀಕರಣದಲ್ಲಿ ಖಾಸಗಿಯವರನ್ನು ತೊಡಗಿಸುವ ಏಕೈಕ ಉದ್ದೇಶ ಸರಕಾರದ ಹಣವನ್ನು ಉಳಿಸಿ ಅದನ್ನು ಗ್ರಾಮೀಣ ಅಭಿವೃದ್ಧಿಗೆ, ಸಾಮಾಜಿಕ ಯೋಜನೆಗಳಲ್ಲಿ ಬಳಸುವುದು!

ಸರಕಾರೀ ನೀತಿಗಳು ಶ್ರೀಮಂತರಿಗ ಪ್ರಯೋಜನ ತರುವ ಅವರಿಗೆ ಅತ್ಯಾಧುನಿಕ ಭೋಗವಸ್ತುಗಳನ್ನು ಪಡೆಯಲು ಸಹಾಯ ಮಾಡಲು ಉದ್ದೇಶ ಹೊಂದಿರುವ ನೀತಿಗಳು ಎಂಬುದು ರಾಜಕೀಯ ದುರುದ್ದೇಶದಿಂದ ಹೂಡಿದ ಅಪಪ್ರಚಾರ ಎನ್ನುತ್ತಾ ಅವರು ಕಳೆದ ನಾಲ್ಕು ವರ್ಷಗಳಲ್ಲಿ ಸಮಾಜದ ಬಡವಿಭಾಗಗಳಿಗಾಗಿ ಹಲವು ಯೋಜನೆಗಳನ್ನು ಆರಂಭಿಸಲಾಯಿತು ಎಂದು ಹೇಳಿಕೊಂಡರು. ಶೇ. 80 ಬಂಡವಾಳದ ಹೂಡಿಕೆಯನ್ನು ಜನಗಳ ಮೂಲಭೂತ ಅಗತ್ಯಗಳನ್ನು ಈಡೇರಿಸಲು ಹಾಗೂ ಉದ್ಯಮಗಳಿಗೆ ಬೇಕಾದ ಮೂಲಭೂತ ಪರಿಕರಗಳನ್ನು ಬೆಳೆಸಲು ಬಳಸಲಾಗಿದೆ, ಗ್ರಾಮೀಣ ಅಭಿವೃದ್ಧಿ ಹಾಗೂ ಬಡತನ ನಿರ್ಮೂಲನ ಕಾರ್ಯಕ್ರಮಗಳಿಗೆ ನೀಡಿದ ಹಣದ ಪ್ರಮಾಣ ಹೆಚ್ಚಿದೆ ಎಂದೆಲ್ಲಾ ಹೇಳಿಕೊಂಡರು.


ಬಡತನ ಹೆಚ್ಚಿತೇಕೆ ರಾಯರೇ?

ರಾಯರು ಹೇಳಿಕೊಂಡ ಈ ಮಾತುಗಳೆಲ್ಲಾ ನಿಜವಾದರೆ ಸರಕಾರವೇ ನಿರ್ದಿಷ್ಟಪಡಿಸಿದ ಬಡತನ ರೇಖೆಯಿಂದ ಕೆಳಗೆ ಬದುಕು ಸಾಗಿಸುತ್ತಿರುವವರ ಸಂಖ್ಯೆ ಏಕೆ ಹೆಚ್ಚಾಯಿತು? 1990-91ರಲ್ಲಿ ಗ್ರಾಮೀಣ ಪ್ರದೇಶಗಳ 36.55ಶೇ. ಹಾಗೂ ನಗರ ಪ್ರದೇಶಗಳ 32.43ಶೇ. ಸರಕಾರೀ ಬಡತನ ರೇಖೆಗಿಂತ ಕೆಳಗಿಳಿದಿದ್ದರು. 1993ರಲ್ಲಿ ಇದು ಅನುಕ್ರಮವಾಗಿ 48.07 ಮತ್ತು 33.07 ಆಗಿದೆಯೇಕೆ?

ಕಳೆದ ನಾಲ್ಕು ವರ್ಷಗಳಲ್ಲಿ ವಿದೇಶಗಳಿಂದ ಒಟ್ಟು 68 ಸಾವಿರ ಕೋಟಿ ರೂಪಾಯಿಗಳು ಬಂಡವಾಳ ಬಂತು ಎಂದು ರಾಯರು ಹೇಳಿಕೊಂಡಿದ್ದಾರೆ. ನಿಜವಾಗಿ ಬಂದಿರುವುದು ಕೇವಲ 1.8 ಶತಕೋಟಿ ಡಾಲರುಗಳು. ಅದರಲ್ಲೂ ಬಹುಪಾಲು "ಬಿಸಿ ಹಣ" ಎಂದರೆ ಇಲ್ಲಿನ ಶೇರು ಮಾರುಕಟ್ಟೆಯಲ್ಲಿ ತೊಡಗಿಸಿದ ಹಣ. ಇದು ನಮ್ಮ ವಿದೇಶೀ ವಿನಿಮಯ ಭಂಡಾರವನ್ನೇನೋ ಹೆಚ್ಚಿಸುತ್ತದೆ. ಆದರೆ ಅದನ್ನು ದೇಶದ ಕೈಗಾರಿಕಾ ಉತ್ಪಾದನೆ ಹೆಚ್ಚಿಸಲು ಬಳಸಲು ಸಾಧ್ಯವಿಲ್ಲ. ಯಾವಾಗ ಬೇಕಾದರೂ ವಾಪಾಸು

ವಿದೇಶಗಳಿಗೆ ಹಾರಿ ಹೋಗಿ ಮೆಕ್ಸಿಕೋ ರೀತಿಯ ಬಿಕ್ಕಟ್ಟು ಸೃಷ್ಟಿಸಬಹುದಾದ ಹಣ ಅದು.

ರಾಯರು ರೇಷನ್ ವ್ಯವಸ್ಥೆಯನ್ನು ಸುಧಾರಿಸುವ ಮಾತಾಡಿದರು. ಆದರೆ ಕಳೆದ ನಾಲ್ಕು ವರ್ಷಗಳಲ್ಲಿ ಇದನ್ನು ಕಳಚಿಹಾಕುವ ಕೆಲಸ ವ್ಯವಸ್ಥಿತ ರೀತಿಯಲ್ಲಿ ನಡೆದಿದೆ. ರೇಷನ್ ಬೆಲೆಗಳನ್ನು ವಿಪರೀತ ಹೆಚ್ಚಿಸಿ ಅವುಗಳನ್ನು ಸುಮಾರಾಗಿ ಈಗ ಹೊರಗಿನ ಮಾರುಕಟ್ಟೆ ಬೆಲೆಗಳ ಮಟ್ಟಕ್ಕೇ ತರಲಾಗಿದೆ. ಸಹಜವಾಗಿ ಇದರಿಂದಾಗಿ ರೇಶನ್ ಸಾಮಗ್ರಿಗಳನ್ನು ಕೊಳ್ಳುವ ಪ್ರಮಾಣ ಇಳಿದಿದೆ. 1991-92ರಲ್ಲಿ ರೇಶನ್ ಅಂಗಡಿಗಳಿಂದ 84.09ಶೇ. ಗೋಧಿಯನ್ನು ಜನ ಖರೀದಿಸಿದ್ದಾರೆ. 1994ರ ಮೊದಲ ಆರು ತಿಂಗಳಲ್ಲಿ ಕೇವಲ 47ಶೇ. ಗೋಧಿಯನ್ನು ಜನ ಖರೀದಿಸಿದ್ದಾರೆ. ಸರಕಾರದ ಗೋದಾಮುಗಳಲ್ಲಿ 3.2 ಕೋಟಿ ಟನ್ ಆಹಾರ ಧಾನ್ಯಗಳ ದೊಡ್ಡ ದಾಸ್ತಾನಿದೆ ಎಂದು ಪ್ರಧಾನ ಮಂತ್ರಿಗಳು ಬೆನ್ನು ತಟ್ಟಿಕೊಂಡಿದ್ದಾರೆ. ಆದರೆ ದುರಂತವೆಂದರೆ ಇಷ್ಟೊಂದು ಅಪಾರ ಧಾನ್ಯ ಸಂಗ್ರಹ ಇದ್ದರೂ ದೇಶದ ಹಲವೆಡೆಗಳಿಂದ ಹಸಿವಿನಿಂದ ಜನ ಸತ್ತಿರುವ ಸುದ್ದಿಗಳು ಬರುತ್ತಿವೆ. ಯಾರ ಪ್ರಯೋಜನಕ್ಕಾಗಿ ಈ ಅಪಾರ ದಾಸ್ತಾನು?



'ಟೈಮ್ಸ್ ಆಫ್ ಇಂಡಿಯಾ'ದಲ್ಲಿ ಪೊನ್ನಪ್ಪ

ತನ್ನ ಸಾಧನೆಗಳಲ್ಲಿ ರಾಯರು ಸಾರ್ವಜನಿಕ ಆಸ್ತಿಗಳ ಲೂಟಿ, ಸಾರ್ವಜನಿಕ ವಲಯದ ಉದ್ದಿಮೆಗಳ ಶೇರುಗಳನ್ನು ಮಾರಿತಿಂದದ್ದು, ಶೇರು ಮತ್ತಿತರ ಹತ್ತು ಹಲವು ಹಗರಣಗಳು, ಆರೋಗ್ಯ ಶಿಕ್ಷಣದ ಜವಾಬ್ದಾರಿಯಿಂದ ಸರಕಾರ ನುಣುಚಿಕೊಂಡದ್ದು ಇತ್ಯಾದಿಗಳನ್ನು ಹೇಳಿಕೊಳ್ಳಬಹುದಿತ್ತು. ಸಹಜವಾಗಿಯೇ ಹೇಳಿಕೊಳ್ಳಲಿಲ್ಲ. ಭೂಸುಧಾರಣೆಯ ಬಗ್ಗೆ ಚಕಾರವೆತ್ತಲಿಲ್ಲ. ಅದೂ ಸಹಜವೇ. ಏಕೆಂದರೆ ಐಎಂಎಫ್/ವಿಶ್ವ ಬ್ಯಾಂಕ್ ಮತ್ತು ವಿದೇಶೀ ಬಂಡವಾಳ ಹೂಡಿಕೆದಾರರು ಭೂ ಸುಧಾರಣೆಗಳನ್ನು ರದ್ದು ಮಾಡಿ ಭೂಮಿತಿಗಳನ್ನೆಲ್ಲಾ ತೆಗೆದು ಹಾಕಿ ಎಂದು ಆದೇಶ ನೀಡುತ್ತಿದ್ದಾರಲ್ಲ!

ಸಮಾನ ನಾಗರಿಕ ಸಂಹಿತೆಯ ಪ್ರಶ್ನೆಯೇ ಏಳುವುದಿಲ್ಲ ಎಂದು ಮತ್ತೊಮ್ಮೆ ಒತ್ತಿ ಹೇಳುವುದೇ ಒಳ್ಳೆಯದು ಎಂದು ಪ್ರಧಾನ ಮಂತ್ರಿಗಳು ಭಾವಿಸಿದಂತಿದೆ. ಸುಪ್ರೀಂ ಕೋರ್ಟು ಮಧ್ಯಪ್ರವೇಶಿಸಿ ಸಂವಿಧಾನದ ನಿರ್ದೇಶಕ ಸೂತ್ರಗಳ ಬಗ್ಗೆ ನೆನಪಿಸಲೇಬೇಕಾಗಿ ಬಂತಲ್ಲಾ ಎಂದು ಅವರಿಗೆ ಖೇದವಿದ್ದಂತಿಲ್ಲ. ಅಲ್ಪಸಂಖ್ಯಾತರಲ್ಲಿ ತಮ್ಮ ಬಗ್ಗೆ ವಿಶ್ವಾಸ ಇಂಗಿ ಹೋಗಿದ್ದು, ಅದನ್ನು ಹೇಗಾದರೂ ಮತ್ತೆ ಪಡೆಯುವ ಏನಾದರೂ ಪ್ರಯತ್ನ ಮಾಡಬೇಕಲ್ಲ!

ಇಲ್ಲಿ ಯಾವುದೇ ಧರ್ಮದ ವ್ಯವಹಾರಗಳಲ್ಲಿ ಮಧ್ಯಪ್ರವೇಶಿಸುವ ಪ್ರಶ್ನೆಯಿಲ್ಲ. ಇಲ್ಲಿರುವ ಪ್ರಶ್ನೆ ಭಾರತೀಯ ನಾಗರಿಕ ಸ್ಥಾನಮಾನದ್ದು, ಮುಖ್ಯವಾಗಿ ಎಲ್ಲಾ ಕೋಮುಗಳ ಮಹಿಳೆಯರ ಸ್ಥಾನಮಾನದ್ದು, ವಾರಸುದಾರಿಕೆಯ ಹಕ್ಕು ಇತ್ಯಾದಿಗಳ ಕುರಿತಾದ ನೀತಿ-ನಿಯಮಗಳು ಎಲ್ಲಾ ಕೋಮುಗಳಲ್ಲಿ ಮಹಿಳೆಯರ ವಿರುದ್ಧ ಪಕ್ಷಪಾತದಿಂದ ಕೂಡಿವೆ ಎಂಬ ಪ್ರಶ್ನೆ ಇಲ್ಲಿ ಗಮನಿಸಬೇಕಾದದ್ದು.

ನರಸಿಂಹರಾಯರ ಭಾಷಣದಲ್ಲಿ ಎಲ್ಲರೂ ಒಪ್ಪಬಹುದಾಗಿದ್ದ ಏಕೈಕ ವಿಷಯವೆಂದರೆ ಕಾಶ್ಮೀರದಲ್ಲಿ ಪಾಕಿಸ್ತಾನದ ಹಸ್ತಕ್ಷೇಪ. ಇಲ್ಲಿಯೂ ಪ್ರಧಾನಿಗಳು ಪರಿಸ್ಥಿತಿಯನ್ನು ಹೇಗೆ ಎದುರಿಸಲಾಗುವುದು ಎಂದು ಮಾತ್ರ ಹೇಳದೆ ನುಣುಚಿಕೊಂಡರು.

ಇಂತಹ ಸಪ್ಪೆ ಭಾಷಣ ಸ್ಫೂರ್ತಿ ನೀಡುವುದಂತು ಒತ್ತಟ್ಟಿಗಿರಲಿ, ಉತ್ಸಾಹವನ್ನೂ ನೀಡದಿದ್ದರೆ ಆಶ್ಚರ್ಯವೇನು? ಆದ್ದರಿಂದ ರಾಷ್ಟ್ರೀಯ ದೈನಿಕಗಳು ಈ ಭಾಷಣವನ್ನು ಟೀಕಿಸಿದವು. ಅಪಹಾಸ್ಯ ಮಾಡಿದವು, ಕೆಲವಂತೂ ರಾಯರ ಕೆಂಪು ಕೋಟೆ ಭಾಷಣವನ್ನು ತಮಾಷೆಯೆಬ್ಬಿಸಿದವು. ■

ಹೊಸಬಾಳಿನ ಗೀತೆ

"ಸರ್ವರಿಗೆ ಸಮಬಾಳು! ಸರ್ವರಿಗೆ ಸಮಪಾಲು!
ಎಂಬ ನವಯುಗವಾಣಿ ಘೋಷಿಸಿದೆ ಕೇಳಿ!
ಯುಗಯುಗದ ದಾರಿದ್ರ್ಯಭಾರದಿಂದ ಬೆನ್ ಬಾಗಿ
ಗೋಳಿಡುವ ಬಡಜನರೆ, ಏಳಿರೈ ಏಳಿ!

ಶ್ರೀಮಂತರಡಿಗಳಡಿಹುಡಿಯಲ್ಲಿ ಹೊರಳಾಡಿ
ಕುಸಿದು ಕುಗ್ಗಿದರೆಲ್ಲ ಸಂತಸವ ತಾಳಿ!
ಕಂಗೆಟ್ಟ ಸೋದರರೆ, ಬರುತಿಹಳು ಕಾಣಿರೈ
ದಾನವರ ಸೀಳಿ ಅದೊ ವಿಪ್ಲವದ ಕಾಳಿ!

ಇಂದ್ರ ಸಿಂಹಾಸನಕ್ಕೆ ಬಂದಿಹುದು ಕೊನೆಗಾಲ!
ಕಳಚಿ ಬೀಳುವುದಿಂದು ನಂದನದ ಬೇಲಿ!
ದೇವತೆಗಳಶ್ಲೀಲಮೋದಕ್ಕೆ ಬಲಿಯಾಗಿ
ಗೋಚರಿಪುದಲ್ಲಿ ಮರ್ತ್ಯರ ಕೃಷಿಯ ಕೇಲಿ!

ದ್ರವ್ಯಾನುಕೂಲತೆಯ ಜಾತಿಯಾ ನೀತಿಯಾ
ಪಕ್ಷಪಾತವನೆಲ್ಲ ಕೊಚ್ಚುವುದು ಬುದ್ಧಿ;
ಮತ್ತೊಂದು ನಾಕವನೆ ನೆಯ್ಯುವೆವು ಲೋಕದಲಿ
ದೇವರನ್ಯಾಯವನು ಮಾನವರೆ ತಿದ್ದಿ!

ಕೈಲಾಗದವರೆಂಬ ನಾವು ಕೀಳೆಂದೆಂಬ
ಹಣೆಬರಹವೆಂದೆಂಬ ಮೂಢತೆಯ ನೀಗಿ
ಯುಗಚಕ್ರ ಪರಿವರ್ತನೆಗೆ ಸರ್ವರೂ ಸೇರಿ
ಹೆಗಲು ಕೊಟ್ಟೊಮ್ಮನಸು ಮಾಡಿ ನೆರವಾಗಿ!

ಮೋಹಿನಿಗೆ ಮರುಳಾಗಿ ಮೂರ್ಖ ದಾನವರೆಲ್ಲ
ತಮ್ಮ ಗೆಯ್ಮೆಯ ಪಾಲನನ್ಯರಿಗೆ ತೆತ್ತು
ಸತ್ತಂತೆ ಸಾಯದಿರಿ: ಸಂಸ್ಕೃತಿಯ ಹೆಸರಿಂದೆ
ಶ್ರೀಮಂತರೊಡ್ಡುವಾ ಬಲೆ ನಿಮಗೆ ಮೃತ್ಯು!

ಇಂದು ನೆತ್ತರು ಚೆಲ್ಲಿ ಮುಂದೆ ಬಹ ಮಕ್ಕಳಿಗೆ
ಹೊಟ್ಟೆಗನ್ನವ, ಮೈಗೆ ಬಟ್ಟೆಯನು ನೀಡಿ.
ಇಂದು ನೋವಾದರೂ ಇಂದು ಸಾವಾದರೂ
ಮುಂದೆ ಬಾಳಿಗೆ ಸೊಗಸು ನೆಮ್ಮದಿಯ ಮಾಡಿ.

ಇಂದು ನೀವೇಳದಿರೆ ಕೆಚ್ಚದೆಯ ತಾಳದಿರೆ
ನಿಮ್ಮವರ ಬಾಳು ಎಂದೆಂದಿಗೂ ಹೇಡಿ!
"ಇಂದು ರಕ್ತದ ಬಿಂದು ಮುಂದೆ ಸೌಖ್ಯದ
ಸಿಂಧು!"
ಎಂದು ಸಾಹಸಕೇಳಿ, ಹಿಂಜರಿಯಬೇಡಿ!

- ಕುವೆಂಪು

- ಪಿ.ರಾಮಚಂದ್ರರಾವ್

ಕರ್ನಾಟಕದ ರಾಜಕೀಯವನ್ನು ಸುಧಾರಿಸುವುದು ಹೇಗೆ?

ಕರ್ನಾಟಕದ ರಾಜಕೀಯ ಈಗ ಮೂರು ಕೆಟ್ಟ ಪರಂಪರೆಗಳಿಂದ ಪೀಡಿತವಾಗಿದೆ. ಈ ಪಿಡುಗುಗಳೇನು, ನಿಜವಾದ ಅರ್ಥದಲ್ಲಿ ಪ್ರಜಾಪ್ರಭುತ್ವವೆನಿಸಲು ರಾಜಕೀಯ ಜನಗಳ, ರಾಜ್ಯದ ಅಭಿವೃದ್ಧಿ ಸಾಧಿಸಬೇಕಾದರೆ ಏನು ಮಾಡಬೇಕು?

ಕರ್ನಾಟಕವು ತೀವ್ರ ಅಭಿವೃದ್ಧಿಯನ್ನು ಸಾಧಿಸುತ್ತಾ ಮುನ್ನಡೆಯಬೇಕಾದರೆ ಕರ್ನಾಟಕದ ರಾಜಕೀಯ ಕ್ಷೇತ್ರದಲ್ಲಿ ಬಹಳಷ್ಟು ಬದಲಾವಣೆಯಾಗಬೇಕಾಗಿದೆ. ಈಗಿನ ರಾಜಕೀಯ ಯಾವ ದೃಷ್ಟಿಯಿಂದ, ಯಾರ ದೃಷ್ಟಿಯಿಂದ ಹೇಗೆ ನಡೆಯುತ್ತಿದೆ ಎಂಬುದನ್ನು ವಿಶ್ಲೇಷಿಸಬೇಕು. ಆಗ ಮಾತ್ರ ಅದನ್ನು ಸರಿಯಾದ ದಿಕ್ಕಿನಲ್ಲಿ ಬೆಳೆಸಲು ಸಾಧ್ಯವಾಗಬಹುದು.

ಕರ್ನಾಟಕದ ರಾಜಕೀಯವು ಇಂದು ಮೂರು ಕೆಟ್ಟ ಪರಂಪರೆಗಳಿಂದ ಪೀಡಿತವಾಗಿದೆ. ಒಂದು - ವ್ಯಕ್ತಿಗತವಾದ ರಾಜಕೀಯ; ಎರಡು - ಮತೀಯ ರಾಜಕೀಯ; ಮೂರು - ಜಾತೀಯ ರಾಜಕೀಯ. ಜನತೆಯ ಸಮಸ್ಯೆಗಳನ್ನು ಪರಿಹರಿಸುವ ದಿಕ್ಕಿನಲ್ಲಿ, ರಾಜ್ಯವು ಕೈಗಾರಿಕೆ ಮತ್ತು ಕೃಷಿ ಕ್ಷೇತ್ರಗಳಲ್ಲಿ ತೀವ್ರ ರೀತಿಯ ಬೆಳವಣಿಗೆಯನ್ನು ಸಾಧಿಸುವುದಕ್ಕೆ ಪೂರಕವಾಗಿರುವ ಹಾಗೂ ಜನಸಾಮಾನ್ಯರು ಹೆಚ್ಚು ಹೆಚ್ಚು ರಾಜಕೀಯದಲ್ಲಿ ಆಸಕ್ತಿ ತಳೆದು ರಾಜ್ಯದ ಸರ್ವತೋಮುಖ ಅಭಿವೃದ್ಧಿ ಕಾರ್ಯಗಳಲ್ಲಿ ಹೆಚ್ಚೆಚ್ಚಾಗಿ ತಮ್ಮನ್ನು ತೊಡಗಿಸುವಂತಾಗುವ ದಿಕ್ಕಿನಲ್ಲಿ ಧೋರಣೆಗಳನ್ನು ರೂಪಿಸಿ, ಆ ಆಧಾರದಲ್ಲಿ ಪ್ರಾಮಾಣಿಕ ಪೈಪೋಟಿ ನಡೆಸುವಂತಹ ರಾಜಕೀಯದ ಅಭಾವವು ಕರ್ನಾಟಕದಲ್ಲಿ ತೀವ್ರ ಎದ್ದು ತೋರುತ್ತದೆ.

ಇಂದಿನ ರಾಜಕೀಯ ಧುರೀಣರು ಬಾಯಿಯಲ್ಲಿ 'ನಮ್ಮದು ವಿಶ್ವದಲ್ಲೇ ಅತೀ ದೊಡ್ಡ ಪ್ರಜಾಪ್ರಭುತ್ವ' ಎಂದು ಕೊಚ್ಚಿಕೊಳ್ಳುತ್ತಾರೆ. ಆದರೆ, ಅವರು ಈ ಪ್ರಜಾಪ್ರಭುತ್ವವನ್ನು ಬೆಳೆಸುವುದರಲ್ಲಿ 'ಜನತೆಯು ಜನಸಮೂಹಗಳು' ಸಕ್ರಿಯ ಪಾತ್ರವಹಿಸುವ ಬಗ್ಗೆ ಚಕಾರ ಮಾತನಾಡುವುದೂ ಇಲ್ಲ, ಅಂತಹ ರೀತಿಯಲ್ಲಿ ತಮ್ಮ ರಾಜಕೀಯ ಚಟುವಟಿಕೆಗಳನ್ನು ನಡೆಸುತ್ತಿಲ್ಲ. "ಜನತೆಗಾಗಿ, ಜನತೆಯಿಂದ ಮತ್ತು ಜನತೆಯ ಪ್ರಜಾಪ್ರಭುತ್ವ" ಎಂಬ ಸರ್ವಸಮ್ಮತ ಪ್ರಜಾಪ್ರಭುತ್ವದ ವಿವರಗಳನ್ನು ತಿಳಿದೂ ತಿಳಿದು ಪ್ರಜಾಪ್ರಭುತ್ವದಲ್ಲಿ ಉದ್ದಕ್ಕೂ ಜನತೆಯ ಪಾತ್ರವನ್ನು ಕರ್ನಾಟಕದ ರಾಜಕೀಯದಲ್ಲಿ ಕಡೆಗಣಿಸಲಾಗುತ್ತಿದೆ.

ವ್ಯಕ್ತಿಗತವಾದ ರಾಜಕೀಯ

ಕರ್ನಾಟಕದ ಎಲ್ಲಾ ಪ್ರಮುಖ ಪತ್ರಿಕೆಗಳ ಮೇಲೆ ದಿನನಿತ್ಯ ಕಣ್ಣು ಹರಿಸಿದರೆ ಅದರಲ್ಲಿ ಕಂಡು ಬರುವುದು ಏನು? ವ್ಯಕ್ತಿಗಳ ಸ್ವಗತ ಮತ್ತು ವ್ಯಕ್ತಿಗಳ ಕುರಿತು ಗುಣಗಾನ. ದೇವೇಗೌಡ, ಹೆಗ್ಡೆ, ಯಡಿಯೂರಪ್ಪ, ರಮೇಶ, ನಂಜುಂಡಸ್ವಾಮಿ, ವಾಟಾಳ್ ನಾಗರಾಜ್, ಇತ್ಯಾದಿ ಇತ್ಯಾದಿ. ದೇವೇಗೌಡರು ಮಣ್ಣಿನ ಮಗ. ಆದ್ದರಿಂದ ಎಂದೇ ಮಾತು ಶುರುವಾಗುತ್ತದೆ. ಹೌದು, ದೇವೇಗೌಡರು ಮಣ್ಣಿನ ಮಗ. ಹಾಗಾದರೆ, ಇತರರು ಮಣ್ಣಿನ ಮಕ್ಕಳಲ್ಲವೇ?

ಹೆಗ್ಡೆ ಮುತ್ಸದ್ದಿ, ಬುದ್ಧಿವಂತ.... ಅವರು ಹೇಳಿದ ಹಾಗೆ ಎಲ್ಲರೂ ಕೇಳಿದರೆ ಅಥವಾ ಅವರು ರಾಜಕೀಯದಲ್ಲಿ ಪ್ರಮುಖ ಪಾತ್ರ ವಹಿಸಿದರೆ, ಅವರು ರಾಜಕೀಯ ಸನ್ಯಾಸದಿಂದ ಹೊರಗೆ ಬಂದರೆ ಕರ್ನಾಟಕದ ರಾಜಕೀಯ ಯಾಕೆ ಇಡೀ ದೇಶದ ರಾಜಕೀಯನೇ ತೀವ್ರ ಬದಲಾವಣೆಯಾಗುವುದು ಎಂಬಿತ್ಯಾದಿ ವ್ಯಾಖ್ಯಾನಗಳು. ಯಡಿಯೂರಪ್ಪನವರು ರಾಜ್ಯದ ಎಲ್ಲಾ ವಿಷಯಗಳ ಕುರಿತು ಬೆಳಿಗ್ಗೆ, ಮಧ್ಯಾಹ್ನ, ರಾತ್ರಿ ಹೇಳಿಕೆಗಳನ್ನು ಕೊಡುತ್ತಾರೆ, ಎಲ್ಲಾ ದುರಂತಗಳ ಬಗ್ಗೆ ಕಣ್ಣೀರು ಬಿಡುತ್ತಾರೆ, ತಮ್ಮ ಪಕ್ಷದಿಂದ ಹಣ ಸುರಿಯುತ್ತಾರೆ, ವಿಧಾನಸಭೆಯಲ್ಲಿ ಎಲ್ಲಾ ಎಲ್ಲೆಗಳನ್ನು ಮೀರಿ ತಮ್ಮ ಅಭಿಪ್ರಾಯಗಳನ್ನು ಅದೆಷ್ಟೇ ಅವಹೇಳನಕರವಾಗಿದ್ದರೂ ಸಭ್ಯ ಅಸಭ್ಯ ಭಾಷೆಯಲ್ಲಿ ಅಭಿವ್ಯಕ್ತಗೊಳಿಸುತ್ತಾರೆ ಇತ್ಯಾದಿ ಇತ್ಯಾದಿ. ಪ್ರೊಫೆಸರ್ ನಂಜುಂಡಸ್ವಾಮಿ ಒಬ್ಬರೇ ಹೇಗೆ ವೀರಾವೇಶದಿಂದ ವಿದೇಶೀ ಕಂಪನಿಗಳ ವಿರುದ್ಧ ಹೋರಾಡುತ್ತಿದ್ದಾರೆ ಎಂಬಿತ್ಯಾದಿ.

ಗೌಡರು, ಹೆಗ್ಡೆಯವರು, ಪ್ರೋಫೆಸರು, ಯೆಡಿಯೂರಪ್ಪನವರು ರಾಜಕೀಯದ ಅಗ್ರ ಸ್ಥಾನದಲ್ಲಿ ಇದ್ದರೆ, ರಾಜ್ಯದ ರಾಜಕೀಯ ಸುಧಾರಣೆಗೆ ಅದರ ಫಲವಾಗಿ ರಾಜ್ಯದ ಅಭಿವೃದ್ಧಿ ಸಾಧನೆಗೆ ಇನ್ನೇನು ಬೇಕು.

ಆಳುವ ವರ್ಗದ ರಾಜಕೀಯದ ಮತ್ತೊಂದು ಮುಖ


ಇದು ನಮ್ಮ ರಾಜಕೀಯವನ್ನು ನಿಜವಾಗಿ ತಪ್ಪು ದಾರಿಯಲ್ಲಿ ಕೊಂಡೊಯ್ಯುವ ಬಂಡವಾಳಶಾಹಿ ಭೂಮಾಲಕ ವರ್ಗಗಳ ಹುನ್ನಾರು ಅಲ್ಲದೆ ಬೇರೇನು ಅಲ್ಲ. ಮುಖ್ಯವಾಗಿ, ಈ ಎರಡು ವರ್ಗಗಳು ನಮ್ಮ ರಾಜ್ಯದ ರಾಜಕೀಯವು ತಮ್ಮ ವರ್ಗಗಳ ಆರ್ಥಿಕ ಹಿತಗಳನ್ನು ರಕ್ಷಿಸುತ್ತಾ ನಿರಂತರವಾಗಿ ಹೋಗುವಂತೆ ಹೆಣೆದಿರುವ ಹುನ್ನಾರ. ಜನರ ನಿಜವಾದ ಸಮಸ್ಯೆಗಳಿಂದ ದೂರಕ್ಕೆ ಜನತೆಯ ದೃಷ್ಟಿಯನ್ನು ಬದಲಾಯಿಸುವ ಹುನ್ನಾರ. ರಾಜ್ಯದ ಅಭಿವೃದ್ಧಿಗಾಗಿ ರಾಜಕೀಯವು ಮಾಡಬೇಕಾದ ತನ್ನ ಕರ್ತವ್ಯಗಳ ಕಡೆಗೆ ಜನರ ದೃಷ್ಟಿ ಹರಿಯದಂತೆ ಮಾಡುವ ಹುನ್ನಾರ. ಯಾವ ಪಕ್ಷದ ಯಾವ ಧೋರಣೆ ನಿಜವಾಗಿ ಬಹುಸಂಖ್ಯೆಯ ಜನಸಾಮಾನ್ಯರ ಹಿತಗಳನ್ನು ರಕ್ಷಿಸುತ್ತದೆ ಮತ್ತು ಸಾಧಿಸುತ್ತದೆ, ಯಾವ ಪಕ್ಷದ ಯಾವ ಧೋರಣೆ ನಿಜವಾಗಿ ಕೆಲವೇ ಕೆಲವು ಸ್ವಾರ್ಥ ಅಲ್ಪ ಸಂಖ್ಯೆಯ ವಿಭಾಗಗಳ ಹಿತಗಳನ್ನು ಮಾತ್ರ ಮಾಡುತ್ತಿವೆ ಎಂಬುದರ ಕುರಿತು ಸರಿಯಾದ ತಿಳುವಳಿಕೆ ತಮ್ಮ ಅನುಭವಗಳಿಂದ ಜನತೆಗೆ ಬಾರದಂತೆ ಮಾಡುವ ಹುನ್ನಾರ. ಹೌದು. ರಾಜಕೀಯದಲ್ಲಿ ವ್ಯಕ್ತಿಗಳಿಗೆ ಪಾತ್ರವಿದೆ. ಅದು ಗೌಣ. ಅದು ಪ್ರಮುಖವಲ್ಲ, ಅವರು ಪಕ್ಷಗಳ ವಕ್ತಾರರಾಗಿದ್ದು ಆ ಪಕ್ಷಗಳ ಧೋರಣೆಗಳನ್ನು ಹೇಗೆ ಜನತೆಗೆ ಅನುಕೂಲಕರವಾಗಿ ಕೊಂಡೊಯ್ಯುತ್ತಾರೆ ಎಂಬುದರ ಮೇಲೆ ಅದು ಹೊಂದಿಕೊಂಡಿದೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಇದನ್ನು ಸಂಪೂರ್ಣವಾಗಿ ಮುಚ್ಚಿಡಲಾಗುತ್ತಿದೆ. ಜನರ ಕಣ್ಣೊರೆಸುವ ಕಾರ್ಯ ನಿರಂತರವಾಗಿ ನಡೆಯುತ್ತಿದೆ. ಕಾಂಗ್ರೆಸ್ ಪಕ್ಷವು 1952ರಿಂದ ಮಾಡುತ್ತಾ ಬರಲಿಲ್ಲವೇ? ನೆಹರೂ, ಇಂದಿರಾ, ರಾಜೀವಗಾಂಧಿ ಈಗ ಪಿ.ವಿ.ನರಸಿಂಹರಾಯರು. ಇವರಿಂದ ದೇಶ ಉದ್ಧಾರವಾಗುತ್ತದೆ ಎಂದು ಹೇಳುತ್ತಾ ಬರಲಿಲ್ಲವೇ?

ಮತೀಯ ರಾಜಕೀಯ

ದಿನ ಬೆಳಗಾದರೆ ಬಿಜೆಪಿ, ವಿಶ್ವ ಹಿಂದೂ ಪರಿಷತ್, ಭಜರಂಗ ದಳ, ಆರ್.ಎಸ್.ಎಸ್. ಇವರ ಧುರೀಣರ ಮತೀಯತೆಯನ್ನು ಆಧರಿಸಿರುವ ಹೇಳಿಕೆಗಳು. ಜಾಫರ್ ಷರೀಫರ ಭೂಮಿಯ ಹಗರಣ-ಯೆಡಿಯೂರಪ್ಪನವರು 'ಜಾಫರ್ ಶರೀಫರು ಮುಸ್ಲಿಂ ಆದುದರಿಂದ ಹಗರಣ ಎತ್ತುತ್ತಾರೆ. ಅದೇ ಯೆಡಿಯೂರಪ್ಪನವರು ಇತರರು ಅಂತಹುದೇ ಭೂಮಿಯ ಹಗರಣ ಮಾಡಿರುವ ಹಲವಾರು ಉದಾಹರಣೆಗಳನ್ನು ಎತ್ತುವುದಿಲ್ಲ, ಯಾಕೆ? ಮುಸ್ಲಿಂ ವಿರೋಧದ ರಾಜಕೀಯ ಅವರದು. ಈದ್ಗಾ ಮೈದಾನ, ಬೆಂಗಳೂರು, ಹುಬ್ಬಳ್ಳಿ, ಮುಧೋಳ, ಮಂಗಳೂರು ಇದರ ಕುರಿತು ಒಂದಲ್ಲ ಒಂದು ರೀತಿಯ ತಕರಾರು. ಯೆಡಿಯೂರಪ್ಪನವರಿಗೆ ಅದೇ ವೇಳೆ ಹಿಂದೂ ಮಠಗಳಲ್ಲಿ, ಮಠಗಳ ಆಸ್ತಿ ಪಾಸ್ತಿಯ ವಿಷಯದಲ್ಲಿ ಅಲ್ಲಿ ಎಷ್ಟೊಂದು ಅನ್ಯಾಯವಾಗುತ್ತಿದ್ದರೂ ಅದು 'ವಸ್ತು'ವೇ ಅಲ್ಲ. ಬಾಯಿ ಎತ್ತಿದರೆ, ಅಯೋಧ್ಯೆಯಲ್ಲಿ ರಾಮಮಂದಿರ ಕಟ್ಟಲು ಬಾಬ್ರಿ ಮಸೀದಿ ಅಡ್ಡಿ, ಅದನ್ನು ತೆಗೆಯಿರಿ, ತೆಗೆದೇ ಬಿಟ್ಟರು, ಕಾನೂನು ಧೂಳೀಪಟವಾಗಲಿ; ನಮ್ಮ ಮುಸ್ಲಿ ವಿರೋಧ ರಾಜಕೀಯಕ್ಕೆ ಜಯ ಸಿಗಲಿಲ್ಲವೇ? ನಮಗೆ ಮತಗಳು ಸಿಗಲಿಲ್ಲವೇ? ಎಲ್ಲಿಯೋ ಮೂಲೆಗೆ ಬಿದ್ದಿದ್ದವರನ್ನು ಈ ರಾಮಮಂದಿರ-ಬಾಬ್ರಿ ಮಸೀದಿ ವಿವಾದ ಎದ್ದು ರಾಜಕೀಯದಲ್ಲಿ ಮುಂದಿನ ಸಾಲಿಗೆ ತಂದು ನಿಲ್ಲಿಸಲಿಲ್ಲವೇ? ಇನ್ನು ಕಾಶೀ ವಿಶ್ವನಾಥ ದೇವಸ್ಥಾನದ ಒತ್ತಿಗೆ ಇರುವ ಮಸೀದಿ. ಮಥುರಾದಲ್ಲಿ ಶ್ರೀ ಕೃಷ್ಣ ದೇವಸ್ಥಾನದ ಬಳಿಯಿರುವ ಈದ್ಗಾ. ಇವುಗಳನ್ನು ಮುಸ್ಲಿಮರು ಹಿಂದೂಗಳಿಗೆ 'ಬಿಟ್ಟುಕೊಡಬೇಕು'. ಇಲ್ಲವಾದರೇ, ನಾವು 'ಯಾಗದ ನೆಪದಲ್ಲಿ' ಸಾವಿರಾರು ಮಂದಿಯನ್ನು ಸೇರಿಸಿ ಅವುಗಳನ್ನು ಕೆಡವಿ ಹಾಕುವೆವು. ಕಾನೂನು? ಪಾರ್ಲಿಮೆಂಟು 1947 ಆಗಸ್ಟ್ 15ರ ಹಿಂದೆ ಇದ್ದ ಎಲ್ಲಾ ಪ್ರಾರ್ಥನಾ ಮಂದಿರಗಳನ್ನು ರಕ್ಷಿಸುವ ಸಮಗ್ರ ಕಾನೂನು ಅಂಗೀಕರಿಸಲಿಲ್ಲವೇ? ಅಂಗೀಕರಿಸಿದೆ. ಅದು "ನಮ್ಮ ಮತೀಯ ಸಂಕಲ್ಪ"ವನ್ನು ಈಡೇರಿಸಲು ಅಡ್ಡಿ ಬರಬಾರದು ಎನ್ನುತ್ತಾರೆ ಈ ಮಹನೀಯರುಗಳು. ಅಧಿಕಾರಕ್ಕಾಗಿ ಸಂವಿಧಾನ ಎತ್ತಿ ಹಿಡಿದ ಜಾತ್ಯಾತೀತ ಮೂಲ ತತ್ವದ ಬಹಿರಂಗ ಉಲ್ಲಂಘನೆ. ಇದು ರಾಜಕೀಯದ ಇನ್ನೊಂದು ವೈಖರಿ.

ಜಾತೀಯ ರಾಜಕೀಯ

ಹಿಂದಿನಿಂದಲೂ ಕರ್ನಾಟಕ ರಾಜ್ಯದ ರಾಜಕೀಯಲ್ಲಿ 'ಲಿಂಗಾಯತರ ಮೇಲ್ಮೆ, ಒಕ್ಕಲಿಗರ ಮೇಲ್ಮೆ" ಸಾಧಿಸುವ ಆಟ ನಡೆಯುತ್ತಾ ಬಂದಿದೆ. 45 ವರ್ಷಗಳ ನಂತರ ನಾವು ಪರಿಶೀಲಿಸಿದರೆ ಈ ಆಟದಿಂದ ಬಹುಪಾಲು ಲಿಂಗಾಯಿತರಿಗಾಗಲೀ, ಬಹುಪಾಲು ಒಕ್ಕಲಿಗರಿಗಾಗಲೀ ಅವರ ಜೀವನ ಸ್ಥಿತಿಗತಿಗಳಲ್ಲಿ ಹೇಳುವಂತ ರೀತಿಯಲ್ಲಿ ಉನ್ನತಿವುಂಟಾಗಿದೆಯೇ? ಇಲ್ಲ, ಇತರ ಜಾತಿಗಳ ಬಹುಪಾಲು ಜನರ ಜೀವನ ಸ್ಥಿತಿ ಉತ್ತಮಗೊಳ್ಳುವ ಪ್ರಶ್ನೆಯಂತೂ ಇಲ್ಲವೇ ಇಲ್ಲ. ಲಿಂಗಾಯತ ಮತ್ತು ಒಕ್ಕಲಿಗರ ಶ್ರೀಮಂತ ವಿಭಾಗಗಳಿಗೆ ಲಾಭವಾಗಿದೆ. ಅವರು ಹೇರಳ ಹಣ ಸಂಪಾದಿಸಲು ಸಾಧ್ಯವಾಗಿದೆ. ಸ್ವಲ್ಪಮಟ್ಟಿಗೆ ಕೆಳಜಾತಿಗಳು-ಎಸ್.ಸಿ., ಎಸ್.ಟಿ., ಕುರುಬ ಇತ್ಯಾದಿ ಜಾತಿಗಳ ಕೆಲವು ಧುರೀಣರ ಕುಟುಂಬಗಳಿಗೆ ಅನುಕೂಲವಾಗಿದೆ. ಆದರೆ ಕೋಟಿ ಕೋಟಿ ಸಾಮಾನ್ಯ ಜನರ, ಸಾಮಾನ್ಯ ರೈತರ, ಕಾರ್ಮಿಕರ, ಕಸುಬುದಾರರ-ಪರಿಸ್ಥಿತಿ ಇಂದಿಗೂ ಅದೇ ಹಿಂದಿನ ಸ್ಥಿತಿ.



ಟೈಮ್ಸ್ ಆಫ್ ಇಂಡಿಯಾದಲ್ಲಿ ಆರ್.ಕೆ. ಲಕ್ಷ್ಮಣ್

ರಾಜ್ಯದ ಬೆಳವಣಿಗೆ?

ಈಗಲೂ ಹಿಂದಿನ ಕೆಲವು ರಾಜರ ಕಾಲದಲ್ಲಿ ಕೆಲವು ದಿವಾನರ ಕಾಲದಲ್ಲಿ ರಾಜ್ಯದ ಬೆಳವಣಿಗೆ ಸಾಧಿಸಿದ ವಿಸ್ತಾರ ಮತ್ತು ವೇಗಗಳನ್ನು ಹಲವರು ನೆನಪು ಮಾಡುತ್ತಾರೆ. ರಾಜರುಗಳ ರಾಜಾಡಳಿತೆ ಹೋದರೆ, ಬ್ರಿಟಿಷರ ಚಕ್ರಾಧಿಪತ್ಯ ತೊಲಗಿದರೆ, ನಮ್ಮ ರಾಜ್ಯದ ಆಡಳಿತೆ ಜನತೆಯ ಕೈಯಲ್ಲಿ ಬಂದರೆ, ಪ್ರಜಾಪ್ರಭುತ್ವ ಆಡಳಿತೆಯಡಿಯಲ್ಲಿ ನಮ್ಮ ರಾಜ್ಯವು ಸರ್ವತೋಮುಖವಾದ ಅಭಿವೃದ್ಧಿಯನ್ನು ಕೆಲವೇ ಕೆಲವು ದಶಕಗಳಲ್ಲಿ ನಾವು ಸಾಧಿಸಬಹುದು ಎಂದು ಏನೆಲ್ಲಾ ಆಶ್ವಾಸನೆಗಳು? ಏನೆಲ್ಲಾ ಘೋಷಣೆಗಳು? ಆದರೆ ಸುಮಾರು ೫ ದಶಕಗಳಲ್ಲಿ ನಾವು ಸಾಧಿಸಿದ್ದು? ಕೈಗಾರಿಕೆಯಲ್ಲಿ ಬೆಂಗಳೂರು, ಮಂಗಳೂರು, ಹುಬ್ಬಳ್ಳಿ, ಹರಿಹರ, ಬೆಳಗಾಂ ಬಿಟ್ಟರೆ ಉಳಿದೆಡೆ ಎಲ್ಲಿದೆ

ಸಾರ್ವತ್ರಿಕ ಕೈಗಾರಿಕೆಗಳ ಬೆಳವಣಿಗೆ? ಕೃಷಿಯಲ್ಲಿ ಶಿವಮೊಗ್ಗ, ಮಂಡ್ಯ, ಸ್ವಲ್ಪಮಟ್ಟಿಗೆ ರಾಯಚೂರು ಬಿಟ್ಟರೆ ಉಳಿದೆಡೆ ಸಾರ್ವತ್ರಿಕ ಕೃಷಿ ಬೆಳವಣಿಗೆ ಎಲ್ಲಿದೆ?


ಇನ್ನು ರಾಜ್ಯದಲ್ಲಿ ವಿಶಾಲವಾದ ಭೂಮಿಯು ಕೃಷಿಗೆ ಅವಕಾಶವಾದ ನೀರಾವರಿ ನೀರನ್ನು-ವಿಪುಲ ನದಿಗಳು ಹರಿಯುತ್ತಿದ್ದರೂ-ಮಳೆ ನೀರು ಧಾರಾಳವಾಗಿ ಸಮುದ್ರಕ್ಕೆ ಹರಿದು ಹೋಗುತ್ತಿದ್ದರೂ, ನೀರಾವರಿ ಯೋಜನೆಗಳನ್ನು ಸಾಧಿಸುವುದರ ಮೂಲಕ, ಒದಗಿಸಲು ಸಾಧ್ಯವಾಗಲಿಲ್ಲ. ಇನ್ನು ರಾಜ್ಯದಲ್ಲಿ ಮೂರು ವರ್ಷಕ್ಕೊಮ್ಮೆ 20-22 ಸಾವಿರ ಹಳ್ಳಿಗಳ ಜನತೆ ಬರದಿಂದ ಬವಣೆ ಪಡುವುದು ತಪ್ಪಲಿಲ್ಲ.

70-75ಅ ಕೃಷಿ ಯೋಗ್ಯವಾದ ಭೂಮಿ ಈಗಲೂ - 5 ದಶಕಗಳ ಸ್ವಾತಂತ್ರ್ಯ ಅನುಭವಿಸಿದ ನಂತರ ನಮ್ಮ ರಾಜ್ಯದಲ್ಲಿ ಭೂಮಿ ಕೇವಲ 25-29% ಭೂಮಾಲಕರ ಕೈಯಲ್ಲೇ ಇದೆ. ನಮ್ಮಲ್ಲಿ ಹೆಚ್ಚಿನ ಜಿಲ್ಲೆಗಳಲ್ಲಿ ಭೂಸುಧಾರಣೆಯಾಗಿ ಕೃಷಿ ಕೂಲಿಗಾರರ ಮತ್ತು ಬಡ ರೈತರ ಕೈಗಳಿಗೆ ಭೂಮಿ ವಿತರಣೆಯಾಗಿ ಸಿಗಲಿಲ್ಲ (ಪಶ್ಚಿಮ ಬಂಗಾಳದಲ್ಲಿ 70ಶೇ. ಭೂಮಿ 70 ಶೇ. ಜನಸಾಮಾನ್ಯರ ಕೈಗಳಲ್ಲಿ ಇದೆ). ಆದ್ದರಿಂದ ಇಲ್ಲಿ ಕೃಷಿಯಲ್ಲಿ ಅಭಿವೃದ್ಧಿ ಎಂದರೆ-ಈ 20-25% ಶ್ರೀಮಂತ ರೈತರ ಮತ್ತು ಶ್ರೀಮಂತ ಭೂಮಾಲಕರ ಕೃಷಿಯ ಅಭಿವೃದ್ಧಿ. 70-75% ರೈತರ ಕೃಷಿ ಇಂದಿಗೂ ಹಿಂದಿನ ಹಾಗೆಯೇ ಮಳೆರಾಯನ ಮೇಲೆ ಹೊಂದಿಕೊಂಡಿದ್ದು ಓಬಿರಾಯನ ಕಾಲದ ಕೃಷಿ. ಅಭಿವೃದ್ಧಿ? ಯಾರಿಗೆ? ಅಭಿವೃದ್ಧಿಯಿಂದ ರಾಜ್ಯದ ಬಹುಭಾಗದ ಜನರು ವಂಚಿತರಾಗಿದ್ದಾರೆ.

ಇನ್ನು ರಾಜ್ಯದಲ್ಲಿ ಅಧಿಕ ಸಂಖ್ಯೆಯಲ್ಲಿ ಬೀಡಿಕಟ್ಟಿ, ರೇಷ್ಮೆ ಕೆಲಸ ಮಾಡಿ, ಹ್ಯಾಂಡ್ ಲೂಮ್, ಪವರ್ ಲೂಮ್ ಗಳಲ್ಲಿ ದುಡಿದು ಹೇಗಾದರೂ ಬದುಕುತ್ತಿರುವವರ ಗತಿ? ಕೇಳುವವರೇ ಇಲ್ಲ. ಕನಿಷ್ಟ ಕೂಲಿ ಅವರಿಗೆ ದೊರೆಯುತ್ತಿಲ್ಲ. ಕನಿಷ್ಟ ಬೋನಸ್ಸು ದೊರೆಯುತ್ತಿಲ್ಲ? ಕನಿಷ್ಟ ಕಾನೂನು ಸವಲತ್ತುಗಳು ಇಲ್ಲ? ಹೆಣ್ಣು ಮಕ್ಕಳು, ಬಾಲಕರು ಎಷ್ಟೊಂದು ಮಂದಿ ದುಡಿಯುತ್ತಿದ್ದಾರೆ. ಅವರ ಜೀವನದ ಪರಿಸ್ಥಿತಿ ಅಭಿವೃದ್ಧಿಗೆ ಆಡಳಿತೆಯ ಕೊಡುಗೆ? ಶೂನ್ಯ.

ಬೇಕಾಗಿದೆ ಜನಗಳ ರಾಜಕೀಯ

ಆದ ಕಾರಣ, ಕರ್ನಾಟಕದ ರಾಜಕೀಯದಲ್ಲಿ ರಾಜ್ಯದ ವಿಶಾಲ ವಿಭಾಗದ ವಿವಿಧ ಕೈಗಾರಿಕೆಗಳಲ್ಲಿ,ಕಸುಬುಗಳಲ್ಲಿ ದುಡಿಯುತ್ತಿರುವ ಮಿಲಿಯಾಂತರ ಕಾರ್ಮಿಕರು, ಸಂಘಟಿತರು, ಅಸಂಘಟಿತರು, ವೃದ್ಧರು, ತರುಣರು, ಸ್ತ್ರೀಯರು, ಪುರುಷರು ಅಧಿಕ ಸಂಬಳ ಪಡೆಯುವವರು, ಅತ್ಯಲ್ಪ ಕೂಲಿಯಿಂದ ಬದುಕುವವರು ಮತ್ತು ಏನೂ ಉದ್ಯೋಗವಿಲ್ಲದೆ ಬಳಲುತ್ತಿರುವ ಲಕ್ಷಾಂತರ ಮಂದಿ ತಮ್ಮ ರಾಜಕೀಯ ಪಾತ್ರ ವಹಿಸಬೇಕಾಗಿದೆ. ಕರ್ನಾಟಕದ ರಾಜಕೀಯ ರಾಜ್ಯದಲ್ಲಿ 30-35 ಶೇ.ದಷ್ಟಿರುವ ಕೃಷಿ ಕೂಲಿಕಾರರು ಪ್ರತಿಯೊಂದು ಜಿಲ್ಲೆಯಲ್ಲೂ ಇಡೀ ರಾಜ್ಯದಲ್ಲಿ ತಮ್ಮ ನ್ಯಾಯವಾದ ಬೇಡಿಕೆಗಳಿಗಾಗಿ-ಮನೆ, ಭೂಮಿ, ಕೂಲಿ, ಕುಡಿಯುವ ನೀರು, ಆರೋಗ್ಯ, ನ್ಯಾಯ ಬೆಲೆಯಲ್ಲಿ ಜೀವನಾವಶ್ಯಕ ವಸ್ತುಗಳು ಇತ್ಯಾದಿ-ತೀವ್ರ ಹೋರಾಟಕ್ಕಾಗಿ ಬೀದಿಗಿಳಿಯಬೇಕಾಗಿದೆ. ನಮ್ಮ ರಾಜಕೀಯ ತಮ್ಮೆಡೆಗೆ ತಮ್ಮ ದುರ್ದೆಶೆಯ ಕಡೆಗೆ ತಿರುವುವಂತೆ ಮಾಡಲು ಮುಂದಾಗಬೇಕಾಗಿದೆ. ಆಗ ಮಾತ್ರ ಪ್ರಜಾಪ್ರಭುತ್ವಕ್ಕೆ ನಿಜ ಅರ್ಥ ಮೈಗೂಡಲು ಸಾಧ್ಯ.



ವಿಷ್ಣುವಿನ ಬೇರೆ ಕೆಲವು ಅವತಾರಗಳು

ಇನ್ನು 70% ರೈತರು-ಇವರ ಬಗ್ಗೆ ಯಾರು ಯೋಚಿಸುತ್ತಾರೆ. ಇವರ ಭೂಮಿಗೆ ನೀರು, ಬೀಜ, ಆಧುನಿಕ ಕೃಷಿ ತಂತ್ರಜ್ಞಾನ ಒದಗಿಸುವ ಬಗ್ಗೆ, ಇವರಿಗೆ ಬೇಕಾಗುವ ಸಾಲದ ವ್ಯವಸ್ಥೆ, ಇವರ ಬೆಳೆಗಳಿಗೆ ಸತತವಾಗಿ ನಷ್ಟವುಂಟಾದಾಗ ಪರಿಹಾರ ಇವರ ಕೃಷಿ ಅಧಿಕ ಇಳುವಳಿ ಕೊಡುವ ದೃಷ್ಟಿಯಿಂದ ಬಂಡವಾಳ ಹೂಡುವಿಕೆ-ಇದೆಲ್ಲಾ ಎಲ್ಲಿ ನಡೆಯುತ್ತಿದೆ? ಬಾಯಿಯಲ್ಲಿ ಕಾಗದದ ಮೇಲೆ ಯೋಜನೆಗಳು ಮಾತ್ರ ಸೃಷ್ಟಿಸಲ್ಪಡುತ್ತಿವೆ. ಆದರೆ, 70% ರೈತರ ಹಿತರಕ್ಷಣೆಗೆ ರಾಜ್ಯದ ಆಡಳಿತಗಳು ಏನೂ ಮಾಡುತ್ತಿಲ್ಲ. ಏನಾದರೂ ಮಾಡಿದ್ದರೆ ಮೇಲ್ಭಾಗದ ಶ್ರೀಮಂತ ರೈತರಿಗೆ, ಶ್ರೀಮಂತ ಭೂಮಾಲಕರಿಗೆ.

ಎಪಿಎಂಸಿಗಳು, ಕೃಷಿ ವಿಶ್ವವಿದ್ಯಾಲಯಗಳು, ಕೃಷಿ ಇಲಾಖೆಗಳು ಈ 70% ರೈತರ ಕುರಿತು ಅವರ ಆದಾಯವನ್ನು ಹೆಚ್ಚಿಸುವ ಕುರಿತು, ಅವರ ಕೊಂಡುಕೊಳ್ಳುವ ಶಕ್ತಿಯನ್ನು ಅಧಿಕಗೊಳಿಸುವ ಕುರಿತು ತಂತ್ರಜ್ಞಾನ, ಅಭಿವೃದ್ಧಿಗೊಳಿಸಿ ಅವರಿಗೆ ಒದಗಿಸುವ ವಿಷಯದಲ್ಲಿ ಏನಾದರೂ ಮಾಡಲಾಗುತ್ತಿದೆಯೋ? ಇಲ್ಲ.

ಆದ ಕಾರಣ, ಬಡ ಮತ್ತು ಮಧ್ಯಮ ರೈತರು- ಬಹುಭಾಗದ ರೈತರು ಬೀದಿಗೆ ಇಳಿದು ತಮ್ಮ ನ್ಯಾಯವಾದ ಬೇಡಿಕೆಗಳಿಗಾಗಿ ಹೋರಾಡಬೇಕಾಗಿದೆ.

ಆಗ ಮಾತ್ರ, ಕಾರ್ಮಿಕರು, ಕೃಷಿ ಕೂಲಿಕಾರರು ಮತ್ತು ಎಪ್ಪತ್ತು ಶೇಕಡಾ ರೈತರು ಬೀದಿಗಿಳಿದು ತಮ್ಮ ಹಿತಗಳನ್ನು ರಕ್ಷಿಸುವ ಮತ್ತು ಅಭಿವೃದ್ಧಿ ಪಡಿಸುವ ರಾಜಕೀಯ ಮಾಡಲು ಮುಂದೆ ಬರಬೇಕಾಗಿದೆ.

ಇಂತಹ ರಾಜಕೀಯದಲ್ಲಿ ನಿಸ್ವಾರ್ಥ, ದೇಶಪ್ರೇಮೀ ಮತ್ತು ಪ್ರಾಮಾಣಿಕರಾದ ಬುದ್ಧಿಜೀವಿಗಳು ತಮ್ಮ 'ವಿಶೇಷ ಚೈತನ್ಯ'ದ ವಿಶೇಷ ಅಭ್ಯಾಸದ ಮತ್ತು ವಿಶೇಷ ಬುದ್ಧಿವಂತಿಕೆಯ ಕೊಡುಗೆಗಳನ್ನು ಕೊಡಬೇಕಾಗಿದೆ.

ಈ ದಿಕ್ಕಿನಲ್ಲಿ ಕರ್ನಾಟಕದ ರಾಜ್ಯದಲ್ಲಿ ಎಡ ಚಿಂತಕರ ಹಾಗೂ ಎಲ್ಲದಕ್ಕೂ ಹೆಚ್ಚಾಗಿ ಎಡ ಶಕ್ತಿಗಳ ವಿಶೇಷವಾಗಿ ಸಿಪಿಐ(ಎಂ) ಮತ್ತು ಸಿಪಿಐ ಪಕ್ಷಗಳು ಪ್ರಮುಖ ಪಾತ್ರವಹಿಸಬೇಕಾಗಿದೆ.

ಎಡ ಚಿಂತಕರು ಮತ್ತು ಎಡ ಪಕ್ಷಗಳು ಜನತೆಯ ನಡುವೆ ಬೆಳೆದು, ಸ್ಪಷ್ಟ ಧೋರಣೆಗಳ ಆಧಾರದಲ್ಲಿ ಸಾವಿರಾರು ಕಾರ್ಯಕರ್ತರನ್ನು ತಯಾರು ಮಾಡಿ ಸಂಯೋಜಿತರಾಗಿ ಯೋಜನಾಬದ್ಧರಾಗಿ ರಾಜ್ಯದ ರಾಜಕೀಯದಲ್ಲಿ ಮುನ್ನುಗ್ಗಬೇಕಾಗಿದೆ.

ಆಗ ಮಾತ್ರ ಕರ್ನಾಟಕ ರಾಜ್ಯದ ರಾಜಕೀಯದಲ್ಲಿ ಹೊಸ ಆಶಯಗಳನ್ನು ಕೈಗೂಡಿಸಲು ಸಾಧ್ಯ. ವ್ಯಕ್ತಿಗತವಾದ, ಮತೀಯವಾದ ಮತ್ತು ಜಾತೀಯವಾದ ರಾಜಕೀಯದಿಂದ ಈ ಮುನ್ನಡೆ ಸಾಧ್ಯವಿಲ್ಲ. ಜನಸಾಮಾನ್ಯರು ನಮ್ಮ ಪ್ರಜಾಸತ್ತಾತ್ಮಕ ಬೇಡಿಕೆಗಳಿಗಾಗಿ ಒಗ್ಗಟ್ಟಾಗಿ ಬೀದಿಗಿಳಿದು ಹೋರಾಡಲು ಆರಂಭ ಮಾಡಿದಾಗ ಮಾತ್ರ ರಾಜಕೀಯಕ್ಕೆ ನಿಜವಾದ ತಿರುವು ಸಿಗುವುದು. ■

- ಎನ್.ಕೆ. ಉಪಾಧ್ಯಾಯ

ಸ್ವಾತಂತ್ರ್ಯ ಚಳುವಳಿ ಮೌಲ್ಯಗಳು ಅಂದು-ಇಂದು

ಸ್ವಾತಂತ್ರ್ಯ ಆಂದೋಲನ ಮುಗಿದು ಅರ್ಧ ಶತಮಾನವಾಗುತ್ತಿದೆ. ಇದರಿಂದಾಗಿ ಆ ಮಹಾನ್ ಆಂದೋಲನದ ಮೌಲ್ಯಗಳು ಮಾಯವಾಗುತ್ತಿವೆಯೇ? ಹಾಗಿದ್ದರೆ ಅಂದು ಅಪೂರ್ಣವಾಗುಳಿದ ಕನಸುಗಳನ್ನು ನನಸಾಗಿಸಿಕೊಳ್ಳುವುದು ಹೇಗೆ?

1947, ಆಗಸ್ಟ್ 15ರಂದು ಮಧ್ಯರಾತ್ರಿ ಆಂಗ್ಲರ ಗುಲಾಮಗಿರಿಯ ಸಂಕೇತವಾಗಿದ್ದ ಬಾವುಟವನ್ನು ಕೆಳಗಿಳಿಸಿ ಅಂದಿನ ಮೂವತ್ತು ಮೂರು ಕೋಟಿ ಭಾರತೀಯರ ನೆಲೆಬೀಡಾದ ಭಾರತದೇಶ ಗುಲಾಮಗಿರಿಯನ್ನು ಕಿತ್ತೊಗೆದು ಸ್ವತಂತ್ರ ದೇಶವಾಯಿತೆಂದು ಸಾರುವ ತ್ರಿವರ್ಣದ ರಾಷ್ಟ್ರೀಯ ಧ್ವಜವನ್ನು ಮೇಲೇರಿಸಲಾಯಿತು. ಆಗ ಸುಜಲಾಂ ಸುಫಲಾಂ ಮಲಯಜ........ ಅಂದರೆ ಭಾರತ ದೇಶದ, ಜನತೆಯ ಸರ್ವಾಂಗೀಣ ಅಭಿವೃದ್ಧಿ ಮಾಡುವ ಪಣತೊಡಲಾಯಿತು. ಅದರ ಜೊತೆಯಲ್ಲಿಯೇ ದೇಶಕೆ ಸ್ವಾತಂತ್ರ್ಯ ಗಳಿಸಿಯೇ ತೀರಬೇಕೆಂಬ ಗುರಿಸಾಧನೆಗಾಗಿ ಯಾವ ಮೌಲ್ಯಗಳನ್ನಾಧರಿಸಿ ತ್ಯಾಗ ಬಲಿದಾನ ಮಾಡಲಾಗಿತ್ತೋ ಅದೇ ಪರಂಪರೆಯನ್ನು ಮುಂದಿಟ್ಟುಕೊಂಡು ದೇಶದ ಆರ್ಥಿಕ ಮತ್ತು ರಾಜಕೀಯ ಸಾರ್ವಭೌಮತ್ವವನ್ನು ರಕ್ಷಿಸಲು ದೇಶದ ಐಕ್ಯತೆ ಹಾಗೂ ಸಮಗ್ರತೆಯನ್ನು ಉಳಿಸಲು ನಿರಂತರ ಹೋರಾಟ ಮುಂದುವರಿಸುತ್ತೇವೆಂಬ ಪಣವನ್ನು ತೊಡಲಾಗಿತ್ತು.

ನಾವೀಗ ನಮ್ಮ ದೇಶದ ಸ್ವಾತಂತ್ರ್ಯದ ನಲ್ವತೆಂಟನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿದ್ದೇವೆ. ಜನರ ಬಾಯಿಂದ ಒಂದು ಮಾತು ಸತತವಾಗಿ ಹೊರಹೊಮ್ಮುತ್ತಿದೆ. ಜನ ನನಗೆ ನೇರವಾಗ ಪ್ರಶ್ನೆಯೊಂದನ್ನು ಕೇಳುತ್ತಲಿದ್ದಾರೆ. ಜನಸಾಮಾನ್ಯರಿಗೆ, ರಾಜಕೀಯ ಮುಖಂಡರಿಗೆ ಅದೊಂದು ಪ್ರಶ್ನೆ ಒಗಟಾಗಿ ಕಾಡುತ್ತಿದೆ. ಅದುಯಾವ ಪ್ರಶ್ನೆ ಗೊತ್ತೆ? ಅದೇ ಮೌಲ್ಯದ ಪ್ರಶ್ನೆ. 1857ರಲ್ಲಿ ಸೈನಿಕರ ದಂಗೆಯಲ್ಲಿ ಪ್ರಾರಂಭವಾಗಿ ೧೯೪೭ ಸ್ವಾತಂತ್ರ್ಯ ದಿನದವರೆಗೂ ಅನಂತರವೂ ಕೆಲವು ವರ್ಷ ಮುಂದುವರಿದ ಆ ಮೌಲ್ಯ ಈಗೆಲ್ಲಿ ಹೋಯಿತು? ಮೌಲ್ಯ ಅದೆಂದರೆ ಅಂದಿನ ನಿಸ್ವಾರ್ಥ ಸೇವಾಭಾವ, ತ್ಯಾಗ ಮಾಡಬೇಕು, ತನ್ನ ಜೀವನವನ್ನೇ ಅಗತ್ಯಬಿದ್ದರೆ ಬಲಿ ಕೊಡಬೇಕು, ಬಂದೂಕು-ಪಿಸ್ತೂಲುಗಳನ್ನೆದುರಿಸಬೇಕು, ಹಾಗೆಯೇ ಸ್ವಾಮಿ ವಿವೇಕಾನಂದರ ಎದ್ದೇಳಿ, ಜಾಗ್ರತರಾಗಿ, ನಿಮ್ಮ ಗುರಿ ಮುಟ್ಟುವವರೆಗೂ ಹೋರಾಡಿ ಎಂಬ ಸಂದೇಶವನ್ನು ವಾಚಾ ಮನಸಾ ಅನುಸರಿಸುತ್ತ ಬಂದ ಪರಂಪರೆ ಈಗ ಎಲ್ಲಿ ಹೋಯಿತು. ಈಗಿನ ಬಹಳಷ್ಟು ಜನ ಕಾರ್ಯಕರ್ತರು, ಮುಖಂಡರೆಲ್ಲ ಸುಖಮಯಜೀವನ, ಬರೇ ಅಧಿಕಾರ, ಹಣ ಸಂಪಾದನೆ, ಪ್ರಶಸ್ತಿ, ಬಿರುದಾವಳಿಗಳಿಗಾಗಿಯೇ ಹೋರಾಡುತ್ತಾರಲ್ಲ. ಹಿಂದಿನ ಕಾಲದ ತ್ಯಾಗದ ಮನೋಭಾವ, ಸಂಕಷ್ಟಗಳನ್ನೆದುರಿಸುವ ಧೈರ್ಯ ಎಲ್ಲಿಗೆ ಹೋಯಿತು?

ಈ ಪ್ರಶ್ನೆ ಎಲ್ಲರನ್ನು ಕಾಡುತ್ತಿದೆ ಎಂಬುದೇನೋ ನಿಜ... ಎಲ್ಲ ಪಕ್ಷಗಳನ್ನು ಅದರಲ್ಲೂ ನಿಷ್ಠಾವಂತ ಕಾರ್ಯಕರ್ತರುಳ್ಳ ಸಿಪಿಐ(ಎಂ), ಸಿಪಿಐ ಮುಂತಾದ ಎಡಪಕ್ಷಗಳನ್ನು ಬಹಳವಾಗಿ ಕಾಡುತ್ತಿರುವುದು ಎಡ ಚಳುವಳಿಯ, ಎಡ ಪಕ್ಷಗಳ ಬೆಳವಣಿಗೆಗೆ ಆಂತಕಕಾರಿಯಾಗಿರುವ ಸಂಗತಿ ಎದ್ದು ಕಾಣುತ್ತಿದೆ. ಈ ಪ್ರಶ್ನೆಯನ್ನು ಗಂಭೀರವಾಗಿ ವಿಶ್ಲೇಷಿಸೋಣ.

ಟೈಮ್ಸ್ ಆಫ್ ಇಂಡಿಯಾದಲ್ಲಿ ಲಕ್ಷ್ಮಣ್



ಕೊಲೆ, ಅತ್ಯಾಚಾರ.....! ಪಕ್ಷ ಯಾವ ಸ್ಥಿತಿಗೆ ಬರುತ್ತಿದೆ? ನಮ್ಮ ದಿನಗಳಲ್ಲಿ ಲಂಚ, ಕಿಕ್‌ಬ್ಯಾಕ್ ಇತ್ಯಾದಿ ಮಾತ್ರ ಇತ್ತು!

ತ್ಯಾಗದ ಮಹಾಮೌಲ್ಯ

ಕಾರ್ಮಿಕರಿಗೆ, ರೈತರಿಗೆ, ವಿದ್ಯಾರ್ಥಿ, ಯುವ ಜನತೆಗೆ ಹಾಗೆಯೇ ರಾಷ್ಟ್ರೀಯ ಬಂಡವಾಳದಾರರನ್ನೊಳಗೊಂಡು ಜನಸಾಮಾನ್ಯರಿಗೆಲ್ಲ ಬ್ರಿಟಿಷರು ಅವರ ಆಡಳಿತೆ, ಅವರ ಗುಲಾಮಗಿರಿಯೇ ಪ್ರಧಾನ ಶತ್ರುವಾಗಿತ್ತು. ಭೂಮಾಲಕರು, ಬ್ರಿಟಿಷರ ಬಿರುದಾಂಕಿತಗಳಲ್ಲಿ ಮೆರೆಯುತ್ತಿದ್ದ ಟಾಟಾನಂಥ ಕೆಲವು ಕೈಗಾರಿಕೋದ್ಯಮಿಗಳು, ಮೇಲ್ವರ್ಗದ ಕೆಲವೇ ಜನ ಮಾತ್ರ ಬ್ರಿಟಿಷರ ಪರವಾಗಿದ್ದರು. ಈ ಎರಡೂ ಗುಂಪಿನ ಜನ ಮೌಲ್ಯವನ್ನಾಧರಿಸಿಯೇ ಕರ್ತವ್ಯ ನಿರತರಾಗಿದ್ದರು. ಸ್ವಾತಂತ್ರ್ಯ ಗಳಿಸಿ ತಮ್ಮವ್ರೇ ಅಧಿಕಾರ ಬಂದರೆ, ತಮ್ಮ ಬೇಡಿಕೆಗಳು ಶೀಘ್ರ ಈಡೇರಬಹುದೆಂಬ ಆಸೆ ಕಾರ್ಮಿಕರಿಗೆ, ಉಳುವವನಿಗೇ ಭೂಮಿ ಸಿಗಬಹುದೆಂಬ ಆಸೆ ರೈತರಿಗೆ, ಬ್ರಿಟಿಷರ ಆಡಳಿತೆಯಲ್ಲಿ ಗುಮಾಸ್ತನಾಗುವ ಶಿಕ್ಷಣದ ಬದಲಾಗಿ, ದೇಶದ ಅಭಿವೃದ್ಧಿಗೆ ಸಹಾಯವಾಗುವಂಥ ಪುಕಟೆ ಶಿಕ್ಷಣ ಲಭಿಸಬಹುದೆಂಬಾಸೆ ವಿದ್ಯಾರ್ಥಿಗಳಲ್ಲಿ, ಕೈಗಾರಿಕೆಗಳು ಹೆಚ್ಚಾಗಿ ಬೆಳೆದು ಉದ್ಯೋಗ ಸಿಗುತ್ತದೆಂಬಾಸೆ ಯುವಕರದ್ದಾದರೆ, ದೇಶದ ಮೇಲಿನ ಬ್ರಿಟಿಷರ ಹಿಡಿತ ಕೊನೆಗೊಂಡರೆ, ದೇಶದ ಎಲ್ಲಾ ಕಷ್ಟ


ಮಾಲುಗಳನ್ನು ತಾವೇ ಉಪಯೋಗಿಸಬಹುದು, ಹೊಸ ಕಾರ್ಖಾನೆಗಳನ್ನು ಸ್ಥಾಪಿಸಬಹುದು ದೊಡ್ಡ ಬಂಡವಾಳದಾರರಾಗಿ ಬೆಳೆದು ಹೆಚ್ಚು ಲಾಭಗಳಿಸಬಹುದು ಎಂಬುದು ರಾಷ್ಟ್ರೀಯ ಬಂಡವಾಳಗಾರರ ಮಹಾದಾಸೆ. ಇಂಥ ಚಿಂತನೆಗಳಿಂದ ಹೊರ ಹೊಮ್ಮಿದ್ದು ಒಂದು ದೃಢ ನಿರ್ಧಾರ. ಅದೇನೆಂದರೆ ನಾವೆಲ್ಲರೂ ಒಟ್ಟಾಗಿ ಬ್ರಿಟಿಷರನ್ನು ಹೊಡೆದೋಡಿಸೋಣ ಅದಕಾಗಿ ಎಂಥ ತ್ಯಾಗ ಬಲಿದಾನಕಾದರೂ ಸಿದ್ದರಾಗೋಣ ಎಂಬ ನಿರ್ಧಾರ. ಆ ನಿರ್ಧಾರ ಅವರೆಲ್ಲರಲ್ಲಿ ಮೇಲಟ್ಟದ ರಾಜಕೀಯ ತಿಳುವಳಿಕೆ ಉಂಟು ಮಾಡಲು ಸಾಧ್ಯವಾಯಿತು. ಅದರಿಂದಾಗಿ ರಾಷ್ಟ್ರೀಯ ಬಂಡವಾಳದಾರರು ಚಳುವಳಿಗೆ ಎಲ್ಲ ರೀತಿಯ ಧನಸಹಾಯ ಮಾಡಿದರು. ವಿದ್ಯಾರ್ಥಿಗಳು ತಮ್ಮ ಭವಿಷ್ಯದೆಡೆ ಗಮನಹರಿಸದೆ ತಂತಮ್ಮ ತರಗತಿಗಳನ್ನು ಬಹಿಷ್ಕರಿಸಿ ಬೀದಿಗಿಳಿದರು. ಜೈಲು ಸೇರಿದರು, ಕಾರ್ಮಿಕರು ಮುಷ್ಕರದಲ್ಲಿ ನಿರತರಾದರು, ರೈತರು ಭೂಮಾಲಕರನ್ನು ವಿರೋಧಿಸಲು ಟೊಂಕ ಕಟ್ಟಿ ನಿಂತರು, ಯುವಕರು ಹೋರಾಟದ ಮುಂದಳದಲ್ಲಿ ಮುನ್ನುಗ್ಗಿ ಸ್ವಾತಂತ್ರ್ಯ ಹೋರಾಟದಿಂದಲೇ ಅದರ ಮೂಲಕ ಸ್ವಾತಂತ್ರ್ಯಗಳಿಸುವುದರಿಂದಲೇ ತಮ್ಮೆಲ್ಲಾ ಸಮಸ್ಯೆಗಳಿಗೆ ಪರಿಹಾರವೆಂಬ ತಿಳುವಳಿಕೆ ಮೂಡಿಸಲು ಅಂದಿನ ಮುಖಂಡರಿಗೆ ಸಾಧ್ಯವಾಗಿತ್ತು. ನಾನೆಲ್ಲವನ್ನು ಬಿಟ್ಟಿದ್ದೇನೆ ಸ್ವಾತಂತ್ರ್ಯವನ್ನು ಗಳಿಸಿಯೇ ತೀರುತ್ತೇನೆಂಬ ಏಕೈಕ ತಿಳುವಳಿಕೆ ಕಾರ್ಯಕರ್ತರಲ್ಲಿ ಇವರ ತ್ಯಾಗದ ಮಹಾಮೌಲ್ಯವನ್ನು ಆತ್ಮೀಕರಿಸುವಂತೆ ಮಾಡಿತ್ತು.

ಮಾರ್ಚ್ 23, 1931ರಂದು ಗಲ್ಲಿಗೇರಿದ ಭಗತ್‌ಸಿಂಗ್ ರಾಜಗುರು, ಸುಖದೇವ ಅವರು ಜೈಲಿನಿಂದ ಬ್ರಿಟಿಷ್ ಅಧಿಕಾರಿಗಳಿಗೆ ಬರೆದ ಪತ್ರದ ಸಾರಾಂಶ ಓದಿ ನೋಡಿ "ಲಾಹೋರ ಕಾನ್ಸ್ಪಿರೆಸಿ ಕೇಸಿನಲ್ಲಿಯ ಆರೋಪಿಗಳ ಮೇಲೆ ಬ್ರಿಟಿಷ್ ಆಡಳಿತೆಯ ವಿರುದ್ಧ ಯುದ್ಧ ಸಾರಿರುವುದದೇ ಮುಖ್ಯ ಆರೋಪವಾಗಿರುವುದರಿಂದ, ಅವರನ್ನು ಯುದ್ಧ ಕೈದಿಗಳೆಂದು ಪರಿಗಣಿಸಿ ಅವರನ್ನು ಗಲ್ಲಿಗೇರಿಸದೆ ಬಂದೂಕುಗಳಿಂದ ಕೊಲ್ಲಿರಿ" ಎಂಥ ಅಜೇಯ ಸ್ಫೂರ್ತಿ ಈ ಮೂರು ಹುತಾತ್ಮರದ್ದು ನೋಡಿ. ಕಲ್ಪನಾದತ್‌ಳಂಥ ಒಬ್ಬ ಯುವತಿ ಬ್ರಿಟಿಷರ ಶಸ್ತ್ರಾಗಾರವನ್ನು ವಶಪಡಿಸಿಕೊಂಡೇ ತೀರಬೇಕೆಂಬ ದೃಢ ನಿರ್ಧಾರದಿಂದ ತಮ್ಮ ಜೀವನವನ್ನೇ ಬಲಿಗೊಡಲು ಸಿದ್ಧರಾಗಿರುವ ಯುವಕರ ತಂಡವನ್ನು ನಿರ್ಮಿಸಿ, ಬ್ರಿಟಿಷರ ಭದ್ರಕೋಟೆಯಂತಿದ್ದ ಚಿತ್ತಗಾಂಗ್ ಶಸ್ತ್ರಾಗಾರವನ್ನು ವಶಪಡಿಸಿಕೊಳ್ಳಲಿಕ್ಕೆ ಆ ಅಭಿಮನ್ಯು ಪೌರುಷವನ್ನು ಜೀವನಾಡಿಗಳಲ್ಲಿ ತುಂಬಿಕೊಳ್ಳಲು ಹೇಗೆ ಸಾಧ್ಯವಾಯಿತು. ರಾಜಕೀಯವನ್ನು ಪೂರ್ಣ ಅರ್ಥೈಸಿ ಕೊಳ್ಳದ ಮಣ್ಣಲ್ಲಿ ಮಣ್ಣಾಗಿ ದುಡಿಯುವ ನಿರಕ್ಷರಿ ರೈತ ತನ್ನ ಭೂಮಿ ರಕ್ಷಣೆಗಾಗಿ ಪೋಲೀಸರ ಮೇಲೇರಿ ಹೋಗಿ ಪುನಪ್ರ-ವಯ್ಯಾಲಾರ ಘಟನೆಯನ್ನು ಹುಟ್ಟು ಹಾಕಿದ್ದು ಯಾವ ಚೇತನಗೊಳಗಾಗಿ? ಹತ್ತು ವರ್ಷದ ಹುಡುಗ-ಹುಡುಗಿಯರನ್ನು ಹಿಡಿದು ಮುದುಕ-ಮುದುಕಿಯರವರೆಗೆ ಭೂಮಾಲಕರ ವಿರುದ್ಧ ರಜಾಕರರ ಕ್ರೂರ ದಬ್ಬಾಳಿಕೆಯ ವಿರುದ್ಧ ಬಂದೂಕು-ಪಿಸ್ತೂಲುಧಾರಿಗಳಾಗಿ ರಾತ್ರಿ ಹಗಲು ಹೋರಾಡಬೇಕೆಂಬ ಛಲ ಬಂದದ್ದು ಹೇಗೆ. ಮುಂಬಯಿ ಬಂದರಿನಲ್ಲಿ ಹಡುಗುಗಳಲ್ಲಿ ದುಡಿಯುತ್ತಿದ್ದ ಹಿಂದೂ ಮುಸ್ಲಿಂ ನಾವಿಕರು ಕಾಂಗ್ರೆಸ್ ಲೀಗ್ ಮತ್ತು ಕಮ್ಯುನಿಸ್ಟ್ ಬಾವುಟಗಳನ್ನು ಹಿಡಿದು ಬ್ರಿಟಿಷರ ವಿರುದ್ಧ ಬಂಡೆದ್ದಾಗ, ಅವರ ಬೆಂಬಲಾರ್ಥ ಮುಂಬಯಿಯ ಇಡೀ ಕಾರ್ಮಿಕ ವರ್ಗ ಬೀದಿಗಿಳಿದು ಬ್ರಿಟಿಷ್ ಸೈನ್ಯದ ವಿರುದ್ಧ ತ್ಯಾಗ ಬಲಿದಾನಗಳಿಂದ ಗಳಿಸಿದ ಸ್ವಾತಂತ್ರ್ಯ ದುಡಿಯುವ ಜನರ ಕೈಗೆ ಲಭಿಸದೆ, ಪುರೋಗಾಮಿ, ಎಡವಿಚಾರಧಾರೆಯವರ ಹಸ್ತಗತವಾಗದೆ ಬಂಡವಾಳಶಾಹಿ, ಭೂಮಾಲಕ ವರ್ಗದ ಕೈಗೆ ಸೇರಿದ್ದರಿಂದ ಸ್ವಾತಂತ್ರ್ಯ ನಂತರ ದೇಶದ ವಾತಾವರಣದಲ್ಲಿ ಆಮೂಲಾಗ್ರ ಬದಲಾವಣೆ ಕಂಡು ಬಂತು. ಯಾವ ಉದ್ದೇಶದ ಸಲುವಾಗಿ ಸ್ವಾತಂತ್ರ್ಯ ಹೋರಾಟ ನಡೆಸಲಾಯಿತೋ ಅವುಗಳನ್ನೆಲ್ಲ ಅಧಿಕಾರ ಹಿಡಿದ ಕಾಂಗ್ರೆಸ್ ಪಕ್ಷ ಸಂಪೂರ್ಣ ಬದಿಗಿಟ್ಟು ತನ್ನ ಭೂಮಾಲಕ -ಬಂಡವಾಳಶಾಹಿ ವರ್ಗದ ಹಿತಸಾಧನೆಗಾಗಿ ಪ್ರಭುತ್ವವನ್ನು ಆಡಳಿತೆಯನ್ನು ಬುದ್ಧಿವಂತಿಕೆಯಿಂದಲೂ, ಅವಶ್ಯಕತೆ ಬಿದ್ದಾಗ ದಬ್ಬಾಳಿಕೆಯಿಂದಲೂ ಉಪಯೋಗಿಸುತ್ತ ಬಂತು. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಮೂಡಿಬಂದಿದ್ದ ಮೌಲ್ಯವನ್ನು ಉಳಿಸಿಕೊಂಡು ಬಂದರೆ ತಮ್ಮ ವರ್ಗದ ಪ್ರಭುತ್ವಕ್ಕೇನೆ ಅಪಾಯಕಾರಿ ಎಂದು ತಿಳಿದಿರುವ ಕಾಂಗ್ರೆಸ್ ಬಂಡವಾಳಶಾಹಿ ಸಮಾಜದಲ್ಲಿ ಹುದುಗಿಕೊಂಡಿರುವ ಎಲ್ಲ ದುಷ್ಟ, ಸಮಾಜದ್ರೋಹಿ ಭಾವನೆಗಳಿಗೆ ಚಟುವಟಿಕೆಗಳಿಗೆ ಚಾಲನೆ ನೀಡಿತು. ಭ್ರಷ್ಟಾಚಾರ, ಲಂಚಗುಳಿತನ, ಸ್ವಜನಪಕ್ಷಪಾತ, ಮೋಸಗಾರಿಕೆ, ಸುಳ್ಳು ಹೇಳಿಕೆಗಳಿಗೆ ಬಾಗಿಲು ತೆರೆದಿಟ್ಟು ಹಿಂದಿನ ಮೌಲ್ಯಗಳನ್ನು ನಾಶಗೊಳಿಸಲು ಚಾಲನೆ, ಪ್ರೋತ್ಸಾಹ ನೀಡಿತು. ಹಲವಾರು ಆಸೆ-ಆಕಾಂಕ್ಷೆಗಳನ್ನು ಹೊಂದಿದ್ದ ಜನ ಒಂದಿಲ್ಲೊಂದು ಆಮಿಷಗಳಿಗೆ ಬಲಿಬೀಳುವಂತಾಯಿತು. ಸಾಮಾಜಿಕ ಆರ್ಥಿಕ ಸ್ಥಿತಿಗಳಲ್ಲಿಯೂ ಬದಲಾವಣೆಗಳಾದವು. ಮನುಷ್ಯನೂ ಸ್ವಾರ್ಥಕ್ಕೆಗೆ ಬಲಿಬೀಳುವಂತಾಯಿತು. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ "ನಮ್ಮದು" ಎಂದಿತ್ತು. "ಈಗ ನನ್ನದು-ನನಗಾಗಿ" ಎಂದು ಪರಿವರ್ತನೆಯಾಗಿದೆ.

ಸಿನಿಕತನ-ಸಮಯಸಾಧಕತೆ ಏಕೆ ಬರುತ್ತದೆ?

ಅಂದು 1943ರ ಪ್ರಾರಂಭದಲ್ಲಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ನನ್ನನ್ನು ಪಕ್ಷಕಟ್ಟಲು, ರೈಲ್ವೇ ಕೆಲಸಗಾರರ ಸಂಘಟನೆಯ ಜವಾಬ್ದಾರಿ ವಹಿಸಲು ಹುಬ್ಬಳ್ಳಿಗೆ ಕಳುಹಿಸಿಕೊಟ್ಟಾಗ ಕೈಯಲ್ಲಿ ಒಂದು ನೂರು ರೂಪಾಯಿ ಕೊಟ್ಟು "ಇದು ಮೂರು ತಿಂಗಳ ಉಪಜೀವನಕ್ಕೆ ಮೂರು ತಿಂಗಳ ನಂತರ ನೀನೆನಿನ್ನ ವ್ಯವಸ್ಥೆ ಮಾಡಿಕೊಳ್ಳಬೇಕು" ಎಂದು ಹೇಳಿದಾಗ ನನ್ನಲ್ಲಿ ಹುದುಗಿದ್ದ ಅಂದಿನ ಮೌಲ್ಯ ನನ್ನಿಂದ ಹೂಂ ಅನ್ನಿಸಿತು. ಹಂದಿ ಕೂಡ ವಾಸಿಸಲು ನಾಚುತ್ತಿದ್ದ

ಇಕನಾಮಿಕ್ ಟೈಮ್ಸ್‌ನಲ್ಲಿ ಉನ್ನಿಯವರ ವ್ಯಂಗ್ಯ




ನಾಲ್ಕು ಅಡಿ ಉದ್ದ, ಮೂರು ಅಡಿ ಅಗಲ ಮೂರು ಅಡಿ ಎತ್ತರದ ಗುಡಿಸಲಿನಲ್ಲಿ ವಾಸಿಸಿ ಆ ದಿನಗಳಲ್ಲಿ ಉತ್ತಮ ಚಟುವಟಿಕೆಗಳನ್ನು ನಡೆಸಲು ಸಾಧ್ಯವಾಗಿತ್ತು. ಅದೇ ಮೌಲ್ಯದ ಆಧಾರದಲ್ಲಿ ಧಾರವಾಡ ಜಿಲ್ಲೆಯಿಂದ 1943ರ ಕೊನೆಯಲ್ಲಿ ಗಡೀಪಾರು ಮಾಡಲ್ಪಟ್ಟಾಗ ಬಿಜಾಪುರದಲ್ಲಿ ಲೋಕೋಪಯೋಗಿ ಖಾತೆಯ ಎಕ್ಸಿಕ್ಯೂಟಿವ್ ಇಂಜಿನಿಯರ ಮನೆಯಲ್ಲಿದ್ದು ಬಿಜಾಪುರದಲ್ಲಿ ವಿದ್ಯಾರ್ಥಿಗಳ, ಬೀಡಿ ಕೆಲಸಗಾರರ, ನಗರಸಭೆ ಕೆಲಸಗಾರರ ಸಂಘಟನೆ ಕಟ್ಟಲು ನನ್ನಲ್ಲಿ ಅದುಗಿದ್ದ ಮೌಲ್ಯ ಪ್ರೋತ್ಸಾಹ ನೀಡಿತ್ತು. ಆ ಕಾಲದ ಮೌಲ್ಯ ಇಂದಿಗೂ ನನ್ನಲ್ಲಿ ಉಳಿದಿರುವುದರಿಂದಲೇ ಪಾರ್ಟಿಯಿಂದ ಏನೂ ಅಪೇಕ್ಷಿಸದೆ ಒಬ್ಬ ಮಾರ್ಕ್ಸಿಸ್ಟನಾಗಿ, ಸಿಪಿಐ(ಎಂ) ಪಕ್ಷದ ಕಾರ್ಯಕರ್ತನಾಗಿ ಕೆಲಸ ಮುಂದುವರಿಯಲು ಸಾಧ್ಯವಾಗಿದೆಂದು ಹೆಮ್ಮೆಯಿಂದ ಹೇಳಬಯಸುತ್ತೇನೆ. ಎಲ್ಲಾ ಬಂಡವಾಳಶಾಹಿ ಪಕ್ಷಗಳಲ್ಲಿ ಈಗ ಕಾರ್ಯಕರ್ತರಾಗಿ ಬರುವವರಲ್ಲಿ ಹೆಚ್ಚಿನವರು ಕೇಳುವುದು ಒಂದೇ ಮಾತಂತೆ. ಅದೇನೆಂದರೆ "ನನಗೆ ಏನು ಕೊಡುತ್ತೀರಿ, ಎಷ್ಟು ಕೊಡುತ್ತೀರಿ, ಯಾವ ಹುದ್ದೆ ಒದಗಿಸುತ್ತೀರಿ, ಎಷ್ಟು ಹೆಚ್ಚಿಗೆ ಕೊಡುತ್ತೀರಿ" ಎಂದು ಕೇಳಿದ್ದನ್ನು ಕೊಡದಿದ್ದರೆ ಕೊಡುವಲ್ಲಿಗೆ ಓಟವಂತೆ ಈಗ ರಾಜಕೀಯದಲ್ಲಿ ಸಿನಿಕತನ ಮತ್ತು ಸಂದರ್ಭವಾದೀ ಮನೋಭಾವ ಬೆಳೆದು ನಿಂತಿದೆ. ಈ ಬೇಡಿಕೆಗಳನ್ನು ಪೂರೈಸಲು ಬಂಡವಾಳಶಾಹಿ ಪಕ್ಷಗಳಿಗೆ ಮಾತ್ರ ಸಾಧ್ಯ. ಸಿಪಿಐ(ಎಂ) ಪಕ್ಷಕ್ಕೆ ಸಾಧ್ಯವಿಲ್ಲ. ಹಾಗಂದಾಕ್ಷಣ ಈ ರೀತಿಯ ಬೇಡಿಕೆಗಳಿಗೆ ಸಮರ್ಥನೆಯಿಲ್ಲವೇ? ಸಮರ್ಥನೆ ಇದೆ. ದಿನಕಳೆದಂತೆ ಬೆಲೆಗಳು ಹೆಚ್ಚಾಗುತ್ತಿವೆ. ಪ್ರಯಾಣ ತುಟ್ಟಿಯಾಗುತ್ತಿದೆ. ಅವಶ್ಯಕತೆಗಳು ಹೆಚ್ಚಾಗುತ್ತ ಹೊರಟಿವೆ. ಆದ್ದರಿಂದ ಹಿಂದಿನ ಕಾಲದಂತೆ ಜೀವಿಸುವುದು ಕಷ್ಟ. ಅದರರ್ಥ ಬಂಡವಾಳಶಾಹಿ ಪಕ್ಷದ ಅನುಕೂಲತೆಗಳನ್ನು ಪಡೆಯಲು ಸಾಧ್ಯವಿಲ್ಲ. ಮಾರ್ಕ್ಸ್ ಸಿದ್ಧಾಂತದ, ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮದ ಮೇಲೆ ನಿಕಟ ವಿಶ್ವಾಸ ಇರುವವರಿಂದ ಮಾತ್ರ ಕಷ್ಟ-ತೊಂದರೆಗಳನ್ನೆದುರಿಸಿಯೂ ಪಕ್ಷದ ಕಾರ್ಯಕರ್ತನಾಗಿ ಮುಂದುವರಿಯಲು ಸಾಧ್ಯ. ಆ ರೀತಿಯ ಕಠೋರವಾದ ಅಚಲವಾದ, ಸ್ಥಿರವಾದ ಮನೋದಾರ್ಢ್ಯತೆ ಬೇಕು. ಅದಕ್ಕೆ ನಿಷ್ಠೆ ಬೇಕು. ಅರ್ಪಣೆ ಬೇಕು.

ಅಂದು ಇ.ಎಂ.ಎಸ್. ನಂಬೂದರಿಪ್ಪಾದ್, ಎ.ಕೆ. ಗೋಪಾಲನ್, ಪಿ. ಸುಂದರಯ್ಯ ಮೊದಲಾದ ನೂರಾರು ಸಂಗಾತಿಗಳು ತಮ್ಮ ಸರ್ವ ಆಸ್ತಿಯನ್ನು ಪಕ್ಷಕ್ಕೆ ಅರ್ಪಣೆ ಮಾಡಿದ್ದರು. ತಮ್ಮ ಹೆಂಡರು, ಮಕ್ಕಳ ಭವಿಷ್ಯವೇನೆಂದು ಅವರೆಲ್ಲ ಚಿಂತಿಸಲಿಲ್ಲ. ಮಾರ್ಕ್ಸ್‌ವಾದದ ಮೇಲಿನ ಪಕ್ಷದ ಮೇಲಿನ, ಅಚಲ ಶ್ರದ್ಧೆ ಮಾತ್ರ ಅವರದಾಗಿತ್ತು. ಈಗ ಆ ರೀತಿ ಮಾಡಲು ಸಾಧ್ಯವೇ. ಅಂಥವರು ದೊರೆತಾರೆಯೇ? ಅಂಥವರು ವಿರಳ. ಆದರೆ ಪಕ್ಷದ ಮೇಲಿನ ನಿಷ್ಠೆ ಗೌಣವೇ? ಅಲ್ಲ, ಅಗಾಧ ನಿಷ್ಠೆ ಅವರೆಲ್ಲರಲ್ಲಿದೆ. ಆದರೆ ಮೌಲ್ಯದಲ್ಲಿ ಮಾತ್ರ ಬದಲಾವಣೆ ಕಾಣಬಹುದು. ಅಂದಿನ ದಿನಗಳಲ್ಲಿ ಅವಿವಾಹಿತರೇ ಹೆಚ್ಚಾಗಿದ್ದರು. ಈಗ ವಿವಾಹಿತರ ಪಡೆಯೇ ದೊಡ್ಡದು. ಆ ಕಾರಣದಿಂದ ಹಳೇ ಮೌಲ್ಯ ಉಳಿಸಿಕೊಳ್ಳಲು ಸಾಧ್ಯವಿಲ್ಲ. ತಮ್ಮ ಸ್ವಂತ ಆಸ್ತಿಯನ್ನು ಪಕ್ಷಕ್ಕೆ ಒಪ್ಪಿಸುವುದು ಸುಲಭವಲ್ಲ.

ಹಾಗೆಂದಾಕ್ಷಣ ಹಳೇ ಕಾಲದ ಮೌಲ್ಯಗಳೇ ಉಳಿದಿಲ್ಲವೇ? ನಿಜವಾಗಿಯೂ ಉಳಿದಿದೆ. ಆ ಕಾರಣದಿಂದಲೇ ಪಶ್ಚಿಮ ಬಂಗಾಲದಲ್ಲಿ ಹತ್ತು ವರ್ಷಕಾಲ ಕಾಂಗ್ರೆಸ್ಸಿನ ಕ್ರೂರ, ಅಮಾನುಷ ರಾಕ್ಷಸೀ ಕೃತ್ಯಗಳನ್ನೆದುರಿಸಿ ಪ್ರಾಣ ತೆತ್ತು, ಕೈಕಾಲು ಕಡಿದುಕೊಂಡು, ಮನೆ ಮಠ ಕಳಕೊಂಡು ಸಿಪಿಐ(ಎಂ) ಪಕ್ಷವನ್ನು ರಕ್ಷಿಸಲು, ಬೆಳೆಸಲು 18 ವರ್ಷ ಅಧಿಕಾರದಲ್ಲಿ ಉಳಿಸಲು ಸಾಧ್ಯವಾಯಿತಲ್ಲವೇ? ಅದೇ ಮಾದರಿ ತ್ರಿಪುರಾದಲ್ಲಿಯೇ ನಡೆಯಿತು. ಭಯೋತ್ಪಾದಕರ ವಿರುದ್ಧ ಪಂಜಾಬಿನಲ್ಲಿಯೂ ನಡೆಯಿತು. ದೇಶದ ವಿವಿಧ ಭಾಗಗಳಲ್ಲಿ ಒಂದಿಲ್ಲೊಂದು ರೀತಿಯ ದಬ್ಬಾಳಿಕೆ ನಡೆದೇ ನಡೆಯಿತು. ಸಂಗಾತಿಗಳು ಧೈರ್ಯದಿಂದ ಜೀವದ ಹಂಗು ತೊರೆದು ಅವುಗಳನ್ನೆಲ್ಲ ಎದುರಿಸಿದ್ದಾರೆ. ಸಾವಿರಾರು ಜನ ಹುತಾತ್ಮರಾಗಿದ್ದಾರೆ. ಅವರ ತ್ಯಾಗ ಬಲಿದಾನ ಇಂದಿಗೂ, ಭಾರತ ದೇಶದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಅತ್ಯಂತ ಹೆಚ್ಚಿನ ಗೌರವಸ್ಥಾನ ಒದಗಿಸಿ ಕೊಟ್ಟಿದೆ. ಪಶ್ಚಿಮ ಬಂಗಾಲ, ತ್ರಿಪುರಾಗಳಲ್ಲಿ ಹಲವಾರು ಎಡರು ತೊಡರುಗಳ ಮಧ್ಯ ಪಕ್ಷವನ್ನು ಅಧಿಕಾರ ಸ್ಥಾನದಲ್ಲಿ ಉಳಿಸಿದೆ. ಕೇರಳದಲ್ಲಿ ಅಧಿಕಾರ ಸ್ಥಾನಕ್ಕೆ ಕೊಂಡೊಯ್ಯುವ ಹಂತದಲ್ಲಿದೆ. ತಮಿಳುನಾಡು ಆಂಧ್ರ, ಪಂಜಾಬ್‌ಗಳಲ್ಲಿ ಬಲಿಷ್ಠ ಪಕ್ಷಗಳಾಗಿ ಬೆಳೆದಿವೆ. ಬೇರೆ ರಾಜ್ಯಗಳಲ್ಲಿಯೂ ಪಕ್ಷ ಮುಂದಕ್ಕೆ ಹೋಗುತ್ತಿದೆ. ಬೆಳೆಯುತ್ತಿದೆ. ಇದಕ್ಕೆಲ್ಲ ಕಾರಣವೇನು?

ಬಂಡವಾಳಶಾಹಿ ಸಮಾಜದಲ್ಲಿರುವ ಕೆಟ್ಟ ಚಟಗಳು, ದುರ್ಗುಣಗಳು, ಆಸೆ, ಆಕಾಂಕ್ಷೆಗಳು ಹೊಸ ಪೀಳಿಗೆಯನ್ನು ಕೆಡಿಸುತ್ತಿವೆ. ಮಾರ್ಕ್ಸ್‌ವಾದಿ ವಿಚಾರಧಾರೆಯಿಂದ ಅವರನ್ನು ದೂರಿಕರಿಸಲು ನಿರಂತರ ಪ್ರಯತ್ನ ನಡೆಸುತ್ತಿವೆ. ಅವುಗಳ ವಿರುದ್ಧ ಸೈದ್ಧಾಂತಿಕ ಹೋರಾಟ ಅಗತ್ಯ. ಬರೇ ಸೈದ್ಧಾಂತಿಕ ಹೋರಾಟ ಮಾತ್ರ ಸಾಲದು. ಇಂದಿನ ದಿನಗಳಲ್ಲಿ ಜೀವನ ನಡೆಸಲು ಅಗತ್ಯವಾದ, ಆರ್ಥಿಕ ಸಹಾಯ ಅಗತ್ಯ. ಅದು ಮಾತ್ರವೇ ಸಾಲದು. ಸೈದ್ಧಾಂತಿಕ ಶಿಕ್ಷಣ, ಆರ್ಥಿಕ ಸಹಾಯದ ಜೊತೆಯಲ್ಲಿಯೇ, ಶಿಸ್ತು ಅಳವಡಿಸಬೇಕಾಗಿದೆ. ಅದಷ್ಟೇ ಸಾಲದು, ಕಾರ್ಯಕರ್ತರನ್ನು ನಿಷ್ಕ್ರಿಯಗೊಳಿಸಬಾರದು. ನಿರಾಶೆಗೊಳಿಸಬಾರದು. ಅದು ಬೇರೆ ಚಿಂತನೆಗಳಿಗೆ ಅವಕಾಶ ಮಾಡಿಕೊಡುತ್ತದೆ. ಅವರನ್ನು ಜನರ ಮಧ್ಯ ನುಗ್ಗಿಸಬೇಕು. ಕಾರ್ಮಿಕರ-ರೈತರ ಮಧ್ಯೆ ವಿದ್ಯಾರ್ಥಿಗಳ ನಡುವೆ ನುಗ್ಗಿಸಬೇಕು. ಜನಜೀವನ ಅರಿತುಕೊಳ್ಳಲು, ಬೇರೆ ವಿಭಾಗದ ಜನರ ಸಮಸ್ಯೆಗಳನ್ನು ತಿಳಿದುಕೊಳ್ಳಲು ಅವಕಾಶ ಒದಗಿಸಬೇಕು. ಅನಂತರ ಸಮಸ್ಯೆಗಳನ್ನು ಗುರ್ತಿಸಿ, ಆ ವರ್ಗದ ಜನರನ್ನು ಸಂಘಟಿಸುವ, ಅವುಗಳ

ಟೈಮ್ಸ್ ಆಫ್ ಇಂಡಿಯಾದಲ್ಲಿ ಲಕ್ಷ್ಮಣ್



ಸಲುವಾಗಿ ಹೋರಾಡುವ ಮಾರ್ಗದರ್ಶನ ನೀಡಬೇಕು. ಸಿದ್ಧಾಂತದಲ್ಲಿಯೂ, ಮುಖಂಡರಲ್ಲಿಯೂ ಅಚಲ ಶ್ರದ್ಧೆ ಮೂಡಿಬರುವಂತೆ ವರ್ತಿಸಬೇಕು.

ಈ ಸಿದ್ಧಾಂತದಡಿಯಲ್ಲಿ ನಾನು ವರ್ತಿಸಿದ್ದರಿಂದಲೇ ವಿದ್ಯಾರ್ಥಿ ನಿಲಯ, ಫ್ರೀಬೋರ್ಡಿಂಗ್‌ಗಳಲ್ಲಿ ವಾಸ ಮಾಡಿ 1945ರಲ್ಲಿಯೇ ಬಿಜಾಪುರದಲ್ಲಿ ವಿದ್ಯಾರ್ಥಿಗಳ ಸಂಘಟನೆ ಮಾಡಿ 1945ರಲ್ಲಿ ಫ್ಯಾಸಿಸಂ ವಿರುದ್ಧ ಮಹಾನ್ ವಿಜಯ ಸಾಧಿಸಿದ ವರ್ಷವೇ ಬೀಡಿ ಕಾರ್ಮಿಕರ ಜೊತೆ ಸೇರಿ ಮೇ ದಿನಾಚರಣೆ ಹಾಗೆಯೇ ಫ್ಯಾಸಿಸಂ ಪತನದ ವಿಜಯೋತ್ಸವ ಆಚರಿಸಲು ಸಾಧ್ಯವಾಗಿತ್ತೆಂದು ಹೆಮ್ಮೆಯಿಂದ ಹೇಳಬಲ್ಲೆ. ಹಾಗೆಯೇ 1944ರಿಂದಲೇ ಬಿಜಾಪುರದಲ್ಲಿ ಬೀಡಿ ಕೆಲಸಗಾರರ ಜೊತೆಯಲ್ಲೇ ಮುನಿಸಿಪಾಲಿಟಿ ಕೆಲಸಗಾರರ ಜತೆಯಲ್ಲೇ ಅವರಲ್ಲೊಬ್ಬನಾಗಿ ಮುಂದಿದ್ದರಿಂದಲೇ ಇಂದಿಗೂ ಆ ಕೆಲಸಗಾರರೆಲ್ಲ ಕೆಂಬಾವುಟದ ಕೈಬಿಡಲಿಲ್ಲ, ಒಡಕು ಧ್ವನಿಗಳಿಗೆ ಕಿವಿಕೊಟ್ಟಿಲ್ಲವೆಂಬ ಹೆಮ್ಮೆ ನನಗಿದೆ. ಐವತ್ತು ವರ್ಷಗಳ ನನ್ನ ಜೀವನ, ನನ್ನ ಅನುಭವ ನನಗೊಂದು ಪಾಠ ಕಲಿಸಿದೆ. ಅದೇನೆಂದರೆ "ನೀನು ಜನರ ಮಧ್ಯೆ ಹೋಗು ನಿರಂತರ ಸಂಪರ್ಕ ಇಟ್ಟುಕೊಂಡು ಅವರ ಸಮಸ್ಯೆಗಳನ್ನು ಅಭ್ಯಾಸಮಾಡು. ಅವರನ್ನು ಸಂಘಟಿಸಲು, ಅವರ ಬೇಡಿಕೆಗಳಿಗಾಗಿ ಹೋರಾಟದಲ್ಲಿ ಚಳುವಳಿ ಹೂಡಲು ಕಲಿ, ಸಂಘಟಿತವಾದ ಶಿಸ್ತು ಬದ್ಧವಾದ ಚಳುವಳಿ ನಡೆಸು. ನಿಷ್ಠಾವಂತರಿಗೆ ರಾಜಕೀಯವಾಗಿ ಶಿಕ್ಷಣ ಕೊಡು, ಅವರನ್ನು ಪಕ್ಷಕ್ಕೆ ಸೇರಿಸಿ ಅವರೇ ಮುಖಂಡರಾಗುವಂತೆ ಮಾರ್ಗದರ್ಶನ ನೀಡು, ಜೀವನದಲ್ಲಿ ಶಿಸ್ತು ಕಾಪಾಡು. ಅದು ಪಕ್ಷದಲ್ಲಿಯೂ ಮೈಗೂಡಿಸುತ್ತದೆ." ಎಂಬುದಾಗಿದೆ. ಅಂದಿನ ಈ ಅನುಭವವನ್ನು ಇಂದು ಆಚರಣೆಯಲ್ಲಿ ತರುವುದು ಕಷ್ಟ. ಮುಖಂಡರ ಒಮ್ಮತದ ಪ್ರಯತ್ನ ಅದಕ್ಕೆ ಅಗತ್ಯ. ಅದರ ಅಭಾವ ನಮಗಿದೆ. ಆ ಅಭಾವವನ್ನು ತುಂಬುವ ತೀವ್ರ ಪ್ರಯತ್ನ ನಡೆಯುಬೇಕಾಗಿದೆ. ಹಾಗಾದರೆ ಮಾತ್ರ ಹಳೇ ಮೌಲ್ಯದಲ್ಲಿ ಕೆಲವಂಶವನ್ನಾದರೂ ಉಳಿಸಿಕೊಳ್ಳಬಹುದಾಗಿದೆ.

ಸ್ಫೂರ್ತಿಗೆ ಚಾಲನೆ

ಸಿಪಿಐ(ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಅವರು "ಫಾಸಿಸಂ" ಕುರಿತು ಬರೆದ ಲೇಖನದಲ್ಲಿ "ಅವನ ಸೈನಿಕರು ಮಾಸ್ಕೋದವರೆಗೆ ಮಾತ್ರ ಹೋಗಲು ಸಾಧ್ಯವಾಯಿತು ಅದಕ್ಕಿಂತ ಮುಂದೆ ಮುಂದೆ ಅಲ್ಲ ಯುದ್ಧದ ದಾರಿಯನ್ನು ಅದರ ಪರಿಣಾಮವನ್ನು ಸ್ಟಾಲಿನ್‌ಗ್ರಾಡ್ ಬದಲಾಯಿಸಿತು. ಸ್ಟಾಲಿನ್‌ಗ್ರಾಡಿನಲ್ಲಿ ಹಿಟ್ಲರ್‌ನ ಸೈನಿಕರು ಅತಿ ಉಗ್ರವಾದ ಪ್ರತಿಭಟನೆಯನ್ನು ಎದುರಿಸಬೇಕಾಯಿತು. ಸೋವಿಯತ್ ಯೂನಿಯನ್ನಿನ ಜನತೆ ಜೀವನ್ಮರಣ ಹೋರಾಟ ನಡೆಸುತ್ತಿದ್ದರೆ. ಅದು ತಮ್ಮ ದೇಶವನ್ನು ಮಾತ್ರ ರಕ್ಷಿಸಲಿಕ್ಕಲ್ಲ ಇಡೀ ಮಾನವತೆಯನ್ನು ಫ್ಯಾಸಿಸಮಿನ ಅಪಾಯದಿಂದ ರಕ್ಷಿಸುವ ಸಲುವಾಗಿ. ಆ ಕಾರಣದಿಂದಲೇ ಅವರು ಪ್ರತಿಗಲ್ಲಿಗಾಗಿ, ಪ್ರತಿ ಕಟ್ಟಡಕ್ಕಾಗಿ ಮತ್ತು ಪ್ರತಿ ಒಂದು ಇಂಚು ನೆಲಕ್ಕಾಗಿ ಹೋರಾಡಿದರು.

"ಇಂಥ ಅಪರೂಪದ, ವೀರಾವೇಶ ಮತ್ತು ಧೈರ್ಯವನ್ನು ಕೆಂಪು ಸೈನಿಕರು ತೋರ್ಪಡಿಸಿದ್ದು ಸಮಾಜವಾದ ನೀಡಿದ ಸ್ಫೂರ್ತಿಯಿಂದಲ್ಲದೆ ಬೇರೆ **ಯಾವುದರಿಂದಲೂ ಅಲ್ಲ, ಒಂದು ಸಿದ್ಧಾಂತಕ್ಕೆ-ಸಮತಾವಾದಕ್ಕೆ, ನಿಷ್ಠೆಯಿಲ್ಲದಿದ್ದರೆ ಆ ಸ್ಫೂರ್ತಿಯನ್ನು ಮೈಗೂಡಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ.** ಸಮತಾವಾದ ಆ ಸ್ಫೂರ್ತಿಗೆ ಚಾಲನೆ ನೀಡಿದ್ದರಿಂದಲೇ ಆ ಸ್ಫೂರ್ತಿ ಸಮುವಸ್ತ್ರ ತೊಟ್ಟಿರುವ-ತೊಡುವವರೆನ್ನೆಲ್ಲ ತ್ಯಾಗಕ್ಕೆ ಮತ್ತು ವಿಜಯದ ಹೋರಾಟಕ್ಕೆ ಮುನ್ನುಗ್ಗಿಸಿತು. ಸೋವಿಯತ್ ಜನತೆ ಮತ್ತು ಕೆಂಪು ಸೈನ್ಯ ವಿಜಯದತ್ತ ಸಾಗುವಂತೆ ಮಾಡಿದ ಸ್ಟಾಲಿನ್ನರ ಮಹತ್ತರವಾದ ಪಾತ್ರ ಅತ್ಯಗತ್ಯವಾಗಿತ್ತು, ಬಿಟ್ಟುಕೊಡುವಂತದ್ದಾಗಿರಲಿಲ್ಲ.(ಪೀಪಲ್ಸ್ ಡೆಮಾಕ್ರಸಿ 7.5.95)

ಸ್ವಾತಂತ್ರ್ಯ ಹೋರಾಟದ ಕಾಲದ ಮೌಲ್ಯವನ್ನು ಉಳಿಸಿ, ನವಯುವಕರಲ್ಲಿ ಆ ಮೌಲ್ಯ ಮೈಗೂಡಿಸಿ ಮಾರ್ಕ್ಸ್‌ವಾದಕ್ಕಾಗಿ, ಪಕ್ಷಕ್ಕಾಗಿ, ಕಾರ್ಮಿಕವರ್ಗಕ್ಕಾಗಿ ಎಂಥ ಅಡೆತಡೆ, ಯಾವ ಸಂಕಷ್ಟ ಬಂದರೂ ಕೂಡ ಅವುಗಳನ್ನು ಎದುರಿಸಿ ನಿಷ್ಠೆಯಿಂದ ದುಡಿಯುವಂತೆ ಮಾಡುವ ಜವಾಬ್ದಾರಿ ಹಿರಿಯ ಮುಖಂಡರದ್ದಾಗಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಹದಿನೈದನೆಯ ಕಾಂಗ್ರೆಸ್ಸಿನ ಹಿನ್ನೆಲೆಯಲ್ಲಿ 48 ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸುವಾಗ, ಕರ್ನಾಟಕದಲ್ಲಿ ಬಲಿಷ್ಠವಾದ ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳನ್ನು ಕಟ್ಟಲು ಸಾಕಷ್ಟು ಅವಕಾಶ ಎದ್ದು ನಿಂತಿರುವಾಗ, ಅವುಗಳನ್ನೆಲ್ಲ ಉಪಯೋಗಿಸಲು ನಿಷ್ಠಾವಂತ ಕಾರ್ಯಕರ್ತರನ್ನು ಪಳಗಿಸಿ ಜನರ ಮಧ್ಯೆ ಕಳುಹಿಸಬೇಕಾದ ಅವಶ್ಯಕತೆಯಿರುವುದರಿಂದ ಹಳೇ ಮೌಲ್ಯ ಮತ್ತು ಹೊಸ ಸ್ಫೂರ್ತಿಯಿಂದ ಮುಂದೆ ಸಾಗುವ, ಬಲಿಷ್ಠವಾದ ಪಕ್ಷ ಕಟ್ಟುವ ನಿರ್ಧಾರ ಕೈಗೊಳ್ಳೋಣ.

ಶೋಷಣೆಗೆ ಒಳಗಾದ ಕೋಟ್ಯಂತರ ಸಾಮಾನ್ಯ ಜನರಲ್ಲಿ ಅಚಲ ವಿಶ್ವಾಸ ಮೂಡುವ ಸಮಾಜದಲ್ಲಿ ವರ್ಗ ಸಂಘರ್ಷದ ರಾಜಕೀಯವನ್ನು ನಡೆಸಲು ದೃಢ ಮನಸ್ಸು ಮಾಡುವುದೇ ನಮಗೆ ಬೆಳೆಯಲು ಏಕ ಮಾತ್ರ ದಾರಿ.ವರ್ಗ ಸಂಘರ್ಷದಿಂದಲೇ ಪಕ್ಷ ಬೆಳೆಯುತ್ತದೆ. ವರ್ಗ ಸಂಘರ್ಷದಿಂದಲೇ ಕಾರ್ಯಕರ್ತರಲ್ಲಿ ಧೈರ್ಯ ತುಂಬುತ್ತದೆ. ಸಂಘರ್ಷದಿಂದಲೇ ನಿಷ್ಠೆ, ಐಕ್ಯತೆ,ಸಮರ್ಪಣಾ ಭಾವನೆಗಳೆಲ್ಲ ದೃಢಪಡುತ್ತವೆ. ಸಂಘರ್ಷವನ್ನು ಬೆಳೆಸೋಣ, ಉಕ್ಕಿನಂತ ಕಾರ್ಯಕರ್ತರನ್ನು ಸೃಷ್ಟಿಸೋಣ. ಹಿಂದಿನ ಮೌಲ್ಯವನ್ನು ಪುನರ್ಜೀವಗೊಳಿಸೋಣ, ಕಾಂಗ್ರೆಸ್-ಬಿಜೆಪಿಯನ್ನು ಸೋಲಿಸಲು, ಎಡಪಕ್ಷಗಳ, ಜನತಾದಳ-ರಾಷ್ಟ್ರೀಯರಂಗ ಬಲಗೊಳಿಸಲು, ಬಲಿಷ್ಠವಾದ ಸಿಪಿಐ(ಎಂ) ಪಕ್ಷ ಕಟ್ಟಲು ಮುಂದಾಗೋಣ. ❖

-ಕಾರ್ತಿಕ್ ರಾಯ್

ಶ್ರೀಮಂತರ ಪರವಾದ ಉದಾರೀಕರಣಕ್ಕೊಂದು ಬಡವರ ಪರವಾದ ಪರ್ಯಾಯ

"ಆರ್ಥಿಕ ಉದಾರೀಕರಣ"ದ ನಾಲ್ಕು ವರ್ಷಗಳ ನಂತರ ನರಸಿಂಹರಾವ್ ಸರಕಾರ ಮತ್ತೆ ಬಡವರನ್ನು ನೆನಪಿಸಿಕೊಳ್ಳುವಂತಾಗಿದೆ. ಆದರೂ ಈ "ಉದಾರೀಕರಣದ ಫಲ"ಗಳ ವಸ್ತುನಿಷ್ಠ ವಿಮರ್ಶೆ ನಡೆಸಲು ಅದು ಈಗಲೂ ಸಿದ್ಧವಿಲ್ಲ. "ಉದಾರೀಕರಣದ ಫಲವಾಗಿ ಕಟ್ಟಿದ" ವಿದೇಶೀ ವಿನಿಮಯ ಭಂಡಾರವನ್ನು ಬಳಸಿ ಬಳಕೆ ವಸ್ತುಗಳನ್ನು ಆಮದು ಮಾಡಿಕೊಳ್ಳುವ ಬಗ್ಗೆ ಆ ಮೂಲಕ ನಮ್ಮ ಉದ್ದಿಮೆಗಳನ್ನು ಸಾಯಿಸುವ ಬಗ್ಗೆ ಸರಕಾರ ಯೋಚಿಸುತ್ತಿದೆಯೇ ವಿನಹ ಈ ದೇಶದೊಳಗಿನ ಶಿಲ್ಕನ್ನು ಬಳಸಿಕೊಂಡು ಒಂದೆಡೆ ಬಡತನ ನೀಗಿಸುತ್ತಾ ಇನ್ನೊಂದೆಡೆ ಬೆಳವಣಿಗೆಯ ಪ್ರಮಾಣ ಹೆಚ್ಚಿಸುವ ಬಗ್ಗೆ ಮಾತ್ರ ಯೋಚಿಸುತ್ತಿಲ್ಲ. ಮೊದಲನೆಯದು ಮೇಲ್ವರ್ಗದ ಜನರ ಪರವಾಗ ನಿಲುವು. ಎರಡನೆಯದು ಜನಪರವಾದ ನಿಲುವು. ಇದು ಕಾರ್ಯ ಸಾಧ್ಯವಾದ ನಿಲುವು ಹೇಗೆ ಎಂದು ಈ ಲೇಖನ ಪರಿಶೀಲಿಸಿದೆ. ಸಂಗ್ರಹಾನುವಾದ: ಜಿ.ಎಸ್.ಮಣಿ

ಬಡತನ ನಿರ್ಮೂಲನೆ ಮತ್ತು ಜನರ ಜೀವನಮಟ್ಟ ಸುಧಾರಣೆಗೆ ಈ ಕೆಳಗಿನ ಮೂರನ್ನು ಸಾಧಿಸಬೇಕು.

1. ಮೊದಲನೆಯದಾಗಿ ಸಾಕಷ್ಟು ಪ್ರಮಾಣದ ಆರ್ಥಿಕ ಬೆಳವಣಿಗೆ ಇರಬೇಕು. ಇದರಿಂದ ಬಳಕೆಯ ಮೂಲಗಳು ಹೆಚ್ಚುತ್ತಿರಬೇಕು.

2. ಎರಡನೇಯದಾಗಿ ಈ ಬೆಳವಣಿಗೆಯ ರೀತಿ ಹೇಗಿರಬೇಕೆಂದರೆ ಈ ಬೆಳವಣಿಗೆಯಿಂದಾಗಿಯೇ ಸಮಾಜದಲ್ಲಿ ಸಂಪತ್ತಿನ ಹಂಚಿಕೆ ಸಮಾನವಾಗಿರುವಂತಿರಬೇಕು.

3. ಮೂರನೇಯದಾಗಿ ಈ ಬೆಳವಣಿಗೆಯನ್ನು ಸಾಧಿಸುತ್ತಿರುವಂತೆಯೇ ಅಂದರೆ ಈ ಬೆಳವಣಿಗೆ ಆಗುವಂತೆ ಮಾಡುತ್ತಿರಬೇಕಾದರೆ ಬಡತನವನ್ನು ಕಡಿಮೆ ಮಾಡಲು ಬಡತನದ ನೋವನ್ನು ಕಡಿಮೆ ಮಾಡಲು ತತ್ ಕ್ಷಣದ ಕ್ರಮಗಳನ್ನು ಕೈಗೊಳ್ಳಬೇಕು. ಯಾಕೆಂದರೆ ಈ ಬೆಳವಣಿಗೆ ಆಗಿ ಅದರ ಫಲಗಳು ಬಡವರಿಗೆ ದೊರಕಲು ಸ್ವಲ್ಪ ತಡವಾಗಬಹುದು. ಆದ್ದರಿಂದಲೇ ಈ ತತ್ ಕ್ಷಣದ ಕ್ರಮಗಳು ಅಗತ್ಯವಾಗುವುದು. ಜನತೆಯ ಬಗ್ಗೆ ಕಳಕಳಿ ಇರುವ ಸರ್ಕಾರ ಜನರ ನೋವನ್ನು ಆದಷ್ಟು ಕಡಿಮೆ ಮಾಡಲು ಪ್ರಯತ್ನಿಸಬೇಕು.

ಹೂಡಿಕೆ ಅನುಪಾತ ಮತ್ತು ಬೆಳವಣಿಗೆ

ಬೆಳವಣಿಗೆಯ ಪ್ರಮಾಣವನ್ನು (ದರವನ್ನು) ಹೆಚ್ಚಿಸಬೇಕೆಂದರೆ ಹೂಡಿಕೆ ಅನುಪಾತವನ್ನು ಹೆಚ್ಚಿಸಬೇಕು. ಒಟ್ಟುತ್ಪಾದನೆಯಲ್ಲಿ ಹೆಚ್ಚಿನದ್ದು ಹೂಡಿಕೆಯಾಗಬೇಕು. ಆಗ ಬೆಳವಣಿಗೆ ತೀವ್ರವಾಗಿ ಆಗಲು ಸಾಧ್ಯವಾಗುತ್ತದೆ. ಒಟ್ಟುತ್ಪಾದನೆಯ ಎಷ್ಟು ಪ್ರಮಾಣದ ಹೂಡಿಕೆ ಬಂಡವಾಳವಾಗಿ ಪರಿವರ್ತಿತಾಗುತ್ತದೆ ಎಂಬುದನ್ನೇ ಈ ಹೂಡಿಕೆಯ ಅನುಪಾತ ಹೇಳುವುದು. ಚೀನಾದಂತಹ ಹೆಚ್ಚು ಬೆಳವಣಿಗೆಯ ದೇಶದಲ್ಲಿ ಈ ಅನುಪಾತ ಶೇ 40ರಷ್ಟಿದೆ. 'ಆರ್ಥಿಕ ಪವಾಡ' ಎಂದು ಬಣ್ಣಿಸಲ್ಪಡುವ ಪೂರ್ವ ಮತ್ತು ಏಶಿಯಾ ದೇಶಗಳಲ್ಲಿಯೂ ಈ ಹೂಡಿಕೆ ಅನುಪಾತ ಶೇ. 35ಕ್ಕೂ ಹೆಚ್ಚಿಗೆ ಇದೆ. ಆದರೆ ಭಾರತದಲ್ಲಿ ಈ ಅನುಪಾತ ಕುಸಿದಿದೆ. ಉದಾರೀಕರಣ ಬಂದ ನಂತರ ಈ ಕುಸಿತ ಕಂಡಿರುವುದು - 1990-91ರಲ್ಲಿ ಇದು ಶೇ. 27 ಇದ್ದದ್ದು 1991-92ರಲ್ಲಿ ಇದು ಶೇ. 23ಕ್ಕೆ ಇಳಿದಿದೆ.


'ಹೂಡಿಕೆ ಅನುಪಾತ ಅಷ್ಟು ಮುಖ್ಯವಲ್ಲ, ಇರುವ ಸಂಪನ್ಮೂಲಗಳ ಸಮರ್ಥ ಬಳಕೆ ಬಹಳ ಮುಖ್ಯ ಎಂಬ ವಾದವೊಂದಿದೆ. ಈ ವಾದದ ಪ್ರಕಾರ ಪ್ರತಿ ಒಂದು ಅಳತೆಯ ಹೂಡಿಕೆಗೆ ಎಷ್ಟು ಹೆಚ್ಚು ಉತ್ಪಾದನೆ ಆಯಿತು ಎಂಬುದೇ ಮುಖ್ಯ. ಈ ವಾದದ ಪ್ರಕಾರ ಕಡಿಮೆ ಹೂಡಿಕೆ ಅನುಪಾತವಿದ್ದರೂ ಈ ಸಮರ್ಥ ಬಳಕೆಯಿಂದಾಗಿ ಹೆಚ್ಚು ಉತ್ಪಾದನೆ ಸಾಧ್ಯ. ಆದರೆ ಈ ವಾದದಲ್ಲಿ ಎಷ್ಟು ಹುರುಳಿದೆ?

ಇಪ್ಪತ್ತೈದು ಅಭಿವೃದ್ಧಿಶೀಲ ದೇಶಗಳ ಅಂಕೆ-ಸಂಖ್ಯೆಗಳನ್ನು ವಿಶ್ಲೇಷಿಸಿದರೆ ಶೇ. 80ರಷ್ಟು ದೇಶಗಳ ನಡುವಿನ ವ್ಯತ್ಯಾಸ ಈ ಹೂಡಿಕೆ ಅನುಪಾತದ ವ್ಯತ್ಯಾಸದಿಂದಲೇ ಆಗಿರುವುದು

ಟೈಮ್ಸ್ ಆಫ್ ಇಂಡಿಯಾದಲ್ಲಿ ಲಕ್ಷ್ಮಣ್



ಆಕೆ ಅರ್ಥ ಕೆ.ಜಿ. ಟೊಮೋಟೋ ಖರೀದಿಸಿದ್ದಾರೆ. ಬಹುಶಃ ಕಪ್ಪು ಹಣ ಇರಬೇಕು!



ಟೈಮ್ಸ್ ಆಫ್ ಇಂಡಿಯಾದಲ್ಲಿ ಪೊನ್ನಪ್ಪ

ಕಂಡುಬರುತ್ತದೆ. 1968ರಿಂದ 1988ರ ಅವಧಿಗೆ ಈ ದೇಶಗಳ ಸರಾಸರಿ ಹೂಡಿಕೆ ಅನುಪಾತ ನೋಡಿದರೆ ಈ ದೇಶಗಳಲ್ಲಿನ ಭಿನ್ನತೆಯ ಮೂಲ ಗೊತ್ತಾಗುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ, ಬಂಡವಾಳದ ಸಮರ್ಥ ಬಳಕೆಯ ವಾದದಲ್ಲಿ ಹುರುಳಿಲ್ಲದಿರುವುದು ಗೊತ್ತಾಗುತ್ತದೆ. ಈ ದೇಶಗಳ ಪರ್ಮಿಟ್ಟು/ಲೈಸನ್ನು ಇತ್ಯಾದಿಗಳ ಮೇಲೆ ಅವುಗಳ ಆರ್ಥಿಕ ಉನ್ನತಿ ಅವನತಿ ನಿಂತಿರುವಂತೆ ಕಾಣುವುದಿಲ್ಲ. ಆದರೆ ಇಂತಹ ನೀತಿಗಳ (ಪರ್ಮಿಟ್ಟು/ಲೈಸನ್ನುಗಳು) ಪರಿಣಾಮ ಹೂಡಿಕೆಯ ಅನುಪಾತದ ಮೇಲೆ ಹೇಗೆ ಆಗುತ್ತದೆ ಎಂಬುದರ ಮೇಲೆ ಆಯಾ ದೇಶಗಳ ಬೆಳವಣಿಗೆ ಪ್ರಮಾಣ ಅವಲಂಬಿಸಿರುತ್ತದೆ. ಈ ತಳಹದಿಯ ಮೇಲೆ ನಮ್ಮ ದೇಶದಲ್ಲಿನ ಹೊಸ ಆರ್ಥಿಕ ನೀತಿಗಳು ದೇಶಕ್ಕೆ ಅಭಿವೃದ್ಧಿ ತರುವಲ್ಲಿ ವಿಫಲವಾಗಿವೆ ಎನ್ನಬೇಕಾಗುತ್ತದೆ.

ಅತಿಲಾಭದಾಸೆಯ ವಿದೇಶೀ ಹೂಡಿಕೆ ನಿಷ್ಪ್ರಯೋಜಕ

ಈ ವೈಫಲ್ಯಕ್ಕೆ ಕಾರಣ ಈ ಹೊಸ ಆರ್ಥಿಕ ನೀತಿಗಳ ಹಿಂದೆ ಇರುವ ಕಲ್ಪನೆಗಳಲ್ಲೇ ಇದೆ. ಈ ನೀತಿಗಳ ಹಿಂದಿನ ಒಂದು ವಾದದ ಪ್ರಕಾರ ನಾವು ನಮ್ಮ ಆರ್ಥಿಕದ ಬಾಗಿಲನ್ನು ಹೊರಜಗತ್ತಿಗೆ ಪೂರ್ಣವಾಗಿ ತೆರೆದರೆ 'ವಿದೇಶೀ ನೇರ ಹೂಡಿಕೆ' ನಮ್ಮ ದೇಶಕ್ಕೆ ಹರಿದು ಬರುತ್ತದೆ. ಇಲ್ಲಿ ಉತ್ಪಾದನೆ ಹೆಚ್ಚುತ್ತದೆ ಎಂಬುದು. ಆದರೆ ನಿಜದಲ್ಲಿ ಇಂತಹದ್ದು ಎಲ್ಲೂ ಆಗಿಯೇ ಇಲ್ಲ. ಇಲ್ಲಿ ಉತ್ಪಾದನೆಯ ಜಾಗತೀಕರಣ ಆಗೇ ಇಲ್ಲ. ಆದರೆ ಹಣಕಾಸಿನ ಜಾಗತೀಕರಣ ಆಗಿದೆ. ಅಂದರೆ ಉತ್ಪಾದನೆಗಾಗಿ ವಿದೇಶೀ ಬಂಡವಾಳ ನಮ್ಮ ದೇಶದೊಳಗೆ ಹರಿದು ಬರುವ ಬದಲು ಅತೀ ಲಾಭಕ್ಕಾಗಿ ವಿದೇಶೀ ಹಣಕಾಸು ನಮ್ಮ ದೇಶದೊಳಕ್ಕೆ ಹರಿದು ಬರುತ್ತದೆ. ಈ ಹಣಕಾಸು ಇಲ್ಲಿ 'ಸಟ್ಟಾ' ವ್ಯವಹಾರ ಮಾಡುತ್ತದೆಯೇ ಹೊರತು ಉತ್ಪಾದನೆಗೆ ಬೇಕಾದ ಹೂಡಿಕೆಯನ್ನಲ್ಲ.

ಚೀನಾ ಮತ್ತು ಆಗ್ನೇಯ ಏಶಿಯಾ ಪ್ರದೇಶದಲ್ಲಿ ವಿದೇಶೀ ಹೂಡಿಕೆ ಬಂದಿರುವ ಬಗ್ಗೆ ಬಹಳ ಲೇಖನಗಳು ಬಂದಿವೆ. ಆದರೆ ಈ ಹೂಡಿಕೆಯ ಬಹುತೇಕ ಪ್ರಮಾಣ ಆಂತರಿಕವಾಗೇ ಬಂದಿರುವಂತಹದ್ದು. ಉದಾಹರಣೆಗೆ ತೈವಾನ್ ನಿಂದ ಈ ಪ್ರದೇಶದ ಇತರ ದೇಶಗಳಿಗೆ ಹರಿದು ಬಂದ ಹೂಡಿಕೆ ಇಲ್ಲೂ ಹೂಡಿಕೆ ಅನುಪಾತ ಹೆಚ್ಚಾಗಿರುವ ಕಡೆಗೇ ಈ ವಿದೇಶೀ ಹೂಡಿಕೆ ಹೆಚ್ಚಾಗಿ ಬಂದಿದೆ.

ಖಾಸಗಿ ಹೂಡಿಕೆ ಮತ್ತು ಸಾರ್ವಜನಿಕ ಹೂಡಿಕೆ

ಇನ್ನೊಂದು ತಪ್ಪು ಕಲ್ಪನೆ ಎಂದರೆ ಖಾಸಗಿ ವಲಯದ ಮೇಲಿನ ನಿಬಂಧನೆಗಳನ್ನು ತೆಗೆದರೆ ಈ ವಲಯ ದೊಡ್ಡ ಪ್ರಮಾಣದಲ್ಲಿ ಹೂಡಿಕೆ ಮಾಡುತ್ತದೆ ಎಂಬುದು. ಇದು ಸುಳ್ಳು. ಯಾಕೆಂದರೆ ಎಲ್ಲಿ ಸಾರ್ವಜನಿಕ ಹೂಡಿಕೆ ಇದೆಯೊ ಅಲ್ಲಿಗೇ ಹೆಚ್ಚು ಖಾಸಗಿ ಹೂಡಿಕೆ ಬರುವುದು. ಆದ್ದರಿಂದಲೇ ನಮ್ಮ ದೇಶದಲ್ಲಿ ಹೊಸ ಆರ್ಥಿಕ ನೀತಿ ಬಂದ ಮೇಲೆ ಸಾರ್ವಜನಿಕ ಹೂಡಿಕೆ ಕಡಿಮೆಯಾದ್ದರಿಂದ ಖಾಸಗಿ ಹೂಡಿಕೆಯೂ ಕಡಿಮೆಯಾಗಿ ಹೂಡಿಕೆ ಅನುಪಾತವೂ ಕಡಿಮೆಯಾಗಿ ಹೋಗಿದೆ.

ಈ ಹೂಡಿಕೆ ಅನುಪಾತ ಕಡಿಮೆ ಆಗಿರುವುದು ನಮ್ಮ ವ್ಯಾಪಾರ ಬಾಕಿ ತೀರಿಸಲು ಹೋಗಿ ಎಂದು ವಾದ ಹೂಡಬಹುದು ಆದರೆ ಅದು ಆಗಿಲ್ಲ. ಹೂಡಿಕೆ ಅನುಪಾತದ ಜೊತೆಗೆ ಉಳಿತಾಯದ ಪ್ರಮಾಣವೂ ಕಡಿಮೆ ಆಗಿದೆ. ಅದು 1990-91ರಲ್ಲಿ ಶೇ. 23.7 ಇದ್ದದ್ದು 1993-94ರಲ್ಲಿ ಶೇ. 20.2 ಕ್ಕೆ ಇಳಿದಿದೆ. ಹೂಡಿಕೆ ಕಡಿಮೆಯಾಗುವುದರ ಜೊತೆಗೇ ವಿದೇಶೀ ಸಾಲ ಕಡಿಮೆ ಆಗಿದೆಯೇ ಅದೂ ಆಗಿಲ್ಲ, ದೇಶದ ಒಳಗಿನ ಬಳಕೆ ಹೆಚ್ಚಾಗಿದೆ. ಹಾಗಾದರೆ ದೇಶದ ಬಡಜನ/ದುಡಿವ ಜನ ಹೆಚ್ಚು ಖರ್ಚು ಮಾಡುತ್ತಿದ್ದಾರೆಯೇ? ಖಂಡಿತವಾಗಿಯೂ ಇಲ್ಲ. ಬೆಲೆಗಳು ಗಗನಕ್ಕೇರಿರುವುದರ ಜೊತೆಗೆ ಬಡಜನರ ಆದಾಯದ ನಿಜಮೌಲ್ಯವೇ ಕಡಿಮೆ ಆಗಿರುವುದರಿಂದ. ಬಡಜನ ಹೆಚ್ಚು ಖರ್ಚು ಮಾಡುವುದು ಸಾಧ್ಯವಿಲ್ಲವಲ್ಲ. ಶ್ರೀಮಂತ ವರ್ಗವೇ ಹೆಚ್ಚು ಖರ್ಚು ಮಾಡುತ್ತಿರುವುದು.

ಈ ಹಿಂದೆ ಜಗದ್ವಿಖ್ಯಾತ ಅರ್ಥಶಾಸ್ತ್ರಜ್ಞರಲ್ಲೊಬ್ಬರಾದ ಪ್ರೊ. ಅಮಾರ್ತ್ಯಸೇನರು ಒಂದು ಮಾತು ಹೇಳಿದ್ದರು. ದೇಶದ ಒಟ್ಟುತ್ಪಾದನೆಯ ಶೇ. 5ರಷ್ಟನ್ನು ಬಡವರಿಗೆ ವರ್ಗಾಯಿಸುವುದು ಸಾಧ್ಯವಾದರೆ ಬಡತನ ನಿರ್ಮೂಲನವಾಗುತ್ತದೆ ಎಂದು. ಆಗ ಬಡವರ ಸಂಖ್ಯೆ ಒಟ್ಟು ಜನಸಂಖ್ಯೆಯ ಶೇ. 40ರಷ್ಟಿತ್ತು. ಸರ್ಕಾರದಲ್ಲಿರುವವರು ಈ ಪ್ರಮಾಣ ಈಗ ಮೂರನೇ ಒಂದು ಭಾಗಕ್ಕೆ ಇಳಿದಿದೆ ಎನ್ನುತ್ತಿದ್ದಾರೆ. ಇದನ್ನು ಒಪ್ಪಿಕೊಳ್ಳೋಣ. ಈದರೆ ಈಗ ಬಡತನ ನಿರ್ಮೂಲನ ಮಾಡಲು ದೇಶದ ಒಟ್ಟುತ್ಪಾದನೆಯ ಶೇ. 4ಕ್ಕಿಂತ ಕಡಿಮೆಯಷ್ಟನ್ನು



"We are with the people for 18 years"

ಬಡವರಿಗೆ ವರ್ಗಾಯಿಸಿದರೆ ಸಾಕು. ಅಂದರೆ ದೇಶ 1990-91ರಲ್ಲಿದ್ದ ಬಳಕೆ ಅನುಪಾತ ವನ್ನು ಸಾಧಿಸಿ ಈ ಕಡಿಮೆಯಾದ ಬಳಕೆಯಿಂ ದಾಗಿ ಒದಗಿಬರುವ ಸಂಪನ್ಮೂಲವನ್ನು ಬಡ ವರಿಗೆ ವರ್ಗಾಯಿಸಿದರೆ ಬಡತನವನ್ನು ಇಲ್ಲವಾ ಗಿಸಬಹುದು.

ಪರ್ಯಾಯ ತಂತ್ರ

ಇದರಿಂದ ಒಂದು ಪರ್ಯಾಯ ಸೂತ್ರ ಹುಟ್ಟಿ ಕೊಳ್ಳುತ್ತದೆ. ಮೇಲ್ವರ್ಗದ ಜನರ ಬಳಕೆ (ಖರ್ಚು)ಯಲ್ಲಿ ಕಡಿತ ಮಾಡಿ ಅದನ್ನೇ ಸಂಪ ನ್ಮೂಲವಾಗಿಸಿ ಬಡವರಿಗೆ ವರ್ಗಾಯಿಸಿದರೆ ಇದರಿಂದ ಬಡತನ ಹೊಡೆದೋಡಿಸಬಹುದು. ಆದರೆ ಈ ವರ್ಗಾವಣೆ ಭಿಕ್ಷೆಯಂತಿರಬಾರದು ಅಥವಾ ದಾನದಂತಿರಬಾರದು. ಗ್ರಾಮೀಣ ಅಭಿವೃದ್ಧಿಗೆ ಪೂರಕವಾದ ಯೋಜನೆಗಳಲ್ಲಿ ಈ ಸಂಪನ್ಮೂಲವನ್ನು ತೊಡಗಿಸಬೇಕು. ಇದರಿಂದ ಹಲವು ಸಾಧನೆಗಳು ಆಗುತ್ತವೆ.

1. ಬಡತನ ಇಲ್ಲವಾಗುತ್ತದೆ

2. ಹೂಡಿಕೆ ಅನುಪಾತ ಹೆಚ್ಚುತ್ತದೆ ಇದು ಬೆಳವಣಿಗೆಯನ್ನು ಹೆಚ್ಚಿಸುತ್ತದೆ.

3. ವಿಶಾಲ ಸಾಮಾಜಿಕ ತಳಹದಿ ಹೊಂದುವ ಇದು ಉದ್ಯೋಗಗಳನ್ನು ಹೆಚ್ಚಿಸಿ ಲಾಭದಾಯ ಕವಾಗುತ್ತದೆ.

ಇದನ್ನು ಮಾಡಿದರೆ ಚೀನಾದಲ್ಲಿರುವಂತೆ ಎರಡಂಕಿಯ ಬೆಳವಣಿಗೆಯ ಪ್ರಮಾಣ ಇಲ್ಲ ದೆಯೇ ಬಡತನವನ್ನು ತೊಡೆದು ಹಾಕಬ ಹುದು. ಈ ಗ್ರಾಮೀಣ ಯೋಜನೆಗಳಲ್ಲಿ ಕೂಲಿ ಮತ್ತು ಇತರೆ ಖರ್ಚು 50:50ರ ಪ್ರಮಾಣ ದಲ್ಲಿ ಇರುತ್ತದೆಂದುಕೊಂಡರೂ ಹೂಡಿಕೆ ಅನು ಪಾತ ಶೇ. 7ರಷ್ಟು ಆದರೆ ಬಡತನವನ್ನು ತೊಡೆದು ಹಾಕುವುದು ಸಾಧ್ಯವಾಗುತ್ತದೆ.

ಈ ಸೂತ್ರ ಯಶಸ್ವಿಯಾಗಬೇಕಾದರೆ ಕೆಲವು ಷರತ್ತುಗಳನ್ನು ಅವಶ್ಯ ಪೂರೈಸಬೇಕಾಗುತ್ತದೆ. ಮೊದಲನೆಯದಾಗಿ ಈ ಪ್ರಮಾಣದ ಖರ್ಚು ಮಾಡಿದಾಗ ಅದು ನಿಜವಾದ ಫಲಾನುಭವಿ ಗಳು ಯಾರೊ ಅವರಿಗೆ ತಲುಪಬೇಕು. ಇದಕ್ಕೆ ಈ ಫಲಾನುಭವಿಗಳು ಸ್ಥಳೀಯ ಸಂಸ್ಥೆಗಳ ರೂಪದಲ್ಲಿ ಸಂಘಟಿತರಾಗಬೇಕು. ಎರಡನೆಯ ದಾಗಿ ಈ ವೆಚ್ಚ ಹಣದುಬ್ಬರ ಉಂಟು ಮಾಡದೇ ಇರಲು ಸರಿಯಾದ ಪೂರೈಕೆ-ನಿರ್ವಹಣೆ ಮತ್ತು ಪಡಿತರ ವಿತರಣಾ ವ್ಯವಸ್ಥೆ ಆಗಬೇಕು. ಕೃಷಿ ಮೂಲಕ ಅಭಿವೃದ್ಧಿ ಹೊಂದ ಬೇಕಾದರೆ ಭೂಸುಧಾರಣೆ ಆಗಬೇಕು. ಇಲ್ಲವಾ ದರೆ ಈ ಲಾಭವೆಲ್ಲ ಭೂಮಾಲಕರ ಗುಂಪಿಗೆ ಹೋಗಿಬಿಡುತ್ತದೆ. ಇದಲ್ಲದೆ ಕೆಲವು ಪೂರಕ ಅಂತರ್ರಚನಾ ಸೌಲಭ್ಯಗಳಾದ ವಿದ್ಯುತ್ ಇತ್ಯಾ ದಿಗಳಲ್ಲಿ ಹೂಡಿಕೆ ಅವಶ್ಯವಾಗುತ್ತದೆ.

ಈಗ ಇದು ಸಾಧ್ಯವೇ ಎಂಬ ಪ್ರಶ್ನೆ. ಎರಡು ಕಾರಣಗಳಿಗಾಗಿ ಇದು ಸುಲಭ ಸಾಧ್ಯ. ಈ ಹೂಡಿಕೆ ಅನುಪಾತದ ಹೆಚ್ಚಳ ರಾತ್ರಿ ಬೆಳಗಾ ಗುವುದರಲ್ಲಿ ಆಗುವ ಅಗತ್ಯವಿಲ್ಲ. ಸ್ವಲ್ಪ ನಿಧಾ ನವಾಗಿ ಆಗಬಹುದು. ಎರಡನೇಯದಾಗಿ ದೇಶ ದಲ್ಲಿ ಈಗ 30 ದಶಲಕ್ಷ ಟನ್ನುಗಳಷ್ಟು ಆಹಾರ ಧಾನ್ಯ ಶಿಲ್ಕಿದೆ. ಮತ್ತು 30 ಶತಕೋಟಿ ಡಾಲರುಗಳಷ್ಟು ವಿದೇಶೀ ವಿನಿಮಯ ಶಿಲ್ಕಿದೆ. ಈ ಶಿಲ್ಕುಗಳನ್ನು ಸರಿಯಾಗಿ ಉಪಯೋಗಿಸಿದರೆ ಇನ್ನೂ ಕಡಿಮೆ ಸಮಯದಲ್ಲಿ ನಮ್ಮ ಉದ್ದೇಶ ಗಳನ್ನು ಸಾಧಿಸಬಹುದು.

ಉದಾಹರಣೆಗೆ ಈ ಶಿಲ್ಕಿನಿಂದ ಹೂಡಿಕೆ ಅನುಪಾತವನ್ನು ಒಟ್ಟುತ್ಪಾದನೆಯ ಶೇ. 3 ರಷ್ಟಾಗುವಂತೆ ಮಾಡಿದರೆ ಮತ್ತು ಇದು ಸತತ 3 ವರ್ಷಗಳ ಕಾಲ ಸಾಧ್ಯವಾದರೆ ಆಗ ಬಂಡವಾಳ ಉತ್ಪಾದನೆಯ ಅನುಪಾತ ಶೇ 3ರಷ್ಟಾಗಿ ನಾಲ್ಕನೇ ವರ್ಷದಿಂದ ಈ ಹೂಡಿಕೆ ಅನುಪಾತ ತನ್ನಷ್ಟಕ್ಕೆ ತಾನೇ ಮುಂದುವರೆದು ಕೊಂಡು ಹೋಗುವ ತಾಕತ್ತು ಪಡೆದುಬಿಡು ತ್ತದೆ. ಆರನೇ ವರ್ಷದಲ್ಲಿ ಹೂಡಿಕೆ ಅನುಪಾತ ಶೇ 6ರಷ್ಟನ್ನು ಮೀರುತ್ತದೆ.


ಬೇರೆ ಮಾತುಗಳಲ್ಲಿ ಹೇಳುವುದಾದರೆ ನಮ್ಮಲ್ಲಿ ಇರುವ ಸಂಪನ್ಮೂಲಗಳನ್ನು ಬಹಳ ಜಾಗರೂಕತೆಯಿಂದ ಬಳಸಿ ದೇಶದ ಜನರ ಬಡತನ ನೀಗಿಸಲು ಬಳಸಿದರೆ ಬಡತನವನ್ನು ಆರು ವರ್ಷಗಳಲ್ಲಿ ಪೂರ್ಣವಾಗಿ ತೊಡೆದು ಹಾಕಲು ಸಾಧ್ಯವಾಗುತ್ತದೆ.

ಮೇಲಿನದು ಒಂದು ಉದಾಹರಣೆ ಮಾತ್ರ. ದೇಶದ ಯೋಜನಾ ಆಯೋಗದಂತಹ ಸಂಸ್ಥೆ ಗಳು ಇದನ್ನು ಇನ್ನೂ ಕರಾರುವಕ್ಕಾಗಿ ಲೆಕ್ಕ ಹಾಕಿ ವಿವರಗಳನ್ನು ಯೋಜನಾರೂಪವಾಗಿ ರೂಪಿಸ ಬಹುದು.


ಇಲ್ಲಿ ಮುಖ್ಯ ಅಂಶ ಇದು: ವಿಶ್ವಬ್ಯಾಂಕು ಮತ್ತು ಸರ್ಕಾರದ ಪ್ರತಿಯೊಬ್ಬನೂ ವಿದೇಶೀ ವಿನಿ ಮಯ ಶಿಲ್ಕನ್ನು ಬಳಸಿಕೊಂಡು ಬಳಕೆ ವಸ್ತುಗಳ ಆಮದನ್ನು ಉದಾ ರೀಕರಿಸುವ ಮಾತನಾಡುತ್ತಿದ್ದಾರೆ. ಇವು ಮೇಲ್ವರ್ಗದ ಜನರಿಗಾಗಿ. ಇದರಿಂದ ದೇಶದೊಳಗಿನ ಉದ್ಯ ಮಗಳು ಸಾಯುತ್ತವೆ.

ಆದರೆ ಯಾರೂ ಈ ದೇಶ ದೊಳಗಿನ ಶಿಲ್ಕನ್ನು ಒಂದೇ ಕಾಲಕ್ಕೆ ಬಡತನ ನೀಗಿಸುತ್ತ ಬೆಳವಣಿಗೆ ಪ್ರಮಾಣ ಹೆಚ್ಚಿಸುವ ಮಾತನ್ನು ಯಾರೂ ಆಡುತ್ತಿಲ್ಲ. ಆದ್ದರಿಂ ದಲೇ ಈ ಉದಾಹರಣೆ. ■

'ಹಿಂದೂ'ನಲ್ಲಿ ಕೇಶವ್‌ರವರ ವ್ಯಂಗ್ಯ



> ಮಾನವ ಗೆಳೆತನದ ಕುರಿತಾದ ಪುರಾತನರ ಅತ್ಯಂತ ಮನಮುಟ್ಟುವ ಕತೆಗಳನ್ನು ಮೀರಿದ ಗೆಳೆತನ ಹೊಂದಿದ್ದ ಇಬ್ಬರು ವಿದ್ವಾಂಸರು ಮತ್ತು ಹೋರಾಟಗಾರರು ತಮ್ಮ ವಿಜ್ಞಾನವನ್ನು ಸೃಷ್ಟಿಸಿದರು ಎಂದು ಯುರೋಪಿನ ಶ್ರಮಜೀವಿ ವರ್ಗ ಹೇಳಿಕೊಳ್ಳಬಹುದು.
>
> -ಲೆನಿನ್



ಕಾರ್ಮಿಕ ವರ್ಗದ ಇನ್ನೊಬ್ಬ ಮಹಾನ್ ಬೋಧಕ

"ಈ ಸಂಪುಟವಂತೂ ಮುಗಿದಂತಾಯಿತು. ಇದು ಸಾಧ್ಯವಾದದ್ದು ಕೇವಲ ನಿನ್ನಿಂದಾಗಿಯೇ, ನನಗಾಗಿ ನೀನು ಸ್ವಯಂ ತ್ಯಾಗ ಮಾಡಿರದಿದ್ದರೆ ಬಹಶಃ ಮೂರು ಸಂಪುಟಗಳಿಗೆ ಬೇಕಾಗುವ ಅಗಾಧ ಕೆಲಸ ಮಾಡಲು ನನಗೆ ಎಂದೂ ಸಾಧ್ಯವಾಗುತ್ತಿರಲಿಲ್ಲ. ಅತ್ಯಂತ ಕೃತಜ್ಞತೆಯಿಂದ ನಾನು ನಿನ್ನನ್ನು ಅಪ್ಪಿಕೊಳ್ಳುತ್ತೇನೆ".

1857 ಆಗಸ್ಟ್ 16ರ ಮುಂಜಾನೆ ಎರಡು ಗಂಟೆಗೆ "ಬಂಡವಾಳ" ಗ್ರಂಥದ ಮೊದಲ ಸಂಪುಟದ ಪ್ರೂಫ್ ತಿದ್ದುವ ಕೆಲಸ ಮುಗಿಸಿ ಕಾರ್ಲ್ ಮಾರ್ಕ್ಸ್‌ರು ಫ್ರೆಡರಿಕ್ ಎಂಗೆಲ್ಸ್‌ರಿಗೆ ಬರೆದ ಪತ್ರದ ಒಕ್ಕಣೆಯಿದು.

ಮಾರ್ಕ್ಸ್ ನಿಧನರಾದಾಗ "ಬಂಡವಾಳ"ದ ಮೊದಲ ಸಂಪುಟವಷ್ಟೇ ಪ್ರಕಟಗೊಂಡಿತ್ತು. ಮಾರ್ಕ್ಸ್‌ರಿಗೆ ಎಂಗೆಲ್ಸ್ ರಂತಹ ಪ್ರಾಣ ಸ್ನೇಹಿತನೊಬ್ಬ ಇದ್ದಿರದಿದ್ದರೆ ಬಹಶಃ ಮಾನವೇತಿಹಾಸದಲ್ಲಿಯೇ ಅತ್ಯಂತ ಪ್ರಭಾವಶಾಲಿಯಾದ ಗ್ರಂಥವೊಂದು ಸಂಪೂರ್ಣವಾಗಿ ಪ್ರಕಟಗೊಳ್ಳುತ್ತಿರಲಿಲ್ಲ. ವಾಸ್ತವವಾಗಿ "ಬಂಡವಾಳ"ದ ಪ್ರಕಟಣೆ ಇಬ್ಬರು ಮಹಾನ್ ಮೇಧಾವಿಗಳ ಸಾಧನೆ. ಮಾರ್ಕ್ಸ್‌ವಾದ ಒಬ್ಬ ವ್ಯಕ್ತಿಯ ಹೆಸರನ್ನು ಹೊಂದಿದ್ದರೂ ಅದು ಇಬ್ಬರ ಪರಸ್ಪರ ಬೇರ್ಪಡಿಸಲಾಗದ ಕೃತಿ.

ಮೊದಲಿಗರು

ಮಾರ್ಕ್ಸ್ ಯುಗಾಂತಕಾರೀ . ಕೃತಿಗಳನ್ನು ಬಿಟ್ಟು ಹೋಗಿದ್ದಾರೆಂಬುದು ನಿಜವಾದರೂ ಅವರಿಗಿಂತ ವಯಸ್ಸಿನಲ್ಲಿ ಎರಡು ವರ್ಷ ಚಿಕ್ಕವರಾಗಿದ್ದ ಎಂಗೆಲ್ಸ್ ಹಲವು ವಿಷಯಗಳಲ್ಲಿ ಅವರಿಗೂ ಮೊದಲಿಗರಾಗಿದ್ದರು. ಈ ಇಬ್ಬರಲ್ಲಿ ಪತ್ರಿಕೆಗಳಲ್ಲಿ ಮೊದಲು ಬರೆಯಲಾರಂಭಿಸಿದವರು, ಮೊದಲು ಆಗಿನ ಸಾಮಾಜಿಕ ವ್ಯವಸ್ಥೆಯನ್ನು ವಿರೋಧಿಸಿದವರು ಎಂಗೆಲ್ಸರೇ. ಮಾರ್ಕ್ಸ್‌ಗಿಂತ ಮೊದಲೇ ಎಂಗೆಲ್ಸ್ ಕ್ರಾಂತಿಕಾರಿ ಪ್ರಜಾಪ್ರಭುತ್ವವಾದಿ ಹಾಗೂ ಗಣರಾಜ್ಯವಾದಿಯೂ ಆದರು. ನಂತರ ಕಾಲ್ಪನಿಕ ಸಮಾಜವಾದ ಹಾಗೂ ಕಮ್ಯುನಿಸಂನೆಡೆಗೆ ಮೊದಲು ಒಲವು ತೋರಿಸಿದವರೂ ಅವರೇ. ಅದೇ ರೀತಿ ರಾಜಕೀಯ ಅರ್ಥಶಾಸ್ತ್ರವನ್ನು ಕಟು ವಿಮರ್ಶೆಗೆ ಒಳಪಡಿಸುವಲ್ಲಿ ಎಂಗೆಲ್ಸರೇ ಮೊದಲಿಗರು.

ಎಂಗೆಲ್ಸರು ಹುಟ್ಟಿದ್ದು ಜರ್ಮನಿಯ ಪ್ರಷ್ಯನ್ ಚಕ್ರಾಧಿಪತ್ಯದ ಬಾರ್ಮೆನ್ ನಗರದಲ್ಲಿ 1820ರಲ್ಲಿ. ತಂದೆ ಕಾರ್ಖಾನೆ ಒಡೆಯರಾಗಿದ್ದರೂ ತನ್ನ ಹದಿನೆಂಟನೇ ವಯಸ್ಸಿನಲ್ಲಿಯೇ ಉನ್ನತ ವ್ಯಾಸಂಗವನ್ನು ಪೂರೈಸಲಾಗದೆ ಎಂಗೆಲ್ಸ್ ಕೌಟುಂಬಿಕ ಪರಿಸ್ಥಿತಿಯ ಒತ್ತಡದಿಂದಾಗಿ ವಾಣಿಜ್ಯ ಕಂಪೆನಿಯೊಂದರಲ್ಲಿ ಕಾರಕೂನನಾಗಿ ಕೆಲಸಕ್ಕೆ ಸೇರಿಕೊಂಡರು. ಆದರೂ ಇದರಿಂದ ಅವರ ವೈಜ್ಞಾನಿಕ, ರಾಜಕೀಯ ಅಭ್ಯಾಸಕ್ಕೆ, ನಂತರ ದರ್ಶನಶಾಸ್ತ್ರದ ಅಧ್ಯಯನಕ್ಕೂ ಅಡ್ಡಿಯೇನೂ ಆಗಲಿಲ್ಲ. ಎಂಗೆಲ್ಸ್ ನಿರಂಕುಶಾಡಳಿತದ ಬದ್ಧ ದ್ವೇಷಿಯೂ, ಪ್ರಖ್ಯಾತ ದಾರ್ಶನಿಕ ಹೆಗೆಲ್ ರ ಅನುಯಾಯಿಯೂ ಆದರು. ಆದರೆ ಹೆಗೆಲ್ ರಂತೆ ಅವರು ಭಾವನಾವಾದಿಯಾಗಿರಲಿಲ್ಲ.

1840ರಲ್ಲಿ ಪ್ರಷ್ಯಾದ ಸೈನ್ಯದಲ್ಲಿ ಸ್ವಯಂಸೇವಕರಾಗಿ ದುಡಿದ ಎಂಗೆಲ್ಸ್ 1842ರಲ್ಲಿ ಇಂಗ್ಲೆಂಡಿನ ಮ್ಯಾಂಚೆಸ್ಟರ್ ನಲ್ಲಿ ತನ್ನ ತಂದೆ ಶೇರುದಾರರಾಗಿದ್ದ ಕಂಪೆನಿಯಲ್ಲಿ ನೌಕರಿಗೆ ಸೇರಿದರು. ಅಲ್ಲಿ ಕಾರ್ಖಾನೆಯ ಕಛೇರಿಯಲ್ಲೇ ಸುಮ್ಮನೆ ಕೂತಿರದೆ, ಕಾರ್ಮಿಕರು ಜೀವಿಸುತ್ತಿದ್ದ ಅತ್ಯಂತ ಕಿಕ್ಕಿರಿದ ಕೊಳಚೆ ಪ್ರದೇಶಗಳಲ್ಲಿ ಸುತ್ತಾಡಿದರು. ಕಾರ್ಮಿಕರ ಬಡತನವನ್ನು ಕಣ್ಣಾರೆ ಕಂಡರು. ಆದರೆ ನಮ್ಮಲ್ಲಿ ಹಲವು "ಸಮಾಜವಾದಿ"ಗಳು ಎಂದು ಹೇಳಿಕೊಳ್ಳುವವರಂತೆ ತಮ್ಮ ಆಸಕ್ತಿಯನ್ನು ಅವರು ವೈಯಕ್ತಿಕ ವೀಕ್ಷಣೆಗಷ್ಟೇ ಸೀಮಿತಗೊಳಿಸಿ ತಮ್ಮ 'ಮರುಕ', 'ಮಾನವೀಯತೆ'ಯ ಬಗ್ಗೆ ಬೆನ್ನು ತಟ್ಟಿಕೊಂಡು ಧನ್ಯಭಾವ ತಾಳಲಿಲ್ಲ. ಬ್ರಿಟಿಷ್ ಕಾರ್ಮಿಕ ವರ್ಗದ ಕುರಿತಾದ ಏನೇ ಬರಹ, ದಸ್ತಾವೇಜು ದೊರೆತರೂ ಅದನ್ನು ಅಧ್ಯಯನ ಮಾಡಿದರು. ಈ ಎಲ್ಲಾ ವೀಕ್ಷಣೆ, ಅನುಭವ ಹಾಗೂ ಅಧ್ಯಯನಗಳ ಫಲವೇ ಅವರ ಗ್ರಂಥ "ಇಂಗ್ಲೆಂಡಿನಲ್ಲಿ ಕಾರ್ಮಿಕ ವರ್ಗದ ಪರಿಸ್ಥಿತಿ". 1845ರಲ್ಲಿ ಇದು ಪ್ರಕಟವಾಯಿತು. ಶ್ರಮ ಜೀವಿ ವರ್ಗ ಅತ್ಯಂತ ಸಂಕಷ್ಟಕ್ಕೊಳಗಾದ ವರ್ಗ ಮಾತ್ರವಲ್ಲ, ಅದರ ಅವಮಾನಕರ ಆರ್ಥಿಕ ದುಸ್ಥಿತಿ ಹೋರಾಟಕ್ಕೆ ಮುನ್ನುಗ್ಗದಂತೆ ಅದನ್ನು ತಡೆಯ ಹಿಡಿಯಲಾರದು. ಅಂತಿಮ ವಿಮೋಚನೆಗಾಗಿ ಹೋರಾಟ ಅನಿವಾರ್ಯ. ಈ ಹೋರಾಟದಲ್ಲಿ ಶ್ರಮಜೀವಿ ವರ್ಗ ತನಗೆ ತಾನೇ ಸಹಾಯ ಮಾಡಿಕೊಳ್ಳುತ್ತದೆ. ಸಮಾಜವಾದದಲ್ಲಿಯಷ್ಟೇ ತಮ್ಮ ಮುಕ್ತಿ ಅಡಗಿದೆಯೆಂಬುದನ್ನು ಕಾರ್ಮಿಕರು ತಮ್ಮ ವರ್ಗದ ರಾಜಕೀಯ ಚಳುವಳಿಯ ಮೂಲಕ ಮನಗಾಣುತ್ತಾರೆ. ಅದೇ ರೀತಿ ಸಮಾಜವಾದವೆಂಬುದು ಕಾರ್ಮಿಕರ ರಾಜಕೀಯ ಹೋರಾಟದ ಧ್ಯೇಯವಾದಾಗ ಮಾತ್ರ ಅದೊಂದು ಕೇವಲ ಕನಸಾಗಿ ಉಳಿಯದೆ ಒಂದು ಶಕ್ತಿಯಾಗುತ್ತದೆ. ಈ ವಿಚಾರಗಳನ್ನು ಈಗ ಎಲ್ಲಾ ವಿಚಾರಶೀಲರೂ, ಪ್ರಗತಿಗಾಮಿಗಳೂ ಒಪ್ಪುತ್ತಾರೆ. ಆದರೆ

1845ರಲ್ಲಿ ಅವು ಸಂಪೂರ್ಣ ಹೊಸ ವಿಚಾರಗಳಾಗಿದ್ದವು.

ಚಾರಿತ್ರಿಕ ಗೆಳೆತನ ಆರಂಭ

1930ರ ದಶಕದ ಅಂತ್ಯದ ವೇಳೆಗಾಗಲೇ ಎಂಗೆಲ್ಸರು ಮಾರ್ಕ್ಸ್‌ರ ಅದಮ್ಯ ಶಕ್ತಿಯ, ಪ್ರತಿಭೆಯ ಬಗ್ಗೆ ಕೇಳಿದ್ದರು. 1842ರಲ್ಲಿ ಇಂಗ್ಲೆಂಡಿಗೆ ಹೋಗುವ ದಾರಿಯಲ್ಲಿ ಅವರು ಜರ್ಮನಿಯ ಕ್ಯೋಲ್ನ್ ನಗರದಲ್ಲಿ "ರೈನಿಷೆ ಜೈತುಂಗ್" ಪತ್ರಿಕೆಯ ಕಛೇರಿಗೆ ಭೇಟಿಕೊಟ್ಟು, ಆಗ ಪತ್ರಿಕೆಯ ಸಂಪಾದಕರಾಗಿದ್ದ ಮಾರ್ಕ್ಸ್‌ರನ್ನು ಭೇಟಿಯಾಗಿದರು. ಆದರೆ ಪರಿಚಯ ಗಾಢ ಸ್ನೇಹವಾಗಿ ಪರಿವರ್ತನೆಗೊಂಡದ್ದು ಅವರಿಬ್ಬರೂ ಎರಡನೇ ಸಲ ಭೇಟಿಯಾದ ನಂತರವೇ: 1844ರಲ್ಲಿ ಜರ್ಮನಿಗೆ ಹಿಂತಿರುಗುವ ದಾರಿಯಲ್ಲಿ ಪ್ಯಾರಿಸ್ ನಲ್ಲಿ ಹತ್ತು ದಿನ ಮಾರ್ಕ್ಸ್‌ರೊಂದಿಗಿದ್ದು ಮಾತುಕತೆ ಚರ್ಚೆಗಳ ನಂತರ ತಾವಿಬ್ಬರೂ ಬೇರೆ ಬೇರೆ ಮಾರ್ಗವಾಗಿ ಸಾಮಾಜಿಕ ಬೆಳವಣಿಗೆಯ ಬಗ್ಗೆ ಸಮಾನ ಅಭಿಪ್ರಾಯಕ್ಕೆ ತಲುಪಿರುವುದನ್ನು ಅವರು ಮನಗಂಡರು. ಭವಿಷ್ಯದ ಸೈದ್ಧಾಂತಿಕ ಹಾಗೂ ಇತರ ಎಲ್ಲಾ ಕ್ಷೇತ್ರಗಳ ಚಟುವಟಿಕೆಗಳಲ್ಲಿ ಪರಸ್ಪರ ಸಹಯೋಗದಿಂದ ಕೆಲಸ ಮಾಡಬೇಕೆಂದು ನಿರ್ಧರಿಸಿದರು. ಅಂದು ಆರಂಭವಾದ ಸ್ನೇಹ ದಿನ ದಿನಕ್ಕೂ ಗಾಢವಾಗುತ್ತಾ ಕೊನೆಯವರೆಗೂ ಮುಂದುವರೆಯಿತು. ಭಿನ್ನ ಭಿನ್ನ ಮಾನಸಿಕ ಚೌಕಟ್ಟಿನ ಈ ಇಬ್ಬರು ವೈಜ್ಞಾನಿಕ ಸಮಾಜವಾದದ ಸ್ಥಾಪಕರು ಅಂತರರಾಷ್ಟ್ರೀಯ ಕಾರ್ಮಿಕ ವರ್ಗದ ಆಂದೋಲನಕ್ಕೆ ಸೈದ್ಧಾಂತಿಕ ನೆಲೆಗಟ್ಟು ನೀಡಿ ಅದನ್ನು ಬಲಿಷ್ಠ ಶಕ್ತಿಯಾಗಿ ಬೆಳೆಸುವಲ್ಲಿ ಪರಸ್ಪರ ಪೂರಕವಾಗಿ ದುಡಿದರು.

"ಪವಿತ್ರ ಕುಟುಂಬ ಅಥವಾ ವಿಮರ್ಶಾತ್ಮಕ ವಿಮರ್ಶೆಯ ವಿಮರ್ಶೆ" ಎಂಬ ಹೆಸರಿನ ಕೃತಿ ಇವರ ಪರಸ್ಪರ ಬೌದ್ಧಿಕ ಸಹಯೋಗದ ಮೊದಲ ಫಲ. ಕೇವಲ ಸೈದ್ಧಾಂತಿಕ ವಾದ ವಿವಾದಗಳಲ್ಲೇ ಮುಳುಗಿದ್ದು ಶ್ರಮ ಜೀವಿಗಳ ಬಗ್ಗೆ ತಿರಸ್ಕಾರ ತಾಳಿದ್ದ ಬಾವೆರ್ ಮತ್ತು ಸಂಗಡಿಗರ ಪ್ರವೃತ್ತಿಯ ಖಂಡನೆ ಈ ಕೃತಿ. ಇದಕ್ಕೆ ಮೊದಲು "ಜರ್ಮನ್-ಫ್ರೆಂಚ್ ವಾರ್ಷಿಕ" ಪತ್ರಿಕೆಯಲ್ಲಿ "ರಾಜಕೀಯ ಅರ್ಥಶಾಸ್ತ್ರದ ವಿಮರ್ಶೆಯ ರೂಪುರೇಷೆಗಳು" ಎಂಬ ಎಂಗೆಲ್ಸರ ಲೇಖನ ಪ್ರಕಟಗೊಂಡಿತ್ತು. ಆಗ ಎಂಗೆಲ್ಸ್‌ಗೆ 24 ವರ್ಷ ವಯಸ್ಸು. ಪಾರಂಪರಿಕ ರಾಜಕೀಯ ಅರ್ಥಶಾಸ್ತ್ರ ಹಾಗೂ ಸಮಾಜದ ಬಗ್ಗೆ ಈ ಲೇಖನದಲ್ಲಿ ಮೂಲಭೂತ ಪ್ರಶ್ನೆಗಳನ್ನೆತ್ತಲಾಗಿತ್ತು. ಈ ಲೇಖನ ಪ್ರಕಟಗೊಂಡ ತಕ್ಷಣದಿಂದ ಎಂಗೆಲ್ಸ್ ರಾಜಕೀಯ ಅರ್ಥಶಾಸ್ತ್ರದ ಕ್ಷೇತ್ರದಲ್ಲಿ ಪ್ರಕಾಂಡ ಪಂಡಿತರೆಂದು ಪ್ರಸಿದ್ಧ ಪಡೆದರು. ವಾಸ್ತವವಾಗಿ ಇದು ವೈಜ್ಞಾನಿಕ ಸಮಾಜವಾದದ ಮೊದಲ ಆರ್ಥಿಕ ಪ್ರಬಂಧ. ಈ ಲೇಖನ ಮಂಡಿಸಿದ ಹೊಸ ವಿಚಾರಗಳನ್ನು ಮುಂದೆ ಮಾರ್ಕ್ಸ್ "ಬಂಡವಾಳ"ದಲ್ಲಿ ವಿಶದೀಕರಿಸಿದರು.


> **ಕಮ್ಯುನಿಸಂ ಎಂಬುದು ಹೋರಾಟದಲ್ಲಿ ಶ್ರಮಜೀವಿ ವರ್ಗದ ನಿಲುವಿನ ಸೈದ್ಧಾಂತಿಕ ಅಭಿವ್ಯಕ್ತಿ ಮತ್ತು ಶ್ರಮಜೀವಿ ವರ್ಗ ವಿಮೋಚನೆಯ ಪರಿಸ್ಥಿತಿಗಳ ಸೈದ್ಧಾಂತಿಕ ಮೊತ್ತ**
>
> -ಎಂಗೆಲ್ಸ್

'ಕಮ್ಯುನಿಸ್ಟ್ ಪ್ರಣಾಳಿಕೆ'

ಮುಂದೆ ಎರಡು ಮೂರು ವರ್ಷಗಳ ಕಾಲ ಎಂಗೆಲ್ಸ್ ವೈಜ್ಞಾನಿಕ ಅಧ್ಯಯನದಲ್ಲಿ ಹಾಗೂ ಕಾರ್ಮಿಕರ ನಡುವೆ ಚಟುವಟಿಕೆಗಳಲ್ಲಿ ನಿರತರಾದರು. ಈ ನಡುವೆ ಮಾರ್ಕ್ಸ್ ಹಾಗೂ ಎಂಗೆಲ್ಸ್ ಗುಪ್ತ ಜರ್ಮನ್ ಕಮ್ಯುನಿಸ್ಟ್ ಲೀಗ್ ಸಂಪರ್ಕಕ್ಕೆ ಬಂದು, ಲೀಗ್‌ನ ಆದೇಶದಂತೆ ಇಬ್ಬರು ಸೇರಿ ತಯಾರಿಸಿದ ಜಗತ್ ಪ್ರಸಿದ್ಧ "ಕಮ್ಯುನಿಸ್ಟ್ ಪ್ರಣಾಳಿಕೆ" 1845ರಲ್ಲಿ ಪ್ರಕಟವಾಯಿತು.

1848ರಲ್ಲಿ ಪ್ಯಾರಿಸ್‌ನಲ್ಲಿ ಆರಂಭವಾಗಿ ಪಶ್ಚಿಮ ಯುರೋಪಿನ ಇತರ ದೇಶಗಳನ್ನೂ ವ್ಯಾಪಿಸಿದ ಶಾಂತಿಯ ವಾತಾವರಣ ಇಬ್ಬರನ್ನೂ ತಾಯ್ನಾಡಾದ ಜರ್ಮನಿಯತ್ತ ಸೆಳೆಯಿತು. ಅಲ್ಲಿ "ನೋಯೆ ರೈನಿಷೆ ಜೇಟುಂಗ್" ಪತ್ರಿಕೆಯ ಮೂಲಕ ಇವರು ಅಲ್ಲಿನ ಕ್ರಾಂತಿಕಾರಿ ಪ್ರಜಾಸತ್ತಾತ್ಮಕ ಆಶೋತ್ತರಗಳ ಕೇಂದ್ರ ಬಿಂದುವಾದರು. ಆದರೂ ಪ್ರತಿಗಾಮಿಗಳ ಕೈ ಮೇಲಾಗಿ ಪತ್ರಿಕೆಯನ್ನು ಹತ್ತಿಕ್ಕಲಾಯಿತು. ಮಾರ್ಕ್ಸ್‌ರನ್ನು ದೇಶದಿಂದ ಹೊರ ಹಾಕಲಾಯಿತು. ಎಂಗೆಲ್ಸ್ ಬಾಡ್ ನಗರದಲ್ಲಿ ಜನತೆಯ ಸಶಸ್ತ್ರ ಬಂಡಾಯದಲ್ಲಿ ಭಾಗವಹಿಸಿ, ಮೂರು ಕದನಗಳಲ್ಲಿ ಹೋರಾಡಿದರು. ಬಂಡಾಯಗಾರರ ಸೋಲಿನ ನಂತರ ಅವರು ಲಂಡನ್ನಿಗೆ ಹೋದರು.

1849ರಿಂದ ಸುಮಾರು ಎರಡು ದಶ



ತನ್ನ ಹುಟ್ಟೂರಿನ ಬಳಿ ಬಂಡವಾಳಶಾಹಿಗಳ ವಿರುದ್ಧ ಬೀದಿ ಕಾಳಗಕ್ಕೆ ಇಳಿದ ಕಾರ್ಮಿಕರೊಡನೆ ಎಂಗೆಲ್ಸ್

ಕಗಳಿಗೂ ಮಿಕ್ಕಿದ ಕಾಲಾವಧಿ ಎಂಗೆಲ್ಸ್‌ರ ಜೀವನದಲ್ಲಿ "ವಾಣಿಜ್ಯ ಗುಲಾಮಿಕೆ"ಯ ಅವಧಿ. ದೇಶಭ್ರಷ್ಟರಾಗಿ ಲಂಡನ್ನಿನಲ್ಲಿ ಬಂದು ನೆಲೆಸಿದ ಮಾರ್ಕ್ಸ್ ಕುಟುಂಬ ದೈನಂದಿನ ಜೀವನ ನಿರ್ವಹಣೆಗಾಗಿಯೂ ಅಗಾಧ ಕಷ್ಟ ಕಾರ್ಪಣ್ಯವನ್ನು ಎದುರಿಸಬೇಕಾಗಿ ಬಂದ ದಿನಗಳವು. ಎಂಗೆಲ್ಸ್ ತಾನು ಈ ಹಿಂದೆ ನೌಕರಿ ಮಾಡುತ್ತಿದ್ದ ಮ್ಯಾಂಚೆಸ್ಟರ್‌ನ ಕಂಪನಿಯಲ್ಲಿ ಕಾರಕೂನನಾಗಿ ಸೇರಿದರು. ತಮ್ಮ ಈ "ಗುಲಾಮಿಕೆ"ಯ ಮಧ್ಯೆಯೂ ಅವರು ಮಾರ್ಕ್ಸ್ ರೊಡನೆ ನಡೆಸುತ್ತಿದ್ದ ಪತ್ರ ವ್ಯವಹಾರ ಉಲ್ಲಾಸಮಯವಾಗಿರುತ್ತಿತ್ತು. ಜತೆಗೆ ಪ್ರತಿಯೊಂದು ಪತ್ರದಲ್ಲೂ ಇಂತಿಷ್ಟು ದುಡ್ಡು ಕಳುಹಿಸುತ್ತಿದ್ದೇನೆ ಎಂಬ ಉಲ್ಲೇಖನವಿರುತ್ತಿತ್ತು. ಈ ಸಮಯದಲ್ಲಿ ಎಂಗೆಲ್ಸರು ಸ್ವತಃ ಆರಾಮ ಜೀವನವನ್ನೇನೂ ನಡೆಸುತ್ತಿರಲಿಲ್ಲ. ಮಾರ್ಕ್ಸ್‌ರ ಮಕ್ಕಳಿಗೆ ಎಂಗೆಲ್ಸರು ಮಾರ್ಕ್ಸ್‌ರ ನಂತರ ಅತ್ಯಂತ ಆಪ್ತ ವ್ಯಕ್ತಿಯಾಗಿದ್ದರು. ಇಷ್ಟು ವರ್ಷಗಳ ಕಾಲ ಎಂಗೆಲ್ಸರ ನಿಸ್ವಾರ್ಥ ನೆರವು ಇಲ್ಲದಿದ್ದರೆ ಮಾರ್ಕ್ಸ್‌ರ ಕುಟುಂಬದ ಗತಿ ಏನಾಗುತ್ತಿತ್ತು ಎಂದು ಹೇಳಲಸಾಧ್ಯ.

ತನ್ನ ಪ್ರಾಣ ಸ್ನೇಹಿತನಿಗಾಗಿ ಎಂಗೆಲ್ಸ್ ಸ್ವಯಮಿಚ್ಛೆಯಿಂದ ಅನುಭವಿಸುತ್ತಿದ್ದ ಈ "ವಾಣಿಜ್ಯ ಗುಲಾಮಿಕೆ" ಅವರಿಗೆ ಯಾತನಾ ಮಡುವಾಗಿತ್ತೆಂಬುದು ಮಾರ್ಕ್ಸ್‌ರ ಮಗಳು ಎಲ್ಲೀನೊರರ ಸ್ಮರಣೆಯೊಂದರಿಂದ ವ್ಯಕ್ತವಾಗುತ್ತದೆ. ಮ್ಯಾಂಚೆಸ್ಟರ್‌ನಲ್ಲಿ ನೌಕರಿಯ ಕೊನೆಯ ದಿನ ಕಛೇರಿಗೆ ಹೊರಡುವಾಗ "ಇದೀಗ ಕೊನೆಯ ದಿನ" ಎಂದು ವಿಜಯೋತ್ಸಾಹದಿಂದ ಅವರು ಉದ್ಗಾರವೆತ್ತಿದರಂತೆ. ಆ ದಿನ ನೌಕರಿ ಮುಗಿಸಿ ಹಿಂದಿರುಗುವಾಗ ತನ್ನ ಊರುಗೋಲನ್ನು ಗಾಳಿಯಲ್ಲಿ ತಿರುವುತ್ತಾ, ಹಾಡುತ್ತಾ ಬರುತ್ತಿದ್ದ ಅವರ ಮುಖ ಸಂತಸದಿಂದ ಬೀಗುತ್ತಿತ್ತಂತೆ. ಆ ದಿನವೇ ತನ್ನ ತಾಯಿಗೆ ಬರೆದ ಪತ್ರದಲ್ಲಿ "ನಾನಿಂದು ಸಂಪೂರ್ಣ ಬೇರೆಯೇ ಆದ ವ್ಯಕ್ತಿಯಾಗಿದ್ದೇನೆ. ಹತ್ತು ವರ್ಷ ಚಿಕ್ಕವನಾಗಿದ್ದೇನೆ" ಎಂದಿದ್ದರು ಎಂಗೆಲ್ಸ್ ಅವರು. ತನ್ನ ಗೆಳೆಯನ ವೈಜ್ಞಾನಿಕ ಅಧ್ಯಯನ ಹೆಚ್ಚು ಮಹತ್ವಪೂರ್ಣ ಎಂದು ಮನಗಂಡು ಎಂಗೆಲ್ಸ್ ತನ್ನ ವೈಜ್ಞಾನಿಕ ಅಧ್ಯಯನವನ್ನು ಅದಕ್ಕಾಗಿ ತ್ಯಾಗ ಮಾಡಿದರು. ಆದ್ದರಿಂದಲೇ ಸುಮಾರು ಎರಡು ದಶಕಗಳ ಕಾಲ ಎಂಗೆಲ್ಸರ ಲೇಖನಿಯಿಂದ ದೊಡ್ಡ ಗ್ರಂಥ ಯಾವುದೂ ಮೂಡಿಬರಲಿಲ್ಲ. ಆದರೆ ಸಣ್ಣ ಪುಟ್ಟ ಲೇಖನಗಳಿಗೇನೂ ಈ ಅವಧಿಯಲ್ಲಿ ಕೊರತೆಯಿರಲಿಲ್ಲ.

"ದಂಡನಾಯಕ"

'ಪವಿತ್ರ ಕುಟುಂಬ' ಹಾಗೂ 'ಜರ್ಮನ್ ಐಡಿಯಾಲಜಿ' ರಚನೆಯಲ್ಲಿ ಬೆಳೆದ ಮಾರ್ಕ್ಸ್ ಹಾಗೂ ಎಂಗೆಲ್ಸರ ನಡುವಣ ಬೌದ್ಧಿಕ ಸಹಯೋಗ ಅವರ ಸಮಸ್ತ ಕ್ರಾಂತಿಕಾರಿ ಚಟುವಟಿಕೆಗಳೊಂದಿಗೆ ಇನ್ನಷ್ಟು ಗಾಢವಾಗಿ ಆ ಚಟುವಟಿಕೆಗಳನ್ನು ಗಟ್ಟಿಗೊಳಿಸಿತು. "ನ್ಯೂಯಾರ್ಕ್ ಟ್ರಿಬ್ಯೂನ್"ಗೆ ನಿಯಮಿತವಾಗಿ ಲೇಖನ ಬರೆಯಲು ಮಾರ್ಕ್ಸ್‌ಗೆ ಆಹ್ವಾನ ಬಂದಾಗ ಅವರಿಗೆ ಇಂಗ್ಲೀಷಿನಲ್ಲಿ ಸಾಕಷ್ಟು ಪ್ರಾವೀಣ್ಯವಿಲ್ಲದ್ದರಿಂದ ಅವರ ಜರ್ಮನ್ ಲೇಖನಗಳನ್ನು ಎಂಗೆಲ್ಸರು ಇಂಗ್ಲೀಷಿಗೆ ಅನುವಾದಿಸಿ ಕೊಡುತ್ತಿದ್ದರು. ಎಂಗೆಲ್ಸರನ್ನು ಕೇಳದೆ ಮಾರ್ಕ್ಸ್ ಯಾವುದೇ ಚಟುವಟಿಕೆಗೆ ಇಳಿಯುತ್ತಿರಲಿಲ್ಲ.

1864ರಲ್ಲಿ "ಅಂತರಾಷ್ಟ್ರೀಯ ದುಡಿಯುವ ಜನರ ಸಂಘ"ದೊಂದಿಗೆ ಆರಂಭವಾದ ಅಂತರ್ರಾಷ್ಟ್ರೀಯ ಕಾರ್ಮಿಕ ವರ್ಗದ ಆಂದೋಲನಕ್ಕೆ ಮಾರ್ಕ್ಸ್ ನಿಧನದ ನಂತರ ಎಂಗೆಲ್ಸರೇ ನಾಯಕರಾದರು. ಮಿಲಿಟರಿ ವಿಷಯಗಳ ಬಗ್ಗೆ ಬಹಳ ಅಧ್ಯಯನ ಮಾಡಿದ್ದ ಎಂಗೆಲ್ಸರಿಗೆ "ಜನರಲ್" ಎಂಬ ಉಪನಾಮವಿತ್ತು. ಮಾರ್ಕ್ಸ್ ನಂತರ ಅಂತರ್ರಾಷ್ಟ್ರೀಯ ಕಾರ್ಮಿಕ ವರ್ಗದ ಸೇನೆಗೆ ಎಂಗೆಲ್ಸ್ ನಿಜವಾದ ಅರ್ಥದಲ್ಲಿ 'ಜನರಲ್'(ದಂಡನಾಯಕ) ಆದರು. ಜರ್ಮನ್, ಸ್ಪೇನ್, ರುಮಾನಿಯಾ ಹಾಗೂ ರಷ್ಯಾದ ಸಮಾಜವಾದಿಗಳಿಗೆ ಅವರು ಅತ್ಯಂತ ಪ್ರೀತಿ ಪಾತ್ರ ಹಾಗೂ ವಿಶ್ವಾಸಾರ್ಹ ಸಲಹೆಗಾರರಾಗಿದ್ದರು. ರಷ್ಯಾದ ಪರಿಸ್ಥಿತಿಯ ಬಗ್ಗೆ ಆಳವಾದ ಅಧ್ಯಯನ ನಡೆಸಿದ್ದ ಅವರು 1883ರಲ್ಲೇ "ರಷ್ಯಾ ಈ ಶತಮಾನದ ಫ್ರಾನ್ಸ್. ಹೊಸ ಸಾಮಾಜಿಕ, ಪುನರ್ಸಂಘಟನೆಯ ಹಕ್ಕು ಈ ದೇಶದ ಕ್ರಾಂತಿಕಾರಿಗಳಿಗೇ ಸೇರಿದ್ದು" ಎಂದಿದ್ದರು. ಇದು ಅವರ ಅಗಾಧ ಪ್ರತಿಭೆಗೊಂದು ಸಾಕ್ಷಿ.

ಮ್ಯಾಂಚೆಸ್ಟರ್‌ನಲ್ಲಿ ನೌಕರಿ ಬಿಟ್ಟ ನಂತರ ಎಂಗೆಲ್ಸರು ಕೂಡಾ ಲಂಡನ್ನಿಗೆ ಬಂದು ನೆಲೆಸಿದರು. ವೈಜ್ಞಾನಿಕ ಅಧ್ಯಯನ ಮುಂದುವರಿದ ಪರಿಣಾಮವಾಗಿ 1878ರಲ್ಲಿ ಅವರ "ಆಂಟಿ-ಡ್ಯೂರಿಂಗ್" ಕೃತಿ ಪ್ರಕಟವಾಯಿತು. ಡ್ಯೂರಿಂಗ್ ಎಂಬ ವ್ಯಕ್ತಿಯ ವಿಚಾರಗಳನ್ನು ಖಂಡಿಸಲೆಂದು ಬರೆದ ಇದು ದರ್ಶನ ಶಾಸ್ತ್ರ, ಪ್ರಕೃತಿ ವಿಜ್ಞಾನಗಳ ಅತ್ಯಂತ ಮಹತ್ವಪೂರ್ಣ ವಿಶ್ಲೇಷಣೆ ಹೊಂದಿರುವ ಕೃತಿ. 1884ರಲ್ಲಿ ಆದಿ ಸಮಾಜದ ಚಾರಿತ್ರಿಕ ವಿಶ್ಲೇಷಣೆಯ ಅವರ ಕೃತಿ "ಕುಟುಂಬ, ಖಾಸಗೀ ಆಸ್ತಿ ಹಾಗೂ ಪ್ರಭುತ್ವದ ಉಗಮ" ಪ್ರಕಟವಾಯಿತು.


ಪ್ರಕೃತಿ ವಿಜ್ಞಾನಗಳ ಬೆಳವಣಿಗೆಯ ತತ್ವಶಾಸ್ತ್ರೀಯ ನಿರೂಪಣೆ ನೀಡಬೇಕೆಂಬುದೇ ಎಂಗೆಲ್ಸರ ಮಹದಾಸೆಯಾಗಿತ್ತು. ಈ ಉದ್ದೇಶದಿಂದ "ಪ್ರಕೃತಿಯ ದ್ವಂದ್ವಾತ್ಮಕತೆ" ಎಂಬ ಕೃತಿಗೆ ಸಾಮಗ್ರಿ ಸಂಗ್ರಹಿಸಿಟ್ಟಿದ್ದರು. ಆದರೆ ಹಿಂದೆ ಹೇಳಿದಂತೆ ಮಾರ್ಕ್ಸ್‌ರ ನಿಧನದ ನಂತರ "ಬಂಡವಾಳ"ದ ಉಳಿದೆರಡು ಸಂಪುಟಗಳಿಗಾಗಿ ಮಾರ್ಕ್ಸ್ ಸಂಗ್ರಹಿಸಿಟ್ಟಿದ್ದ ಸಾಮಗ್ರಿಗಳನ್ನು, ಅವರ ಕೈ ಬರಹಗಳನ್ನು ಸಂಪಾದಿಸಿ ಪ್ರಕಟಿಸುವ, ಅತ್ಯಂತ ಗುರುತರವಾದ ಹಾಗೂ ಕಠಿಣ ಜವಾಬ್ದಾರಿ ಎಂಗೆಲ್ಸರ ಮೇಲೆ ಬಿತ್ತು. ತಮ್ಮ ಕೃತಿಯ ಕೆಲಸವನ್ನು ಬದಿಗಿಟ್ಟು ಅತ್ಯಂತ ಮುತುವರ್ಜಿಯಿಂದ, ಪರಿಶ್ರಮದಿಂದ ಎಂಗೆಲ್ಸ್ ಈ ಕಾರ್ಯದಲ್ಲಿ ನಿರತರಾದರು. ತಮ್ಮ ನಿಧನದ ಕೆಲವೇ ತಿಂಗಳ ಮೊದಲಷ್ಟೇ ಈ ಕಾರ್ಯವನ್ನು ನೆರವೇರಿಸಿದರು. ಅವರ "ಪ್ರಕೃತಿಯ ದ್ವಂದ್ವಾತ್ಮಕತೆ" ಮಾತ್ರ ಕೈ ಬರಹದಲ್ಲಿಯೇ ಉಳಿಯಿತು.

20 ಭಾಷೆಗಳನ್ನು ನಿರರ್ಗಳವಾದಿ ಮಾತನಾಡಬಲ್ಲವರಾಗಿದ್ದ ಎಂಗೆಲ್ಸ್ ಪ್ರತಿಭಾವಂತ ತತ್ವಶಾಸ್ತ್ರಜ್ಞ, ರಾಜಕೀಯ ಅರ್ಥಶಾಸ್ತ್ರಜ್ಞ, ಇತಿಹಾಸಕಾರ, ಮಿಲಿಟರಿ ಪ್ರವೀಣ, ಭಾಷಾಶಾಸ್ತ್ರಜ್ಞ, ಸಾಹಿತ್ಯ ವಿಮರ್ಶಕ, ಅನುವಾದಕ ಹಾಗೂ ರಾಜಕೀಯ ಪ್ರಚಾರಕರಾಗಿದ್ದರು. ಇವೆಲ್ಲಕ್ಕೂ ಹೆಚ್ಚಾಗಿ ತಮ್ಮ ಪ್ರಾಣ ಸ್ನೇಹಿತ ಮಾರ್ಕ್ಸ್‌ರೊಂದಿಗೆ ಕಾರ್ಮಿಕ ವರ್ಗದ ಮಹಾನ್ ಬೋಧಕರಾಗಿದ್ದರು. ಅಂತರ್ರಾಷ್ಟ್ರೀಯ ಕಾರ್ಮಿಕ ವರ್ಗ ಕಾರ್ಲ್ ಮಾರ್ಕ್ಸ್‌ರೊಂದಿಗೆ ಫ್ರೆಡರಿಕ್ ಎಂಗೆಲ್ಸರಿಗೂ ಚಿರಋಣಿ.

(ಸಂಗ್ರಹ: ಕೆ.ವಿ.)

> ಇತಿಹಾಸದಲ್ಲಿ ಕಾರ್ಯ ಪ್ರವೃತ್ತರಾಗುವ ವ್ಯಕ್ತಿಗಳ ಧ್ಯೇಯೋದ್ದೇಶಗಳ ಹಿಂದಿರುವ-ಪ್ರಜ್ಞಾಪೂರ್ವಕವಾದ ಮತ್ತು ಅಪ್ರಜ್ಞಾಪೂರ್ವಕವಾದ, ಬಹುಮಟ್ಟಿಗೆ, ಅಪ್ರಜ್ಞಾಪೂರ್ವಕವಾದ-ಚಾಲಕ ಶಕ್ತಿಗಳು ಹಾಗೂ ಅಂತಿಮವಾಗಿ ಇತಿಹಾಸದ ಚಾಲಕ ಶಕ್ತಿಗಳು ಏನೆಂಬ ಪ್ರಶ್ನೆಯನ್ನು ಪರಿಗಣಿಸುವಾಗ ಅದು ಕೆಲವು ವ್ಯಕ್ತಿಗಳ-ಅವರೆಷ್ಟೇ ಸುಪ್ರಸಿದ್ಧರಾಗಿದ್ದರೂ-ಚಾಲಕ ಶಕ್ತಿಯ ಪ್ರಶ್ನೆಯಾಗದೆ ಬೃಹತ್ ಜನಸಮೂಹಗಳ, ಇಡೀ ಜನತೆಯ, ಅದರಲ್ಲೂ ಇಡೀ ಜನವರ್ಗಗಳನ್ನು ಕಾರ್ಯಪ್ರವೃತ್ತರಾಗಿಸುವ ಪ್ರಶ್ನೆಯಾಗುತ್ತದೆ. ಅದು ಕೂಡಾ ಒಣ ಹುಲ್ಲು ಮೆದೆಗೆ ಬಿದ್ದ ಬೆಂಕಿಯಂತೆ ಒಮ್ಮೆಲೆ ಭುಗಿಲೆಂದು ನಂತರ ಸಂದಿಹೋಗುವಂತಲ್ಲ, ಮಹಾನ್ ಚಾರಿತ್ರಿಕ ಪರಿವರ್ತನೆ ತರುವ ಚಿರಕಾಲ ಬಾಳುವ ಕಾರ್ಯಾಚರಣೆಗೆ ಪ್ರೇರೇಪಿಸುವ ಪ್ರಶ್ನೆಯಾಗುತ್ತದೆ.
>
> -ಎಂಗೆಲ್ಸ್

> ಸೇನಾಧಿಪತಿಯೆಂದು ತನ್ನ ಗೆಳೆಯರಿಂದ ಕರೆಸಿಕೊಳ್ಳುತ್ತಿದ್ದ ಇವರು ನಮ್ಮನ್ನು ಅಗಲಿದ್ದಾರೆ. ಆದರೆ ಶ್ರಮಜೀವಿಗಳ ಅಸಂಖ್ಯ ಸೇನೆಯ ಮುಂದಾಳುಗಳಾಗಿ ಮಾರ್ಕ್ಸ್ ಮತ್ತು ಎಂಗೆಲ್ಸ್ ನಡೆಸಿದ ಹೋರಾಟ ಮುಂದುವರೆಯುತ್ತದೆ. ಅವರ ವಿಚಾರಗಳಿಂದ ಸ್ಫೂರ್ತಿಗೊಂಡು ಅವರ ಘೋಷಣೆಗಳಿಂದ ಸ್ಫೂರ್ತಿಗೊಂಡು ಎಲ್ಲಾ ದೇಶಗಳ ಶ್ರಮಜೀವಿಗಳು ಒಂದಾಗಿದ್ದಾರೆ. ತಮ್ಮ ಒಗ್ಗಟ್ಟನ್ನು ಬಲಪಡಿಸುತ್ತಾ ಹಾಗೂ ಅಂತಿಮವಾಗಿ ವಿಜಯಶಾಲಿಗಳಾಗುತ್ತಾರೆ.
>
> -ಪೌಲ್ ಲಾಫಾರ್ಗ್



ಫ್ರೆಡರಿಕ್ ಎಂಗೆಲ್ಸ್ ಮತ್ತು ಕಾರ್ಮಿಕ ಚಳುವಳಿ

- ಸಿ.ನಂಜುಂಡಪ್ಪ

ಫ್ರೆಡರಿಕ್ ಎಂಗೆಲ್ಸ್ ಜಾಗತಿಕ ಕಾರ್ಮಿಕ ವರ್ಗದ ಬೋಧಕರು. ಅವರು ಜರ್ಮನಿಯ ಬಾರ್ಮೆನ್ ಎಂಬ ಊರಿನಲ್ಲಿ ಹುಟ್ಟಿ, ಸಮೀಪವಿದ್ದ ಎಲ್ಬರ್ಫೀಲ್ಡ್‌ನಲ್ಲಿದ್ದ ಕಾರ್ಮಿಕರ ಸ್ಥಿತಿಗತಿಗಳನ್ನು ಅಭ್ಯಸಿಸಿದರು.

ಎಂಗೆಲ್ಸ್ ತಮ್ಮ ಮೂವತ್ತನೆಯ ವಯಸ್ಸಿನಲ್ಲಿ ಖಾಯಂ ಆಗಿ, ಅವರ ತಂದೆ ಪಾಲುದಾರರಾಗಿದ್ದ ಎರ್ಮೆನ್ ಮತ್ತು ಎಂಗೆಲ್ಸ್ ಸಂಸ್ಥೆಯಲ್ಲಿ ನೌಕರರಾಗಿ ಇಂಗ್ಲೆಂಡಿನಲ್ಲಿ ನೆಲೆಸಿದರು. ಅಲ್ಲಿ ಅವರು ಆ ದೇಶದ ಕಾರ್ಮಿಕ ವರ್ಗದ ಚಳುವಳಿಗಳ ಆಗು ಹೋಗುಗಳ ಜೀವಂತ ಆಸಕ್ತಿ ವಹಿಸಿದರು. ಮೊದಲ ಬಾರಿ 1942-44ರಲ್ಲಿ ಮ್ಯಾಂಚೆಸ್ಟರ್‌ಗೆ ಭೇಟಿ ಕೊಟ್ಟಾಗ ಅವರಿಗೆ ಬಿಡುವಿದ್ದಾಗಲೆಲ್ಲಾ ಸಾಮಾನ್ಯ ಕಾರ್ಮಿಕರೊಡನೆ ಮಾತುಕತೆ ನಡೆಸಲು ಉಪಯೋಗಿಸಿದರು. ಉತ್ತರ ಭಾಗದಲ್ಲಿದ್ದ ಕೈಗಾರಿಕಾ ಜಿಲ್ಲೆಗಳಲ್ಲಿ ಕಾರ್ಖಾನೆಗಳಿಗೆ ಮತ್ತು ಕೊಳೆಗೇರಿಗಳಿಗೆ ಭೇಟಿ ಕೊಟ್ಟುದು, ತರುವಾಯ ಬರೆದ 'ದಿ ಕಂಡಿಷನ್ಸ್ ಆಫ್ ದಿ ವರ್ಕಿಂಗ್ ಕ್ಲಾಸ್ ಇನ್ ಇಂಗ್ಲೆಂಡ್' ಎಂಬ ಪುಸ್ತಕಕ್ಕೆ ಮಾಹಿತಿಯನ್ನು ಒದಗಿಸಿತು.

ಮ್ಯಾಂಚೆಸ್ಟರ್ ನಗರದ ಮುಖ್ಯ ರಸ್ತೆಗಳಲ್ಲಿ ಒಳ್ಳೆಯ ಕಟ್ಟಡಗಳು ಇದ್ದುವು. ಅವು ಬಂಡವಾಳಗಾರರು ವಾಸಿಸುವ, ಬಳಸುವ ಕಟ್ಟಡಗಳು. ಮುಖ್ಯ ರಸ್ತೆಯ ಹಿಂಬದಿಯಲ್ಲಿ ಕಾರ್ಮಿಕರು ವಾಸಿಸುವ ಗೂಡುಗಳು. ಬೇರೆ ಊರುಗಳಿಂದ ಬಂದವರಿಗೆ ಕಾರ್ಮಿಕರು ಎಂತಹ ಗಲೀಜು ಕೂಪಗಳಲ್ಲಿ ವಾಸಿಸುತ್ತಿದ್ದರು ಎಂಬುದು ತಿಳಿಯುತ್ತಿರಲಿಲ್ಲ. ಆ ಕೂಪಗಳಲ್ಲಿ ನೂರು ಇಪ್ಪತ್ತು ಜನರಿಗೆ ಒಂದು ಕಕ್ಕಸು ಇದ್ದಿತು!

ಬಂಡವಾಳಗಾರರು ಕಾರ್ಮಿಕರನ್ನು, ಮಹಿಳೆಯರನ್ನು, ಮಕ್ಕಳನ್ನು ಬೆಳಗಿನಿಂದ ರಾತ್ರಿಯವರೆಗೆ ದುಡಿಸುತ್ತಿದ್ದರು. ಆ ಕಾಲದಲ್ಲಿ ಕಾರ್ಖಾನೆಗಳ ಇನ್ಸ್‌ಪೆಕ್ಟರು ಇದ್ದರು. ಅವರು ಬಂದಾಗ ಬಂಡವಾಳಗಾರರು ಅವರಿಗೆ ಕೈ ತುಂಬ ಲಂಚ ಕೊಟ್ಟು ಕಳುಹಿಸುತ್ತಿದ್ದರು.


ಪಾಪ ಪರಿಹಾರ ಹೇಗೆ!

ಎಂಗೆಲ್ಸ್ ಜರ್ಮನಿಯ ವುಪ್ಪರ್ ಟಾಲ್ ಕಾರ್ಮಿಕರ ಕುರಿತು 1839ರಲ್ಲಿ ಒಂದು ಪತ್ರಿಕೆಗೆ ಬರೆದ ಲೇಖನದಲ್ಲಿ ಕಾರ್ಖಾನೆಗಳ ಒಡೆತನವಿರುವ ಧಾರ್ಮಿಕ ಸಂಸ್ಥೆಗಳು ಕಾರ್ಮಿಕರನ್ನು ಶೋಷಿಸುವುದನ್ನು ತೋರಿಸಿದ್ದಾರೆ. ಎಲ್ಬ ರಫೇಲ್ಡ್ ಪಟ್ಟಣದಲ್ಲಿ ಶಾಲೆಗೆ ಹೋಗುವ ವಯಸ್ಸಿನ 2500 ಮಕ್ಕಳಲ್ಲಿ 1200 ಮಕ್ಕಳು ಕಾರ್ಖಾನೆಗಳಲ್ಲಿ ಬಾಲಕಾರ್ಮಿಕರಾಗಿ ಬೆಳೆದರು. ವಯಸ್ಕರರಿಗೆ ಕೊಡುವ ಕೂಲಿಯಲ್ಲಿ ಅರ್ಧ ಕೂಲಿಯನ್ನು ಮಕ್ಕಳಿಗೆ ಕೊಡುತ್ತಿದ್ದರು. ಒಬ್ಬ ಮಗುವಿನ ಭವಿಷ್ಯವನ್ನು ಹಾಳು ಮಾಡಿದರೆ ನರಕಕ್ಕೆ ಹೋಗುವುದಿಲ್ಲವೇ ಎಂಬ ಪ್ರಶ್ನೆಗೆ ಬಂಡವಾಳಗಾರರು ಒಂದು ಭಾನುವಾರ ಎರಡು ಬಾರಿ ಚರ್ಚಿಗೆ ಹೋದರಾಯಿತು ಪಾಪ ಪರಿಹಾರವಾಗುತ್ತದೆ ಎನ್ನುತ್ತಿದ್ದರು.

ಕಾರ್ಮಿಕರಿಗೆ ಹೆಚ್ಚು ಕೂಲಿ ಕೊಟ್ಟರೆ ಅವರು ಮದ್ಯಪಾನ ಮಾಡುತ್ತಾರೆ ಎಂದು ಕಡಿಮೆ ಕೂಲಿ ಕೊಡುತ್ತಿದ್ದರು. ಚುನಾವಣೆ ನಡೆಯುವಾಗ ಕಾರ್ಮಿಕರ ಮತಗಳನ್ನು ಪಡೆಯಲು ಸ್ವತಃ ಅವರೇ ಕಾರ್ಮಿಕರಿಗೆ ಮದ್ಯಪಾನ ಮಾಡಿಸುತ್ತಿದ್ದರು!

'ದಿ ಲೇಬರ್ ಸ್ಟಾಂಡರ್ಡ್' ಪತ್ರಿಕೆಗೆ 1981ರಲ್ಲಿ ಎಂಗೆಲ್ಸ್ ಕಾರ್ಮಿಕ ಸಂಘಗಳ ಕುರಿತು ಲೇಖನಗಳನ್ನು ಬರೆದರು. ಹಿಂದಿನ ಐದು ದಶಕಗಳಿಂದ ಇಂಗ್ಲಿಷ್ ಕಾರ್ಮಿಕ ವರ್ಗದ ಚಳುವಳಿಯು 'ಒಂದು ದಿವಸದ ನ್ಯಾಯವಾದ ಕೆಲಸಕ್ಕೆ ಒಂದು ದಿವಸದ ನ್ಯಾಯವಾದ ಕೂಲಿ'(ಎ ಫೇರ್ ಡೇಸ್ ವೇಜಸ್ ಫಾರ್ ಎ ಫೇರ್ ಡೇಸ್ ವರ್ಕ್) ಎಂದು ಹೇಳುತ್ತಾ ಬಂದುದನ್ನು ಟೀಕಿಸುತ್ತಾ ಎಂಗೆಲ್ಸ್ ರಾಜಕೀಯ ಅರ್ಥಶಾಸ್ತ್ರದ ನ್ಯಾಯವು, ವಾಸ್ತವವಾಗಿ ಸಮಾಜವನ್ನು ಆಳಲು ಅದು ವಿಧಿಸುವ ನಿಯಮಗಳು, ಎಲ್ಲಾ ನ್ಯಾಯವೂ ಒಂದು ಕಡೆ, ಬಂಡವಾಳದ ಕಡೆ ಇರುವಂತೆ ಮಾಡಿವೆ. ಆದ್ದರಿಂದ ಇಂಗ್ಲಿಷ್ ಕಾರ್ಮಿಕ ವರ್ಗದ ಚಳುವಳಿಯ ಎ ಫೇರ್ ಡೇಸ್ ವೇಜಸ್ ಫಾರ್ ಎ ಫೇರ್ ಡೇಸ್ ವರ್ಕ್ ಎಂಬುದನ್ನು ಶಾಶ್ವತವಾಗಿ ಹೂತು, "ದುಡಿಯುವ ಜನತೆಗೇ ಕೆಲಸದ ಸಾಧನಗಳ - ಕಚ್ಚಾ ವಸ್ತುಗಳ, ಕಾರ್ಖಾನೆಯ, ಮೆಷಿನರಿಯ ಒಡೆತನ" ಎಂದು ತಮ್ಮ ಲಾಂಛನದಲ್ಲಿ ಬರೆಯಬೇಕು ಎಂದರು.

ಸಮಾಜವು ಎರಡು ವಿರೋಧಿ ವರ್ಗಗ



ಅಂತರಾಷ್ಟ್ರೀಯ ದುಡಿಯುವ ಜನರ ಸಂಘದ ಅಧಿವೇಶನದಲ್ಲಿ

ಳಾಗಿ ವಿಭಜನೆಯಾಗಿರುವಾಗ-ಎಲ್ಲಾ ಉತ್ಪಾದನಾ ಸಾಧನಗಳ -ಭೂಮಿ, ಕಚ್ಚಾ ವಸ್ತುಗಳು, ಮೆಷಿನರಿ-ಒಡೆತನದ ಏಕಸ್ವಾಮ್ಯವನ್ನು ಹೊಂದಿರುವ ಬಂಡವಾಳಗಾರರು ಒಂದು ಕಡೆ, ಉತ್ಪಾದನಾ ಸಾಧನಗಳು ನಿರಾಕರಿಸ್ಪಟ್ಟಿರುವ, ತಮ್ಮ ದುಡಿಮೆಯ ಶಕ್ತಿಯ ಹೊರತು ಬೇರೆ ಏನನ್ನೂ ಹೊಂದಿರದೆ ಇರುವ ಕಾರ್ಮಿಕರು ಇನ್ನೊಂದೆಡೆ ಈ ಸಾಮಾಜಿಕ ಸಂಘಟನೆಯು ಇರುವವ್ಟರವರೆಗೆ ಕೂಲಿಯ ನಿಯಮಗಳು ಸರ್ವಶಕ್ತವಾಗಿರುತ್ತವೆ, ದಿನನಿತ್ಯ ಬಂಡವಾಳಗಾರನು ಸ್ವಾಧೀನಪಡಿಸಿಕೊಳ್ಳುವ ಕಾರ್ಮಿಕನ ಉತ್ಪಾದನೆಗೆ ಕಾರ್ಮಿಕನು ಗುಲಾಮನಾಗುವಂತೆ ನಿಯಮಗಳು ಬಿಗಿಗೊಳ್ಳುತ್ತವೆ.

ಎಂಗೆಲ್ಸ್ ಕಂಡದ್ದು

"ಕಾರ್ಮಿಕ ವರ್ಗಕ್ಕೂ ಬಂಡವಾಳದ ವಿರುದ್ಧ ಹೋರಾಡಲು ಕಾರ್ಮಿಕ ಸಂಘಗಳು ಅತ್ಯವಶ್ಯಕ".

"ಎಲ್ಲಾ ಖರ್ಚುಗಳನ್ನು ಕಳೆದ ನಂತರ ಶ್ರಮದ ಉತ್ಪನ್ನವನ್ನು ಎರಡು ಭಾಗಗಳಾಗಿ ವಿಭಜಿಸಲಾಗುತ್ತದೆ, ಒಂದು ಕಾರ್ಮಿಕರ ಕೂಲಿ, ಇನ್ನೊಂದು ಬಂಡವಾಗಾರರ ಲಾಭ. ಕೂಲಿ ಕಡಿಮೆಯಾಗದೆ ಲಾಭ ಹೆಚ್ಚಾಗುವುದಿಲ್ಲ, ಕೂಲಿಯನ್ನು ಕಡಿಮೆ ಮಾಡುವುದು ಬಂಡವಾಗಾರನ ಹಿತಕ್ಕೆ ಅನುಗುಣವಾಗಿದೆ ಎಂಬುದನ್ನು ನಿರಾಕರಿಸಿದರೆ ಲಾಭವು ಹೆಚ್ಚಾಗುವುದು ಅವನ ಹಿತಕ್ಕೆ ಅನುಗುಣವಾಗಿಲ್ಲ ಎಂದಂತಾಗುತ್ತದೆ."

"ಕೂಲಿಯ ಆರ್ಥಿಕ ನಿಯಮವು ಎರಡು ರೀತಿಯಲ್ಲಿ ಸ್ಥಿತಿಸ್ಥಾಪಕವಾಗಿದೆ. ಒಂದು ಕೈಗಾರಿಕೆಯಲ್ಲಿ ಕೂಲಿಯ ದರವನ್ನು ನೇರವಾಗಿ ಇಳಿಸಿ ಕೆಲಸದ ಜನ ಕ್ರಮೇಣ ಕೆಳ ಜೀವನಮಟ್ಟಕ್ಕೆ ಹೊಂದಿಕೊಳ್ಳಬೇಕಾಗುವುದು ಇಲ್ಲವೇ ಅಪ್ರತ್ಯಕ್ಷವಾಗಿ ಕೂಲಿಯನ್ನು ಹೆಚ್ಚಿಸದೆ ಕೆಲಸದ ಗಂಟೆಗಳನ್ನು ಹೆಚ್ಚಿಸಬಹುದು ಅಥವಾ ಅದೇ ಕೆಲಸದ ಗಂಟೆಗಳಲ್ಲಿ ಶ್ರಮಭಾರವನ್ನು ಹೆಚ್ಚಿಸಬಹುದು."

"ಹೆಚ್ಚಾಗುತ್ತಿರುವ ಈ ಸತತವಾದ ಒತ್ತಡದ ವಿರುದ್ಧವಾಗಿ ಅಸಂಘಟಿತ ಕಾರ್ಮಿಕರು ಪರಿಣಾಮಕಾರಿಯಾದ ಪ್ರತಿರೋಧವನ್ನು ಒಡ್ಡಲಾರರು. ಆದ್ದರಿಂದ ದುಡಿಯುವ ಜನರ ಸಂಘಟನೆ ಇಲ್ಲದಿರುವ ಕೈಗಾರಿಕೆಗಳಲ್ಲಿ ಕೂಲಿಯು ಕಡಿಮೆಯಾಗುತ್ತಾ, ಕೆಲಸದ ಗಂಟೆಗಳು ಹೆಚ್ಚಾಗುತ್ತಾ ಹೋಗುವುವು. ದುಡಿಯುವ ಜನರು ಕ್ರಮೇಣವಾಗಿ ಕೆಳಮಟ್ಟದ ಜೀವನಕ್ಕೆ ಹೊಂದಿಕೊಳ್ಳುತ್ತಾರೆ."

ಎಂಗೆಲ್ಸ್ ಆ ಕಾಲದ ಮುಷ್ಕರಗಳ ಬಗ್ಗೆ ಪ್ರಸ್ತಾಪಿಸಿ, 1843ರಲ್ಲಿ ಅವರು ಮ್ಯಾಂಚೆಸ್ಟರಿನಲ್ಲಿದ್ದಾಗ, ಅಲ್ಲಿ ನಡೆದು ಹಿಂಸಾಚಾರದಲ್ಲಿ ಕೊನೆಗೊಂಡ ಒಂದು ಮುಷ್ಕರವನ್ನು ಕುರಿತು ಚರ್ಚಿಸಿದ್ದಾರೆ. ತಮ್ಮ ಕಾರ್ಖಾನೆಯಲ್ಲಿ ತಯಾರಾಗುತ್ತಿದ್ದ ಇಟ್ಟಿಗೆಗಳ ಗಾತ್ರವನ್ನು ಹೆಚ್ಚಿಸಲು ಮೆಸರ್ಸ್ ಪಾಲಿಂಗ್ ಅಂಡ್ ಹೆನ್ಫ್ರೇ ನಿರ್ಧರಿಸಿದರು. ಆದರೆ ಕಾರ್ಮಿಕರ ಕೂಲಿಯನ್ನು ಹೆಚ್ಚಿಸಲಿಲ್ಲ, ಹೆಚ್ಚಿನ ಕೂಲಿಯ ಬೇಡಿಕೆಯನ್ನು ಮಾಲೀಕರು ತಿರಸ್ಕರಿಸಿದರು. ಕಾರ್ಮಿಕರು ಮುಷ್ಕರ ಹೂಡಿದರು. ಕಾರ್ಮಿಕ ಸಂಘವು ಮುಷ್ಕರವನ್ನು ಬೆಂಬಲಿಸಿ ಸಂಸ್ಥೆಯನ್ನು ಬಹಿಷ್ಕರಿಸಿತು. ಮೆ. ಪಾಲಿಂಗ್ ಅಂಡ್ ಹೆನ್‌ಫ್ರೇ ಬಹಳ ಕಷ್ಟಪಟ್ಟು ಮ್ಯಾಂಚೆಸ್ಟರಿನಿಂದ ಮತ್ತು ಜಿಲ್ಲೆಯಿಂದ ಕರಿಗಾಲುಗಳನ್ನು ತಂದರು. ಆ ಸಂಸ್ಥೆಗೆ ಕೆಲಸ ಮಾಡಲು ಹೋಗುವವರಿಗೆ ಮುಷ್ಕರಕಾರರು ಬೆದರಿಕೆ ಹಾಕಿದರು. ಸಂಸ್ಥೆಯು ಹನ್ನೆರಡು ಮಂದಿ ಮಾಜಿ ಸೈನಿಕರನ್ನು ಮಾಜಿ ಪೋಲೀಸರನ್ನು ಇಟ್ಟಿಗೆ ಕಾರ್ಖಾನೆಯನ್ನು ರಕ್ಷಿಸಲು ನೇಮಿಸಿತು. ಕರಿಗಾಲುಗಳನ್ನು ಬೆದರಿಸಲು ವಿಫಲರಾದ ಮುಷ್ಕರಕಾರರು ಇನ್ನೂ ಗಂಭೀರ ಕ್ರಮಗಳಿಗೆ ತೊಡಗಿದರು. ರಾತ್ರಿ ಹತ್ತು ಗಂಟೆಗೆ ಸಣ್ಣ ತುಪಾಕಿಗಳನ್ನು ಹಿಡಿದ ಶಿಸ್ತುಬದ್ಧವಾಗಿದ್ದ ಮುಷ್ಕರಕಾರರು ಭೂ ಸೈನ್ಯದ ಬ್ಯಾರಕ್ಕುಗಳಿಂದ ಕೇವಲ ನಾನೂರು ಗಜದಷ್ಟು ದೂರವಿದ್ದ ಇಟ್ಟಿಗೆ ಕಾರ್ಖಾನೆಗೆ ಧಾವಿಸಿದರು. ಕಾವಲುಗಾರರನ್ನು ನೋಡಿದ ಕೂಡಲೇ ಅವರ ಮೇಲೆ ಗುಂಡು ಹಾರಿಸಿದರು, ಒಣಗಲು ಇಟ್ಟಿದ್ದ ಹಸಿ ಇಟ್ಟಿಗೆಗಳ ಮೇಲೆ ತುಳಿದಾಡಿದರು, ಸಿದ್ಧವಾಗಿದ್ದ ಇಟ್ಟಿಗೆಗಳನ್ನು ಚೆಲ್ಲಾಪಿಲ್ಲಿ ಮಾಡಿದರು, ದಾರಿಯಲ್ಲಿ ಸಿಕ್ಕಿದ್ದನ್ನೆಲ್ಲಾ ನಾಶ ಮಾಡಿದರು. ಮ್ಯಾನೇಜರ ಮನೆಯ ಬಾಗಿಲನ್ನು ಒಡೆದು ಒಳಹೊಕ್ಕು ಅವರ ಮಡದಿಗೆ ಬಾರಿಸಿದರು, ಮರದ ಸಾಮಾನು, ಕುರ್ಚಿ ಮೊದಲಾದವುಗಳನ್ನು ನಾಶ ಮಾಡಿದರು. ಆಯಕಟ್ಟಿನ ಜಾಗ ಸೇರಿದ ಕಾವಲುಗಾರರು ಮುಷ್ಕರಕಾರರ ಮೇಲೆ ಗುಂಡು ಹಾರಿಸಿದರು. ಈ ವೇಳೆಗೆ ಮುಷ್ಕರಕಾರರು ಇಟ್ಟಿಗೆಯನ್ನು ಸುಡುವ ಒಲೆಯ ಸುತ್ತ ನಿಂತಿದ್ದುದರಿಂದ ಕಾವಲುಗಾರರಿಗೆ ಚೆನ್ನಾಗಿ ಕಾಣುತ್ತಿದ್ದಿತು. ಅವರ ಗುಂಡು ಗುರಿ ಮುಟ್ಟುತ್ತಿದ್ದಿತು. ಮುಷ್ಕರಕಾರರ ಗುಂಡು ಪರಿಣಾಮಕಾರಿಯಾಗಲಿಲ್ಲ. ಅರ್ಧ ಗಂಟೆಯ ಕಾಲ ಗುಂಡಿನ ಕಾಳಗ ಮುಂದುವರೆಯಿತು. ಆ ವೇಳೆಗೆ ತುಪಾಕಿಗಳಲ್ಲಿದ್ದ ಮದ್ದು ಮುಗಿಯಿತು. ಆದರೆ ಆ ವೇಳೆಗೆ ಇಟ್ಟಿಗೆ

ಶ್ರಮಜೀವಿ ವರ್ಗ ನಿರ್ಣಾಯಕ ದಿನದಂದು ಜಯಶಾಲಿಯಾಗುವಷ್ಟು ಬಲಿಷ್ಠಗೊಳ್ಳಬೇಕಾದರೆ ಅದು ಇತರರಿಗಿಂತ ಭಿನ್ನವಾದ, ವಿರುದ್ಧವಾದ ಒಂದು ಪಕ್ಷವನ್ನು ರಚಿಸಬೇಕು, ಒಂದು ವರ್ಗ ಪ್ರಜ್ಞೆಯ ಪಕ್ಷವನ್ನು ಕಟ್ಟಬೇಕು.

–ಎಂಗೆಲ್ಸ್

ಕಾರ್ಯಾಗಾರದಲ್ಲಿದ್ದುದೆಲ್ಲವನ್ನೂ ನಾಶ ಮಾಡುವ ಅವರ ಗುರಿ ಸಾಧನೆಯಾಯಿತು. ಸೈನ್ಯವು ಕಾಣಿಸಿಕೊಂಡಾಗ ಮುಷ್ಕರಕಾರರು ಮ್ಯಾಂಚೆಸ್ಟರಿನಿಂದ ಮೂರು ಮೈಲಿ ದೂರವಿದ್ದು ಹಿಂದೆ ಸರಿದರು. ಎಕ್ಲೆಸ್ನಲ್ಲಿ ಹಾಜರಿಯನ್ನು ತೆಗೆದುಕೊಂಡ ನಂತರ ಮುಷ್ಕರಕಾರರು ಚದುರಿದರು. ಆ ವೇಳೆಗೆ ಎಲ್ಲಾ ಕಡೆಗಳಿಂದ ಸುತ್ತುವರಿಯುತ್ತಿದ್ದ ಪೋಲೀಸರ ಕೈಗೆ ಸಿಕ್ಕಿ ಬಿದ್ದರು. ಅನೇಕರಿಗೆ ಗಾಯಗಳಾಗಿರಬೇಕು. ಆದರೆ ಕೆಲವರನ್ನು ಮಾತ್ರ ಬಂಧಿಸಲಾಯಿತು. ಒಬ್ಬನಿಗೆ ತೊಡೆ, ಮೀನುಕಂಡ, ಭುಜ - ಹೀಗೆ ಮೂರು ಕಡೆ ಗುಂಡು ಬಿದ್ದಿತ್ತು. ಆದರೂ ಸಹ ಆತ ನಾಲ್ಕು ಮೈಲಿಗಳಿಗಿಂತಲೂ ಹೆಚ್ಚು ದೂರ ನಡೆದಿದ್ದ. ಈ ಹೋರಾಟವನ್ನು ವರ್ಣಿಸಿ, ಕ್ರಾಂತಿಕಾರಿಗಳಿಗೆ ಇರಬೇಕಾದ ಎದೆಗಾರಿಕೆ ಎಲ್ಲವನ್ನೂ ಈ ಮುಷ್ಕರಕಾರರು ತೋರಿಸಿದರು ಎಂಬುದನ್ನು ನಿರಾಕರಿಸಲಾಗದು, ಗುಂಡಿನ ಸುರಿಮಳೆಯ ಎದುರಿಗೆ ಹಿಮ್ಮೆಟ್ಟಲಿಲ್ಲ ಎಂದು ಎಂಗೆಲ್ಸ್ ಅವರ ಎದೆಗಾರಿಕೆಯನ್ನು ಪ್ರಶಂಸಿಸಿದ್ದಾರೆ. ಭಾರತವನ್ನು ಆಳಿದ ಬ್ರಿಟಿಷ್ ವಸಾಹತುಶಾಹಿಗಳು ಭಾರತೀಯರು ತುಪಾಕಿಗಳನ್ನು ಹೊಂದಿರಲು ಲೈಸೆನ್ಸ್ ಪಡೆಯಬೇಕೆಂದು ಕಾನೂನನ್ನು ಮಾಡಿಬಿಟ್ಟರು.

> **ಎಲ್ಲಾ ದೇಶಗಳ ಕಾರ್ಮಿಕರ ಪರಿಸ್ಥಿತಿಯೊಂದೇ, ಹಿತಾಸಕ್ತಿಗಳೊಂದೇ, ಶತ್ರುಗಳೊಂದೇ. ಆದ್ದರಿಂದ ಅವರೆಲ್ಲಾ ಒಟ್ಟಿಗೇ ಹೋರಾಡಬೇಕು ಎಲ್ಲಾ ದೇಶಗಳ ಬಂಡವಾಳಶಾಹಿ ಸೋದರಿಕೆಯನ್ನು ಎಲ್ಲಾ ದೇಶಗಳ ಕಾರ್ಮಿಕರ ಸೋದರಿಕೆಯೊಂದಿಗೆ ಎದುರಿಸಬೇಕು**
>
> **-ಎಂಗೆಲ್ಸ್**

ಕಾನೂನು ಮತ್ತು ಕಾರ್ಮಿಕ ವರ್ಗ

ಎಂಗೆಲ್ಸ್ ಇಂಗ್ಲೆಂಡಿನ ಕಾನೂನಿನ ಪರಿಶುದ್ಧತೆಯ ಕುರಿತು ವಿಚಾರ ಮಾಡಿದ್ದಾರೆ. ನಿಜವಾಗಿಯೂ ಬಂಡವಾಳಗಾರರು ಕಾನೂನಿನ ಪಾವಿತ್ರ್ಯತೆಯ ಪರವಾಗಿದ್ದಾರೆ. ಅದರಲ್ಲಿ ಅಚ್ಚರಿಯೇನಿಲ್ಲ, ಅದನ್ನು ಮಾಡಿದವರೇ ಅವರು. ಅದನ್ನು ಅವರು ಸಮ್ಮತಿಸುತ್ತಾರೆ. ಅದರಿಂದ ಅವರು ರಕ್ಷಣೆ ಪಡೆಯುತ್ತಾರೆ. ಅದರಿಂದ ಅವರು ಫಾಯಿದೆ ಪಡೆಯುತ್ತಾರೆ. ಯಾವುದಾದರೊಂದು ಕಾಯಿದೆಯು ಅವರಿಗೆ ಹಾನಿ ಮಾಡುವಂತಿದ್ದರೆ ಒಟ್ಟಾರೆ ಕಾನೂನು ಬಂಡವಾಳಗಾರರನ್ನು ರಕ್ಷಿಸುತ್ತಿದೆ. ಕಾನೂನಿನ ಪಾವಿತ್ರ್ಯತೆಯ ತತ್ವವು ಸಾಮಾಜಿಕ ಶ್ರೇಣಿಯಲ್ಲಿ ಅವರ ಸ್ಥಾನವನ್ನು ಭದ್ರಪಡಿಸುತ್ತದೆ. ಈ ತತ್ವವನ್ನು ಸಮಾಜದ ಒಂದು ಭಾಗವು ಬುದ್ಧಿಪೂರ್ವಕವಾಗಿ ಸ್ಥಾಪಿಸಿದೆ, ಇನ್ನೊಂದು ಭಾಗವು ನಿಶ್ಶೇಷವಾಗಿ ಅದನ್ನು ಒಪ್ಪಿಕೊಂಡಿದೆ. ಬಂಡವಾಳಗಾರರು ಕಾನೂನಿನ ಪಾವಿತ್ರ್ಯತೆಗೆ ಅಂಟಿಕೊಂಡಿದ್ದಾರೆ. ಯಾಕೆಂದರೆ ದೇವರನ್ನು ಯಾವ ರೀತಿ ತಮ್ಮ ಸ್ವರೂಪದಂತೆ ಮಾಡಲಾಗಿದೆಯೋ, ಹಾಗೆಯೇ ಕಾನೂನನ್ನು ತಮ್ಮಂತೆಯೇ ರಚಿಸಲಾಗಿದೆ ಎಂದು ಅವರು ನಂಬುತ್ತಾರೆ. ಪೋಲೀಸರ ಕೈಯಲ್ಲಿ ದೊಣ್ಣೆಯು, ಅವರದ್ದೇ ಆದ ಆಯುಧವಾಗಿದ್ದು, ಅವರಿಗೆ ಧೈರ್ಯ ಕೊಡುವ ಅಧಿಕಾರದ ಚಿಹ್ನೆಯಾಗಿದೆ. ಆದರೆ ಕಾರ್ಮಿಕ ಕಾನೂನನ್ನು ಬೇರೆಯ ರೀತಿಯೇ ಕಾಣುತ್ತಾನೆ. ದೀರ್ಘಕಾಲದ ಕಹಿಯಾದ ಅನುಭವದಿಂದ ತನ್ನನ್ನು ಹೊಡೆಯಲು ಸಿದ್ಧವಾಗಿ ಬಂಡ ವಾಳಗಾರರ ಕೈಯಲ್ಲಿರುವ ಬೆತ್ತವೇ ಕಾನೂನು ಎಂದು ಕಾರ್ಮಿಕ ತಿಳಿಯುತ್ತಾನೆ.



ಅಂತರಾಷ್ಟ್ರೀಯ ದುಡಿಯುವ ಜನರ ಸಂಘದ ಹೇಗ್ ಅಧಿವೇಶನದಲ್ಲಿ

ಕಾರ್ಮಿಕನಿಗೆ ಕಾನೂನಿನಲ್ಲಿ ವಿಶ್ವಾಸವಿಲ್ಲ. ಸಾಧ್ಯವಾದಷ್ಟು ಮಟ್ಟಿಗೆ ಅವನು ಅದರಿಂದ ದೂರವಿರುತ್ತಾನೆ. ಇಂಗ್ಲಿಷ್ ಕಾರ್ಮಿಕರು ಪೋಲೀಸರಿಗೆ ಹೆದರುತ್ತಿರಲಿಲ್ಲ. ಮ್ಯಾಂಚೆಸ್ಟರಿನಲ್ಲಿ ಪೋಲೀಸರು ಕಬ್ಬಿಣದ ಸರಳುಗಳು, ಬಾಗಿಲುಗಳಿಂದ ರಕ್ಷಿಸಲ್ಪಟ್ಟಿದ್ದ ಪೋಲೀಸ ಠಾಣೆಯನ್ನು ಕಾರ್ಮಿಕರು ಮುತ್ತಿದ್ದರು.

ಭಾರತದಲ್ಲಿಯೂ ಕಾನೂನು ಬಂಡವಾಳಗಾರರು, ದೊಡ್ಡ ಆಸ್ತಿವಂತರು ದುಡಿಯುವ ಜನರನ್ನು ಶೋಷಣೆ ಮಾಡುವ ಹಕ್ಕನ್ನು ಮತ್ತು ಅವರ ಸ್ವತ್ತನ್ನು ರಕ್ಷಿಸುತ್ತಿದೆ. ಕಾರ್ಮಿಕರು ತಮ್ಮ ಬೇಡಿಕೆಗಳಿಗಾಗಿ ಬಂಡವಾಳಗಾರರ ವಿರುದ್ಧವಾಗಿ ಹೋರಾಡುವಾಗ ಅವರ ಪೋಲೀಸರ ಲಾಠಿ ಕಾರ್ಮಿಕರನ್ನು ಬಡಿಯುತ್ತದೆ. ಒಂದೂವರೆ ಶತಮಾನದಲ್ಲಿ, ಲಾಠಿಯ ಜತೆಗೆ ಅಶ್ರುವಾಯು, ರಬ್ಬರ್‌ಗುಂಡು, ರಬ್ಬರ್‌ಲಾಠಿ, ವಾಟರ್ ಕ್ಯಾನನ್ ಮೊದಲಾದ ಅಸ್ತ್ರಗಳು ಅವರ ಕೈಗೆ ಬಂದಿವೆ. ಹೋರಾಡುವ ಕಾರ್ಮಿಕ ಈ ದಮನಕಾರಿ ಅಸ್ತ್ರಗಳನ್ನು, ಶಾಸನಗಳನ್ನು ಎದುರಿಸಿ ಹೋರಾಟವನ್ನು ಮುನ್ನಡೆಸುವ ಕಲೆಯನ್ನು ರೂಪಿಸಿ, ಅದರಲ್ಲಿ ಪಳಗಬೇಕು.


ಕಾರ್ಮಿಕ ಸಂಘಗಳಲ್ಲಿ ದುಡಿಯುವವರಿಗೆ ಈ ಪ್ರಾಥಮಿಕ ಪಾಠಗಳು ಎಂಗೆಲ್ಸ್‌ರಿಂದ ದೊರೆಯುವುವು.

ಒಂದು ವರ್ಗವು ಇನ್ನೊಂದು ವರ್ಗದ ವಿರುದ್ಧವಾಗಿ ನಡೆಸುವ ರಾಜಕೀಯ ಹೋರಾಟದಲ್ಲಿ ಸಂಘಟನೆಯು ಅತ್ಯಂತ ಮುಖ್ಯ ಆಯುಧವಾಗುತ್ತದೆ ಎಂದಿದ್ದಾರೆ.

ಪ್ರತಿಯೊಬ್ಬರೂ ತಮ್ಮ ತಮ್ಮ ಹಿತವನ್ನು ಕಾದುಕೊಳ್ಳುವ ಈ ಪ್ರಪಂಚದಲ್ಲಿ ಇಂಗ್ಲಿಷ್ ಕಾರ್ಮಿಕ ವರ್ಗವು ತನ್ನ ಹಿತವನ್ನು ನೋಡಿಕೊಳ್ಳುವುದನ್ನು ಜಮೀನುದಾರರು, ಬಂಡವಾಳಗಾರರು, ಇತರೆ ಚಿಲ್ಲರೆ ವ್ಯಾಪಾರಿಗಳು, ಅವರ ವಕೀಲರು, ಪತ್ರಕರ್ತರು ಮೊದಲಾದವರಿಗೆ ಬಿಟ್ಟಿರುವುದನ್ನು ಎಂಗೆಲ್ಸ್ ಛೇಡಿಸಿದ್ದಾರೆ.

ಕಾರ್ಮಿಕ ವರ್ಗವು ತನ್ನದೇ ಆದ ರಾಜಕೀಯ ಪಕ್ಷವನ್ನು ಕಟ್ಟಿ ಬಂಡವಾಳಗಾರರ ವಿರುದ್ಧವಾಗಿ ರಾಜಕೀಯ ಹೋರಾಟವನ್ನು ನಡೆಸುವುದು, ಉತ್ಪಾದನಾ ಸಾಧನಗಳ ಒಡೆತನವನ್ನು ಸಾಮಾಜಿಕಗೊಳಿಸುವುದು, ರಾಜಕೀಯ ಅಧಿಕಾರಕ್ಕಾಗಿ ಹೋರಾಡುವುದು, ಕೂಲಿಯಪದ್ಧತಿಯನ್ನು ಶೋಷಣೆಯನ್ನು ಕೊನೆಗೊಳಿಸಲು ಅತ್ಯಗತ್ಯ. ■

"ಸಮಾಜವಾದ: ಕಾಲ್ಪನಿಕ ಮತ್ತು ವೈಜ್ಞಾನಿಕ" ಇದು ಎಂಗೆಲ್ಸ್‌ರವರ ಒಂದು ಪ್ರಮುಖ ಕೃತಿ. ಇದರ ಸಾರಾಂಶವನ್ನು ನೀಡುತ್ತಾ ಸಮಾಜವಾದ ಕಾಲ್ಪನಿಕ ಏನಾಗಿತ್ತು. ಮಾರ್ಕ್ಸ್-ಎಂಗೆಲ್ಸ್ ವೈಜ್ಞಾನಿಕ ಹೇಗಾಯಿತು ಎಂಬುದನ್ನು ಕಾಂ.ಪಿ.ರಾಮಚಂದ್ರರಾವ್ ಹೇಳಿದ್ದಾರೆ.



ಕಾಲ್ಪನಿಕ ಸಮಾಜವಾದ ವೈಜ್ಞಾನಿಕ ಸಮಾಜವಾದವಾಯಿತು

- ಪಿ.ರಾಮಚಂದ್ರರಾವ್

ಆಧುನಿಕ ಸಮಾಜವಾದವು ಒಂದೆಡೆ ಪ್ರಥಮವಾಗಿ ಆಧುನಿಕ ಸಮಾಜದಲ್ಲಿ ಆಸ್ತಿವಂತರ ಹಾಗೂ ಆಸ್ತಿ ರಹಿತರ, ಬಂಡವಾಳಶಾಹಿಗಳ ಮತ್ತು ಕೂಲಿಕಾರರ ವರ್ಗಗಳ ನಡುವಿನ ವರ್ಗ ವೈರುಧ್ಯವನ್ನು ಗುರುತಿಸಿದುದರ ಫಲವಾಗಿದೆ; ಇನ್ನೊಂದೆಡೆ ಉತ್ಪಾದನೆಯಲ್ಲಿ ಸಾರ್ವತ್ರಿಕವಾಗಿರುವ 'ಅರಾಜಕತೆ'ಯನ್ನು ಗುರುತಿಸಿದುದರ ಫಲವಾಗಿದೆ. ಸಮಾಜವಾದವು ಪ್ರಥಮವಾಗಿ, 18ನೇ ಶತಮಾನದ ಪುನಃಶ್ಚೇತನಕಾರಿ ಫ್ರೆಂಚ್ ತತ್ವಜ್ಞಾನಿಗಳು ನಿರೂಪಿಸಿದ ತತ್ವಗಳನ್ನು ಮುಂದುವರಿಸಿ ಅವುಗಳಿಗೆ ಪೂರ್ಣ ಸೈದ್ಧಾಂತಿಕ ಸ್ವರೂಪವನ್ನು ಕೊಡುವುದರಿಂದ ಆರಂಭವಾಯಿತು. ಎಲ್ಲಾ ಹೊಸ ಸಿದ್ಧಾಂತಗಳಂತೆ ಆಧುನಿಕ ಸಮಾಜವಾದವು ಕೂಡಾ ತನ್ನ ಕಾಲದಲ್ಲಿ 'ಬೌದ್ಧಿಕ ವಸ್ತು'ವಿಗೆ ಸಂಬಂಧಿಸಿ ಬೆಳೆಯುವುದು ಸ್ವಾಭಾವಿಕ.

ಮ್ಯಾಂಚೆಸ್ಟರ್‌ನ ಒಬ್ಬ ಕಾರ್ಖಾನೆ ಕಾರ್ಮಿಕ ಕುಟುಂಬದೊಂದಿಗೆ ಎಂಗೆಲ್ಸ್



18ನೇ ಶತಮಾನದ ಫ್ರೆಂಚ್ ತತ್ವಜ್ಞಾನಿಗಳು ತೀವ್ರ ಕ್ರಾಂತಿಕಾರಿಗಳಂತೆ ಚಿಂತಿಸಿದರು. ಯಾವುದೇ ಸ್ವರೂಪದ ಬಾಹ್ಯ ಅಧಿಕಾರವಾಣಿಯನ್ನು ಅವರು ಮನ್ನಿಸುತ್ತಿರಲಿಲ್ಲ. ಮತ್ತು ಪ್ರಕೃತಿ, ಸಮಾಜ ಮತ್ತು ರಾಜಕೀಯ ಪದ್ಧತಿಗಳ ಕುರಿತಾದ 'ತಿಳುವಳಿಕೆ'ಗಳನ್ನು ಅವರು ನಿರ್ದಾಕ್ಷಿಣ್ಯವಾದ ಟೀಕೆಗೆ ಗುರಿಪಡಿಸಿದರು. ತರ್ಕಬದ್ಧ ಕಾರಣವೆಂಬ ಕಟಕಟೆಯ ಮುಂದೆ ಪ್ರತಿಯೊಂದು ಕೂಡಾ ತನ್ನನ್ನು ತಾನು ಸಮರ್ಥಿಸಿಕೊಳ್ಳಲು ಸಾಧ್ಯವಾಗಬೇಕು. ಇಲ್ಲವಾದರೆ ಅದು ಅಸ್ತಿತ್ವವನ್ನು ಕಳೆದುಕೊಳ್ಳಬೇಕು. ಫ್ರೆಂಚ್ ಚಿಂತಕರ ಈ ಪರೀಕ್ಷೆಯಲ್ಲಿ ಪ್ರತಿಯೊಂದು ಹಳೆಯ ಸಮಾಜದ ವ್ಯವಸ್ಥೆ, ಪ್ರತಿಯೊಂದು ಪ್ರಭುತ್ವ, ಪ್ರತಿಯೊಂದು ಹಳೆಯ ಈ ಕುರಿತಾದ ತಿಳುವಳಿಕೆಗಳು ಕಸದ ಬುಟ್ಟಿಗೆ ಎಸೆಯಲ್ಪಟ್ಟವು. ಅವರ ಪ್ರಕಾರ "ಈ ತನಕ ಜಗತ್ತು ಪೂರ್ವಗ್ರಹ ವಿಚಾರಗಳಿಂದ ನಿಯೋಜಿಸಲ್ಪಡುತ್ತಿತ್ತು, ಅದ

"ಶುಭ ಹಾರೈಕೆಗಳು"

ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ನಿಯಮಿತ

ನಂ. 8, ಕನ್ನಿಂಗ್ಹಾಂ ರಸ್ತೆ ಬೆಂಗಳೂರು-52

ನ ಮ್ಮ ಕಾ ರ್ಯ ವ್ಯಾ ಪ್ತಿ

** ರಾಜ್ಯದ ಕೃಷಿ ಉತ್ಪನ್ನ ಹೆಚ್ಚಿಸಲು ಅಗತ್ಯವಾದ ಗೊಬ್ಬರಗಳು ಮತ್ತು ಕೀಟನಾಶಕಗಳನ್ನು ರೈತರಿಗೆ ಸಕಾಲದಲ್ಲಿ ಸರಿಯಾದ ಬೆಲೆಗೆ ಒದಗಿಸುವುದು.

** ಬೆಂಗಳೂರಿನಲ್ಲಿ "ಸಹಕಾರ" ಗುರ್ತಿನ ಕೀಟನಾಶಕ ತಯಾರಿಸುವ ಘಟಕ.

** ಹುಬ್ಬಳ್ಳಿಯಲ್ಲಿ ಹತ್ತಿ ಅರೆಯುವುದು ಮತ್ತು ಗಂಟು ಕಟ್ಟುವ ಘಟಕ.

** ಕೃಷಿ ಉತ್ಪನ್ನಗಳ ಮಾರಾಟಗಾರರು.

ಎಲ್.ಶಾಂತಕುಮಾರಿ,,	ಎನ್.ಗುರುಪಾದಪ್ಪ
ಐ.ಎ.ಎಸ್	ಶಾಸಕರು
ಆಡಳಿತ ನಿರ್ದೇಶಕರು	ಅಧ್ಯಕ್ಷರು

"ಚಿಂತನ ಕನ್ನಡ ಪುಸ್ತಕ ಮಳಿಗೆ"

ಪಂಡಿತ ಜನರಲ್ ಲೈಬ್ರರಿ ಕಟ್ಟಡ, ಶಿರಸಿ

ಉತರಕನ್ನಡದ ಸಾಹಿತಿಗಳು, ಕಲಾವಿದರು ಮತ್ತು ವಿಚಾರವಾದಿಗಳು ಸಮಾಜದಲ್ಲಿ ಹೊಸ ವಿಚಾರಗಳನ್ನು ಪ್ರಚುರಪಡಿಸುವ ಉದ್ದೇಶದಿಂದ 'ಚಿಂತನ ಉತ್ತರ ಕನ್ನಡ' ಎಂಬ ವೇದಿಕೆಯನ್ನು ರಚಿಸಿಕೊಂಡು ವೈಚಾರಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಪ್ರಚಲಿತವಿದೆ. 'ಚಿಂತನ' ಸುಲಭ ಬೆಲೆಯಲ್ಲಿ ವೈಚಾರಿಕ ಪುಸ್ತಕಗಳನ್ನು ಅಚ್ಚು ಹಾಕಿಸಿ ಮಾರುವ ಯೋಜನೆಯನ್ನು ಹಾಕಿಕೊಂಡು ಎರಡು ಅಥವಾ ಮೂರು ರೂಪಾಯಿ ಬೆಲೆಯ ಪುಸ್ತಕಗಳನ್ನು ಪ್ರಕಾಶಿಸಿದ್ದು ಮಾತ್ರವಲ್ಲ, ಜನರಲ್ಲಿ ಓದುವ ಹವ್ಯಾಸ ಬೆಳೆಸುವ ಉದ್ದೇಶದಿಂದ ಬೀದಿಯಲ್ಲಿ, ಬಸ್ಸಿನಲ್ಲಿ ಇತರ ಕಾರ್ಯಕ್ರಮಗಳಲ್ಲಿ ಮಾರಾಟ ಮಾಡುವ ಪ್ರಯೋಗ ಮಾಡಿತು. ಅದು ಇಲ್ಲಿಯ ತನಕ ಸಾವಿರಾರು ಪುಸ್ತಕಗಳನ್ನು ಮಾರಾಟ ಮಾಡಿ ಒಂದು ವಿಕ್ರಮವನ್ನು ಸಾಧಿಸಿತು.

ಈ ಅನುಭವದ ಹಿನ್ನೆಲೆಯಲ್ಲಿ ಜನರ ಬಳಿಗೇ ಪುಸ್ತಕಗಳನ್ನು ಒಯ್ದರೆ ಓದುವ ಹವ್ಯಾಸವನ್ನು ಇನ್ನಷ್ಟು ಬೆಳೆಸಲು ಮತ್ತು ವಿಸ್ತರಿಸಲು ಸಾಧ್ಯ ಎಂಬ 'ಚಿಂತನ' 'ಕನ್ನಡ ಪುಸ್ತಕ ಪ್ರಾಧಿಕಾರ'ದ ನೆರವಿನಿಂದ ಶಿರಸಿಯಲ್ಲಿ 'ಚಿಂತನ ಕನ್ನಡ ಪುಸ್ತಕ ಮಳಿಗೆ'ಯನ್ನು ಪ್ರಾರಂಭಿಸಿದೆ.

ರಾಜ್ಯೋತ್ಸವದಂದು ಪ್ರಾರಂಭವಾದ ಈ ಮಳಿಗೆ ಜಿಲ್ಲೆಯಾದ್ಯಂತ ಜನತೆಗೆ ಪುಸ್ತಕಗಳನ್ನೊಯ್ದು ಮಾರಾಟ ಮಾಡಿದೆ. ಬಿ.ಜಿ.ವಿ.ಎಸ್.ನ ಜತೆಗೆ ಜಿಲ್ಲೆಯ ತುಂಬ ಪುಸ್ತಕ ಜಾಥಾ ನಡೆಸಿದೆ. ಮೂರು ತಿಂಗಳುಗಳಲ್ಲಿ ಸುಮಾರು ಒಂದು ಲಕ್ಷ ರೂಪಾಯಿ ಬೆಲೆಯ ಪುಸ್ತಕಗಳನ್ನು ವಿಕ್ರಯಿಸಿದೆ. ಹಣ್ಣಿನ ಗಾಡಿಯಲ್ಲಿ ಪುಸ್ತಕಗಳನ್ನಿಟ್ಟು ತಿರುಗಿ 'ಮನೆ ಮನೆಗೆ ಪುಸ್ತಕ ಚಳುವಳಿ' ನಡೆಸಿದೆ. 'ಚಿಂತನ ಕನ್ನಡ ಪುಸ್ತಕ ಮಳಿಗೆ'ಯಲ್ಲಿ ಸಾವಿರಾರು ಪುಸ್ತಕಗಳು ಲಭ್ಯವಿವೆ. ಮಕ್ಕಳ ಸಾಹಿತ್ಯ, ಕವನ ಸಂಕಲನ, ಕಾದಂಬರಿ, ವೈಚಾರಿಕ ಗ್ರಂಥಗಳು, ನಾಟಕಗಳು, ಹೀಗೆ ಎಲ್ಲಾ ವಿಧದ ಹಲವಾರು ಲೇಖಕರ ಪುಸ್ತಕಗಳು ಸಿಗುತ್ತಿವೆ. ರಿಯಾಯಿತಿ ದರದಲ್ಲಿ ಪುಸ್ತಕಗಳನ್ನು ಪೂರೈಸಲಾಗುತ್ತದೆ.


ಸಾರ್ವಜನಿಕರು ಪುಸ್ತಕ ಮಳಿಗೆಯನ್ನು ಉಪಯೋಗಿಸಿಕೊಳ್ಳಲು ಕೋರುತ್ತೇವೆ.

*ಒಂದು **ಕೋರಿಕೆ:** ಉಡುಗೊರೆ ನೀಡುವವರು ಬಹುಮಾನಗಳನ್ನು ಕೊಡುವವರು ದಯವಿಟ್ಟು ಪುಸ್ತಕಗಳನ್ನು ನೀಡಿ, ತನ್ಮೂಲಕ ಪುಸ್ತಕ ಸಂಸ್ಕೃತಿ ಬೆಳೆಸಲು ನೆರವಾಗಿ.*

ಚಿಂತನ
ಉತ್ತರ ಕನ್ನಡ

Telegram: `SUPREME' Kundapura
Factory off: 20346 Kundapura
Phone (Resi): 20102 Kundapura
STD Code No. 08254

SUPREME TILE WORKS



NATIONAL HIGHWAY,
TALLUR-576 230
Kundapura Taluk
(Karnataka State)

ಸುಪ್ರೀಮ್ ಟ್ಯಾಲ್ ವರ್ಕ್ಸ್,

ತಲ್ಲೂರು

Best Compliments From:

A Well Wisher

Mangalore

ಭೂಮಿಯ ಮೇಲೆ ಬಂಡವಾಳಶಾಹಿಗಳು ಮತ್ತು ಕಾರ್ಮಿಕರು ಇದುವರೆಗೆ ಕಾರ್ಮಿಕರಿಗೆ ಇಷ್ಟು ಮಹತ್ವಪೂರ್ಣವಾದ ಪುಸ್ತಕ ಕಾಣಿಸಿಕೊಂಡಿಲ್ಲ.

- ಮಾರ್ಕ್ಸ್‌ರವರ "ಬಂಡವಾಳ" ಕೃತಿಯ ಮೊದಲ ಜರ್ಮನ್ ಆವೃತ್ತಿಯಲ್ಲಿ ಎಂಗೆಲ್ಸ್



ಎಂಗೆಲ್ಸ್ ಮಾರ್ಕ್ಸ್‌ರವರ ಸಮಾಧಿ ಬಳಿ

ಮಾನವ ಕುಲದಲ್ಲಿ ಒಂದು ತಲೆ ಕಮ್ಮಿಯಾಯಿತು. ಅದು ನಮ್ಮ ಕಾಲದ ಅತ್ಯಂತ ಮಹಾನ್ ತಲೆ.... ನಮ್ಮ ಅಂತಿಮ ವಿಜಯವಂತೂ ಶತಸ್ಸಿದ್ಧ. ಆದರೆ ನಡುವೆ ಬಳಸು ದಾರಿ, ತಾತ್ಕಾಲಿಕ ಮತ್ತು ಸ್ಥಳೀಯ ತಪ್ಪುಗಳನ್ನೆಲ್ಲಾ ತಪ್ಪಿಸಲಾಗದು. ಇನ್ನು ಮುಂದೆ ಇವು ಹೆಚ್ಚು ಸಂಭವಿಸಬಹುದು. ಇರಲಿ. ನಾವು ಇದನ್ನೆಲ್ಲಾ ಹಾದು ಹೋಗಲೇಬೇಕು. ಇಲ್ಲವಾದರೆ ನಾವೇಕೆ ಇಲ್ಲಿರಬೇಕು? ಆದರಿಂದ ನಾವು ಧೈರ್ಯಗೆಡುವುದಂತೂ ದೂರದ ಮಾತು.

-ಮಾರ್ಕ್ಸ್ ಮರಣದ ಸಂದರ್ಭದಲ್ಲಿ ಎಂಗೆಲ್ಸ್

ಕಾರಣ, ಹಿಂದಿನದ್ದೆಲ್ಲವೂ ತುಚ್ಛವಾಗಿದೆ. ಈಗ ಮಾತ್ರ ಪ್ರಥಮವಾಗಿ ಬೆಳಕು ಮೂಡಿದೆ. ಆದ್ದರಿಂದ, ಮುಂದಕ್ಕೆ ಮೂಢನಂಬಿಕೆ, ಅನ್ಯಾಯ ಮತ್ತು ದಬ್ಬಾಳಿಕೆ ಇವೆಲ್ಲದನ್ನು ಅವುಗಳ ಸ್ಥಾನದಲ್ಲಿ ಸತ್ಯ, ನ್ಯಾಯ, ಪ್ರಕೃತಿ ಆಧಾರಿತ ಸಮಾನತೆ ಮತ್ತು ಕಿತ್ತುಕೊಳ್ಳಲು ಸಾಧ್ಯವಾಗದ ಮಾನವ ಹಕ್ಕುಗಳು ನೆಲೆಸಲ್ಪಡಬೇಕು.

ಬಂಡವಾಳಶಾಹಿ ಚೌಕಟ್ಟಿಗೆ ಸೀಮಿತವಾಯಿತು

ಈಗ ನಮಗೆ ತಿಳಿದಿರುವುದರ ಪ್ರಕಾರ ಈ ತರ್ಕಬದ್ಧವಾದ ಕಟೆಕಟೆ ಕೇವಲ ಬಂಡವಾಳಶಾಹಿ ಚೌಕಟ್ಟಿಗೆ ಸೀಮಿತವಾಗಿ ನಿಂತಿತು. ಅನಾದಿ ನ್ಯಾಯ ಬಂಡವಾಳಶಾಹಿ ನ್ಯಾಯವಾಗಿ ರೂಪಾಂತರವಾಯಿತು, ಸಮಾನತೆ ಬಂಡವಾಳಶಾಹಿ ಕಾನೂನಿನ ಸಮಾನತೆಯಾಯಿತು. ಬಂಡವಾಳಶಾಹಿ ಆಸ್ತಿಯು ಮಾನವನ ಅತ್ಯಾವಶ್ಯಕ ಹಕ್ಕು ಎಂದು ಪರಿಗಣಿಸ್ಪಟ್ಟಿತು. ರುಸ್ಸೋರವರ 'ಸಾಮಾಜಿಕ ಒಡಂಬಡಿಕೆ' ಕೇವಲ ಒಂದು ಬಂಡವಾಳಶಾಹಿ ಪ್ರಜಾಪ್ರಭುತ್ವವಾಯಿತು. ಆದ ಕಾರಣ, ಫ್ರೆಂಚ್ ಚಿಂತಕರಿಗೆ ಕೂಡಾ ತಮ್ಮ ಕಾಲದ ಮಿತಿಗಳನ್ನು ಮೀರಿ ಮುಂದುವರಿದು ಚಿಂತಿಸಲು ಸಾಧ್ಯವಾಗಲಿಲ್ಲ.

ಪಾಳೆಯಗಾರಿ ಸಾಮಂತರಿಗೂ ಬಂಡವಾಳಗಾರರಿಗೂ ನಡುವಿನ ವೈರುಧ್ಯದ ಪ್ರಕ್ರಿಯೆಯ ಜೊತೆ ಜೊತೆಯಲ್ಲೇ ಶೋಷಕರ ಮತ್ತು ಶೋಷಿತರ ನಡುವಿನ ವೈರುಧ್ಯವೂ, ಶ್ರೀಮಂತ ಕೆಲಸಕಳ್ಳರ ಮತ್ತು ಕಷ್ಟಪಟ್ಟು ದುಡಿಯುವವರ ನಡುವಿನ ವೈರುಧ್ಯವೂ ಬೆಳೆದು ಬರುತ್ತಿತ್ತು. ಈ ಕಾರಣದಿಂದಲೇ ಬಂಡವಾಳಶಾಹಿಗಳು ಪಾಳೆಯಗಾರಿ ಸಾಮಂತ ವರ್ಗದ ವಿರುದ್ಧ ಅಧಿಕಾರಕ್ಕಾಗಿ ಹೋರಾಡುವಾಗ ತಾವು ಒಂದು ಪ್ರತ್ಯೇಕ ವರ್ಗದ ಪ್ರತಿನಿಧಿಗಳಲ್ಲ, ಬದಲು ಇಡೀ ಶೋಷಣೆಗೆ ಒಳಗಾದ ಮಾನವ ಜನಾಂಗದ ಪ್ರತಿನಿಧಿಗಳು ತಾವು ಎಂದು ತೋರಿಸಿಕೊಳ್ಳಲು ಸಾಧ್ಯವಾಯಿತು.

ಆರಂಭದಿಂದಲೇ, ಬಂಡವಾಳಶಾಹಿ ವರ್ಗ ತನ್ನ ವಿರೋಧಿ ವರ್ಗದ ವಿರೋಧವನ್ನು ಸಹಿಸುತ್ತಾ ಬರಬೇಕಾಗಿತ್ತು. ಬಂಡವಾಳಶಾಹಿಗಳು ಕೂಲಿಗಾರರು ಇಲ್ಲದೆ ಅಸ್ತಿತ್ವದಲ್ಲಿರಲಾರರು. ಮಧ್ಯಯುಗದ 'ಗಿಲ್ಡಿನ' ಮುಖ್ಯಸ್ಥರು ಯಾವ ಪ್ರಮಾಣದಲ್ಲಿ ಬಂಡವಾಳಶಾಹಿಗಳಾಗಿ ಬೆಳೆದುಬಂದರೋ, ಅದೇ ಪ್ರಮಾಣದಲ್ಲಿ 'ಗಿಲ್ಡಿನ' ಸದಸ್ಯರು ಮತ್ತು ದಿನ ಕೆಲಸಗಾರರು ಕಾರ್ಮಿಕ ವರ್ಗವಾಗಿ ಬೆಳೆದು ಬಂದರು. ಒಟ್ಟಿನಲ್ಲಿ ಬಂಡವಾಳಶಾಹಿ ವರ್ಗ ಸಾಮಂತಶಾಹಿ ವರ್ಗದ ವಿರುದ್ಧದ ಹೋರಾಟಗಳಲ್ಲಿ ತಾವು ವಿವಿಧ ದುಡಿಯುವ ವರ್ಗಗಳ ಹಿತಗಳನ್ನು ಪ್ರತಿನಿಧಿಸುತ್ತಿದ್ದೇವೆ ಎಂದು ಸಾಧಿಸುತ್ತಿದ್ದರೂ, ಪ್ರತಿಯೊಂದು ಬಂಡವಾಳಶಾಹಿ ಹೋರಾಟದಲ್ಲಿ ಆಧುನಿಕ ಕಾರ್ಮಿಕ ವರ್ಗದ ಹಿರಿಯರು ಪ್ರತ್ಯೇಕ ವರ್ಗವಾಗಿ ಕೂಡಾ ಹೋರಾಟ ಮಾಡುತ್ತಿದ್ದರು. ಉದಾಹರಣೆಗೆ, ಜರ್ಮನ್ ಸುಧಾರಣಾ ಚಳುವಳಿ ಮತ್ತು ರೈತರ ಯುದ್ಧದ ಸಮಯದಲ್ಲಿ ತೋಮಸ್ ಮುನ್‌ಜೀರ್‌ನ ನೇತೃತ್ವದಲ್ಲಿ ರೈತರು ಮತ್ತು ಕಾರ್ಮಿಕರು ವರ್ಗ ಹೋರಾಟದಲ್ಲಿ ಭಾಗಿಗಳಾಗಿದ್ದರು, ಇಂಗ್ಲೀಷ್ ಕ್ರಾಂತಿಯಲ್ಲಿ 'ಲೆವೆಲ್ಲರ್ಸ್' ಎಂಬ ಹೆಸರಿನಲ್ಲಿ ರೈತರು ಮತ್ತು ಕಾರ್ಮಿಕರು ಭಾಗಿಯಾಗಿದ್ದರು, ಫ್ರೆಂಚ್ ಕ್ರಾಂತಿಯಲ್ಲಿ 'ಬೆಬೋಫ್'ರು ಭಾಗಿಗಳಾಗಿದ್ದರು.

ಮುಂದುವರಿದ ಸಮಾನತೆಯ ಕನಸು

ಅಪಕ್ವವಾಗಿದ್ದ ವರ್ಗಗಳ ಕ್ರಾಂತಿಕಾರಿ ಚಳುವಳಿಗಳಿಗೆ ಸಂಬಂಧಿಸಿ ಸೈದ್ಧಾಂತಿಕ ಕೃತಿಗಳೂ ಬೆಳೆದು ಬಂದಿವೆ. 16ನೇ ಮತ್ತು 17ನೇ ಶತಮಾನಗಳಲ್ಲಿ 'ಆದರ್ಶ ಸಾಮಾಜಿಕ ಪರಿಸ್ಥಿತಿಗಳ' ಕುರಿತು 'ಕಾಲ್ಪನಿಕ ಸಮಾಜವಾದಿ ಚಿತ್ರಣಗಳು', 18ನೇ ಶತಮಾನದಲ್ಲಿ ಮೊರ್ಲಿ ಮತ್ತು ಮೇಬ್ಲಿಯವರ ನೇರ ಸಮತಾವಾದೀ ಸಿದ್ಧಾಂತಗಳು ಎದ್ದು ಬಂದವು. ಸಮಾನತೆಯ ಬೇಡಿಕೆಯು ಕೇವಲ ರಾಜಕೀಯ ಹಕ್ಕುಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ; ವ್ಯಕ್ತಿಗಳಿಗಿರುವ ಸಾಮಾಜಿಕ ಸ್ಥಿತಿಗಳಿಗೂ ಈ ಸಮಾನತೆಯ ಬೇಡಿಕೆಯು ವಿಸ್ತರಿಸಲ್ಪಟ್ಟಿತು. ಈ ಹೊಸ ಚಿಂತನೆಯ ಪ್ರಥಮ ರೂಪವಾಗಿ 'ಸ್ಪಾರ್ಟಾ'ದಿಂದ ಅನುಕರಿಸಿದ (ಜೀವನದ ಎಲ್ಲಾ ಸುಖಗಳಿಂದ ಹೊರತಾಗಿರುವ) ಒಂದು ನಿರಪೇಕ್ಷ ಸಮತಾವಾದವಾಯಿತು. ಅನಂತರ ಮೂರು 'ಮಹಾ ಕಲ್ಪನಾ ಸಮಾಜವಾದಿ'ಗಳು ಆವಿರ್ಭವಿಸಿದರು. ಸಂತ-ಸೈಮನ್, ಫೊರಿಯರ್ ಮತ್ತು ಒವೆನ್. ಸಂತ ಸೈಮನರು ಬಂಡವಾಳಶಾಹಿಗಳೂ, ಕಾರ್ಮಿಕರೂ ಸಮಾನರಾಗಿರುವ ಕನಸು ಕಂಡರು. ಫೊರಿಯರ್ ಮತ್ತು ಒವೆನ್ ಇವರುಗಳು ಬಂಡವಾಳಶಾಹಿ ಪದ್ಧತಿ ಬೆಳೆದಿರುವ ರಾಷ್ಟ್ರಗಳಲ್ಲಿ ವಿಶಾಲವಾದ ಕಾರ್ಮಿಕ ವರ್ಗವು ಪ್ರತ್ಯಕ್ಷವಾಗಿ ಹೇಗೆ ಶೋಷಿಸ್ಪಡುತ್ತಿದೆ ಎಂಬುದನ್ನು ಅನುಭವಿಸಿದುದರ ಕಾರಣವಾಗಿ 'ವರ್ಗ ಭಿನ್ನತೆ'ಗಳನ್ನು ಕಿತ್ತು ಹಾಕಲೇಬೇಕು ಎಂದು ಸಾರಿದರು.

ಈ ಮೂವರಲ್ಲೂ ಒಂದು ಸಾಮಾನ್ಯ ಅಂಶವಿದೆ. ಅವರು ಯಾರೂ ಚಾರಿತ್ರಿಕವಾಗಿ ಬೆಳೆದು ಬಂದು ಕಾರ್ಮಿಕ ವರ್ಗದ ಹಿತಗಳನ್ನು ಪ್ರತಿಪಾದಕರಾಗಿರಲಿಲ್ಲ. 18ನೇ ಶತಮಾನದ ಫ್ರೆಂಚ್ ಚಿಂತಕರಂತೆ ಅವರೂ ಕೂಡಾ ಒಂದು

ನಿರ್ದಿಷ್ಟ ವರ್ಗದ ವಿಮೋಚನೆಯನ್ನು ಇಚ್ಛಿಸಲಿಲ್ಲ, ಬದಲು ಇಡೀ ಮಾನವ ಜನಾಂಗದ ವಿಮೋಚನೆಯನ್ನು ಮಾಡಲು ಇಚ್ಛಿಸಿದರು. ಅವರೂ ಅನಾದಿ ಸತ್ಯವನ್ನು ಸ್ಥಾಪಿಸಬೇಕೆಂದು ಇಚ್ಛಿಸಿದರು. ಇದು ಭೂಮಿಗೂ ಸ್ವರ್ಗಕ್ಕೂ ನಡುವಿನ ಅಂತರದಷ್ಟೇ ಕೇವಲ ಕಲ್ಪನಾ ಸಾಮ್ರಾಜ್ಯವಾಯಿತು.

ಬಂಡವಾಳಶಾಹಿ ಪದ್ಧತಿಯು ಈ ಅನಾದಿ ತತ್ವಗಳ ಆಧಾರದಲ್ಲಿ ನಡೆಯುತ್ತಿಲ್ಲವಾದುದರಿಂದ, ಹಿಂದಿನ ಗುಲಾಮಪದ್ಧತಿ ಪಾಳೆಯಗಾರೀ ಪದ್ಧತಿ ನಾಶವಾದಂತೆ ಈ ಪದ್ಧತಿಯೂ ನಾಶವಾಗಲೇಬೇಕು ಎಂದು ಅವರು ವಾದಿಸಿದರು. ಶುದ್ಧ ತರ್ಕಬದ್ಧ ಕಾರಣ ಮತ್ತು ನ್ಯಾಯದ ಕುರಿತು ಸರಿಯಾದ ತಿಳುವಳಿಕೆ ಬೆಳೆದು ಬರದಿದ್ದುದರಿಂದ ಮಾತ್ರ ಈ ಬಂಡವಾಳಶಾಹಿ ಪದ್ಧತಿಯೂ ನಾಶವಾಗದೆ ಉಳಿದಿದೆ. ಈಗ ಅಂತಹ ನ್ಯಾಯದ ತಿಳುವಳಿಕೆಯ ಅರಿವುಳ್ಳ ಮಹಾತ್ಮರು ಬೆಳೆದು ಬಂದಿರುವುದರಿಂದ, ಬಂಡವಾಳಶಾಹಿ ಪದ್ಧತಿಯು ನಾಶವಾಗಿ 'ವರ್ಗ ರಹಿತವಾದ ಎಲ್ಲರ ಸುಖವನ್ನು ಸಾಧಿಸುವ ಸರ್ವರಿಗೂ ಸಮಾನತಾ ಜೀವನ ಸ್ಥಿತಿಗತಿಗಳನ್ನು ಒದಗಿಸುವ ಸಮಾಜವಾದೀ ಪದ್ಧತಿಯು ಖಂಡಿತವಾಗಿ ಬೆಳೆದು ಬರುವುದು" ಎಂದು ಅವರು ಸಾರಿದರು.

> **ವರ್ಗಗಳೊಂದಿಗೆ ಪ್ರಭುತ್ವವೂ ಕೊನೆಗೆ ಪತನಗೊಳ್ಳಲೇಬೇಕು. ಒಂದು ಮುಕ್ತ ಹಾಗೂ ಸಮಾನ ಉತ್ಪಾದಕರ ಸಂಘದ ಆಧಾರದ ಮೇಲೆ ಉತ್ಪಾದನೆಯನ್ನು ಪುನರ್ ಸಂಘಟಿಸುವ ಸಮಾಜ ಇಡೀ ಪ್ರಭುತ್ವ ಯಂತ್ರವನ್ನು ನಂತರ ಅದು ಎಲ್ಲಿರಬೇಕೋ ಅಲ್ಲಿಡುತ್ತದೆ- ಪುರಾತನ ವಸ್ತುಗಳ ಮ್ಯೂಸಿಯಂನಲ್ಲಿ ನೂಲುವ ಚಕ್ರ ಮತ್ತು ಕಂಚಿನ ಕೊಡಲಿಯ ಪಕ್ಕದಲ್ಲಿ ಅದಕ್ಕೊಂದು ಸ್ಥಾನ ಕಲ್ಪಿಸುತ್ತದೆ.**
>
> **- ಎಂಗೆಲ್ಸ್**

ಹೇಗೆ ಅದು ಸಾಧಿಸಲ್ಪಡುವುದು? ಯಾರಿಂದ ಅದು ಸಾಧಿಸಲ್ಪಡುವುದು? ಈ ಬದಲಾವಣೆಗೆ ವೈಜ್ಞಾನಿಕ ಕಾರಣಗಳೇನು? ಎಂಬುದರ ಕುರಿತು ಬೆಳಕು ಚೆಲ್ಲಲು ಈ ಸಮಾಜವಾದಿಗಳಿಗೆ ಸಾಧ್ಯವಾಗಲಿಲ್ಲ.

ಆದ ಕಾರಣ, ಸಂತ ಸೈಮನ್, ಮೊರಿಯರ್, ಓವೆನ್ ಮೊದಲಾದವರೂ, ಹಾಗೆಯೇ ಅವರ ಹಿಂದೆ 16-17ನೇ ಶತಮಾನದಲ್ಲಿ ಇನ್ನೂ ಹಲವರು ಪ್ರತಿಪಾದಿಸಿದ ಸಮಾಜವಾದಿ ಸಮಾಜದ ಕನಸು, ಕೇವಲ ಕಾಲ್ಪನಿಕ, ವೈಜ್ಞಾನಿಕವಲ್ಲ, ಸಾಧಿಸಲು ಸಾಧ್ಯವಿಲ್ಲದ್ದು, ಯಾವುದೇ ಕಾಲದಲ್ಲಿ ಅನಾದಿ ಸತ್ಯ ಅನಾದಿ ನ್ಯಾಯದ ತಿಳುವಳಿಕೆಯುಳ್ಳ ಮಹಾತ್ಮರು ಹುಟ್ಟಿ ಬಂದರೆ ಮಾತ್ರ ಸಾಧ್ಯವಾಗುವಂತಹ(ಅವರ ನಂಬಿಕೆಯ ಪ್ರಕಾರ) ಸಮಾಜವಾದವಾಗಿದೆ.

ಸಮಾಜವಾದವನ್ನು ಒಂದು ವಿಜ್ಞಾನವಾಗಿ ಪರಿವರ್ತಿಸಲು ಮಾರ್ಕ್ಸ್ ಮತ್ತು ಎಂಗೆಲ್ಸ್‌ರಿಗೆ ಮಾತ್ರ ಸಾಧ್ಯವಾಗಿದೆ.

ಕಾರಣ-1: ಮಾರ್ಕ್ಸ್ ಮತ್ತು ಎಂಗೆಲ್ಸ್‌ರು ಸಮಾಜದಲ್ಲಿ ಬಂಡವಾಳಶಾಹಿ ವರ್ಗ ಮತ್ತು ಕಾರ್ಮಿಕ ವರ್ಗಗಳ ನಡುವೆ ಸತತವಾಗಿ ನಡೆಯುತ್ತಿದ್ದ ವರ್ಗ ಸಂಘರ್ಷವನ್ನು ಕಂಡರು. ಈ ವರ್ಗ ಸಂಘರ್ಷದ ಮೂಲಕ ಬಂಡವಾಳಶಾಹಿ ಶೋಷಣಾ ಪದ್ಧತಿಯನ್ನು ಕಾರ್ಮಿಕ ವರ್ಗ ಕಿತ್ತು ಹಾಕಿ ಶೋಷಣಾ ರಹಿತವಾದ ಸಮಾಜವಾದಿ ಸ್ಥಾಪಿಸುವರು ಎಂಬುದನ್ನು ಪ್ರತಿಪಾದಿಸಿದರು.

ಕಾರಣ- 2: ಅತ್ಯಾಧುನಿಕ ಚಿಂತನಾ ವಿಧಾನದ ದ್ವಂದ್ವಮಾನ ಭೌತಿಕವಾದಿ, ವೈಜ್ಞಾನಿಕ ಚಿಂತನಾ ವಿಧಾನದ ಸಹಾಯದಿಂದ, ಪ್ರಕೃತಿಯನ್ನು ಎಲ್ಲಾ ವಿಜ್ಞಾನಿಗಳು ಪರಿಶೀಲಿಸಿ ಹೇಗೆ ವಿವಿಧ ವಿಜ್ಞಾನ ಶಾಖೆಗಳಲ್ಲಿ, ಪ್ರಕೃತಿಯಲ್ಲಿ ವಸ್ತು ಮತ್ತು ವಸ್ತುವಿನ ಚಲನೆ ಯಾವ ನಿಯಮಗಳಿಗನುಸಾರವಾಗಿ ನಡೆಯುತ್ತಿದೆ ಎಂಬುದನ್ನು ಕಂಡು ಹಿಡಿದರೋ ಅದೇ ರೀತಿ ಮಾನವನ ಸಮಾಜವು ಯಾವ ನಿಯಮಗಳಿಗನುಸಾರವಾಗಿ ವಿಕಾಸಗೊಳ್ಳುತ್ತಾ ವಿವಿಧ ಸಮಾಜ ವ್ಯವಸ್ಥೆಗಳಾಗಿ ನೆಗೆತಗೊಂಡಿತು ಎಂಬ ಭೌತಿಕವಾದಿ ಚರಿತ್ರೆಯ ತಿಳುವಳಿಕೆಯನ್ನು ಮಾರ್ಕ್ಸ್ ಮತ್ತು ಎಂಗೆಲ್ಸ್‌ರು ಶೋಧಿಸಿ ಕಂಡು ಹಿಡಿದರು.(ಚರಿತ್ರೆಯನ್ನು ವೈಜ್ಞಾನಿಕ ವಿಶ್ಲೇಷಣೆಗೆ ಗುರಿಪಡಿಸಿದರು)

ಕಾರಣ-3: ಬಂಡವಾಳಶಾಹಿ ಪದ್ಧತಿಯು ಒಂದು ಶೋಷಣಾ ಸಮಾಜ ವ್ಯವಸ್ಥೆ, ಅದರಲ್ಲಿ ಸತತವಾಗಿ ಕಾರ್ಮಿಕರ ಶೋಷಣೆ ನಡೆಯುತ್ತಿದೆ, ಕಾರ್ಮಿಕರಿಗೆ ಮಾರ್ಕೆಟು ದರದಲ್ಲಿ ಅವರ ಕೆಲಸದ ಶಕ್ತಿಯ ಮೌಲ್ಯವನ್ನು ಕೂಲಿಯ ರೂಪದಲ್ಲಿ ಕೊಟ್ಟು, ಅವರಿಂದ ಹೆಚ್ಚು ಮೌಲ್ಯದ ಕೆಲಸವನ್ನು ಬಂಡವಾಳಶಾಹಿಗಳು ಬಂಡವಾಳಶಾಹಿ ಉತ್ಪಾದನಾ ಪ್ರಕ್ರಿಯೆಯ ಮೂಲಕ ಪಡೆಯುತ್ತಾ ಬರುತ್ತಿದ್ದಾರೆ. ಕೂಲಿ ಕೊಡದ ಕೆಲಸಗಾರರ ಕೆಲಸದ ಭಾಗವೇ - ಅಧಿಕ ಮೌಲ್ಯ. ಇದೇ ಬಂಡವಾಳವರ್ಗದ ಲಾಭದ ಮೂಲ. ಆದ ಕಾರಣ, ಶೋಷಣೆಯಿಲ್ಲದ ಸಮಾಜವಾದೀ ವ್ಯವಸ್ಥೆ ಈ ಬಂಡವಾಳಶಾಹಿ ಉತ್ಪಾದನಾ ಪ್ರಕ್ರಿಯೆಯನ್ನು ನಿಲ್ಲಿಸಿದರೆ ಮಾತ್ರ ಸಾಧ್ಯ ಎಂಬ ಸತ್ಯವನ್ನು ಸಂಶೋಧಿಸಿ ಮಾರ್ಕ್ಸ್ ಮತ್ತು ಎಂಗೆಲ್ಸ್‌ರು ಸಾಧಿಸಿ ತೋರಿಸಿ ಕೊಟ್ಟರು.

ಮಾರ್ಕ್ಸ್ ಮತ್ತು ಎಂಗೆಲ್ಸ್‌ರು ಸಮಾಜವಾದಿ ಸಮಾಜ ವ್ಯವಸ್ಥೆಯು ಕೇವಲ ಕಾಲ್ಪನಿಕವಲ್ಲ ಅದು ವೈಜ್ಞಾನಿಕವಾಗಿ ಸಾಧಿಸಲ್ಪಡುವ ಸಮಾಜದ ವ್ಯವಸ್ಥೆ ಎಂದು ಸಾಧಿಸಿ, ಸಮಾಜವಾದವನ್ನು ವೈಜ್ಞಾನಿಕ ತಳಹದಿಯ ಮೇಲೆ ನಿಲ್ಲಿಸಿದರು.

ಹೀಗೆ ಸಮಾಜವಾದವು ಕಾಲ್ಪನಿಕವಾಗಿದ್ದುದು ವೈಜ್ಞಾನಿಕವಾಗಿ ಪರಿವರ್ತನೆಗೊಂಡಿತು. ■

ಅಂಡರ್ಸನ್ ಬೀದಿ, ಲಂಡನ್ನಿನಲ್ಲಿ

ಜಿಟಿ ಜಿರೊ ಎಂದು ಮಳೆ ಸುರಿದಿತ್ತು ಹೊರಗೆ,
ಕೊರೆದಿತ್ತು ಚಳಿಯು ನಡುಗಿತ್ತು ಇಳೆಯು.
ಮುಗಿಲನ್ನು ತಬ್ಬಿತ್ತು ಮಬ್ಬು, ಹೆಪ್ಪು ಗಟ್ಟಿತ್ತು
ಒರಗಿಕೊಂಡಲ್ಲಿಯೆ -ಥೇಮ್ಸ್ ಹೊಳೆಯು

"ಇಲ್ಲೆ ಇರು ಜೆನಿ. ಬೆಚ್ಚಗೆ ಹೊದ್ದುಕೊ
ಮಕ್ಕಳನು ಬಿಡಬೇಡ ಎಲ್ಲು ಹೊರಗೆ
ಒರಗಿದಲ್ಲೆ ತುಸು ಎದೆಯನ್ನು ಕಾಸಿಕೊ
ಹಿತವಾಗಬಹುದೀ ಅಸಾಧ್ಯ ಚಳಿಗೆ"

"ಲಕ್ಷ್ಯವಿರಲಿ ಹೆಲೆನೆ. ಬೇಗನೆ ಬರುವೆನು"
"ಕಾರ್ಲ. ಇಂಥ ಮಳೆಯಲ್ಲೆ ಹೋಗಬೇಕೆ"?
"ಹೌದಮ್ಮ ಹೌದು ಮನೆಯೊಂದು ಬೇಕಲ್ಲ
ಬಿಸಿನೀರು ಕಾಸು. ಮಕ್ಕಳನು -ಜೋಕೆ"

ಹೊಳೆವ ಕಣ್ಣುಗಳು ಪೊದೆಹುಬ್ಬು ಕುರು
ಚಲುಗಡ್ಡ ಧೀರನಡೆ ಕಂಚು ಧ್ವನಿಯು
ಮರುಕವೆ ಮರೆತಂಥ ಮಳೆಯಲ್ಲಿ ಕೇಳಿ
ದರು. "ಬಾಡಿಗೆಗೆ ಉಂಟೆ ಮನೆಯು"?

ಮುಚ್ಚಿರುವ ಕದ ಕಿಡಕಿ ಕಂಡಲ್ಲಿ ನಿಂತರು.
'ಬಾಡಿಗೆಗೆ ಉಂಟೆ ಮನೆಯು?'
'ನಾಲ್ಕು ಮಕ್ಕಳ ನಮ್ಮ ಸಂಸಾರ'ಕೆಂದಾಗ
ಉದುರಿದವು ನಾಲ್ಕು ದನಿಯು

4, ಆಂಡರ್ಸನ ಬೀದಿ, ಲಂಡನದಲ್ಲಿ
ಕೂಗಿದರಮೀನರು. ಗುಂಪಿನೆದುರು
"ಹಾಸಿಗೆಗಳು ಬೇಕೆ? ದುಪ್ಪಟಿಗಳು ಬೇಕೆ?
1ನೆ ಸವಾಲ್ ಬೇಗ ಬೇಡಬಹುದು"

ಐದು ವರ್ಷದ ಜೆನಿ, ತಾಯಿಗೆ ಅಂದಳು.
"ಹಾಸಿಗೆಗಳನ್ನೇಕೆ ಕೊಟ್ಟೆ ಅಮ್ಮ?"
ನಾವೆಲ್ಲ ಮಲಗುವದೆಲ್ಲೀಗ? ಅಯ್ಯೊ"
ದುಪ್ಪಟ್ಟಿಗಳನ್ನೂ ಹೊತ್ತು ತಂದರಲ್ಲ

ಬೇಲಿಫನನ್ನೆ ಕೈ ಹಿಡಿದು ಕೇಳಿದಳು.
ಲಾವುರೆ "ಅಮ್ಮನಿಗೆ ಎದೆಯ ನೋವು.
ಎಡ್ಗರಗೆ ಕಾಯಿಲೆ, ನಮಗೆಲ್ಲ ಚಳಿಯಲ್ಲಿ
ದುಪ್ಪಟಿಯು ಬೇಡವೆ? ಹೇಳಿ ನೀವು."

ಕೂಗಿದರಮೀನರು. "ತೊಟ್ಟಿಲವು ಬೇಕೇನು?
ಗಟ್ಟಿ ಅಳಹತ್ತಿದರು ಮಕ್ಕಳೆಲ್ಲ
ಹೆನ್ ರಿಚ್ ಮಲಗುವುದು ಎಲ್ಲಮ್ಮ ಇನ್ನೂ.
ಲಾಲಿಯ ಹಾಡುಗಳು ಅವನಿಗಿಲ್ಲ"

"ಗೊಂಬೆಗಳು ಬೇಕೆ? ಉಡುಪುಗಳು ಬೇಕೆ?
1ನೇ ಸವಾಲ್, ಬೇಗ ಬೇಡಬಹುದು.
ಜೆನಿ ಅತ್ತಳು ಲಾವುರ ಅತ್ತಳು.
ಬಾಡಿಗೆಯ ಹಣಕಿವೂ ಸಾಲದಿಹುದು


ನೆರೆದ ಜನರೆಲ್ಲ ತಮ್ಮೊಳಗೆ ನುಡಿದರು.
"ಯಾರೊ ಪಾಪ. ಕಾರ್ಲಮಾರ್ಕ್ಸ್‌ನಂತೆ!
ಬಾಡಿಗೆ ಹಣಕ್ಕೆ ಈ ಬವಣೆ ಕಿನ್ನೂನಿಗೆ
ಗೊಂಬೆಗಳು. ಕಾಯಿಲೆ ಎಂಬುದುಂಟೆ?"

ಹೆಲೆನ ಜೆನಿಯ ಎದೆಯನ್ನು ಕಾಸಿದಳು.
ಸಂತೈಸಿದಳು ಅಳುವ ಮಕ್ಕಳನ್ನು
ಇದ್ದುಬಿದ್ದುದ ಮಾರಿ. ಲೆಸ್ಟರ ಸ್ಕೇರಿನಲಿ
ಆಶ್ರಯಿಸಿದರು ಚಿಕ್ಕ ಹೋಟೆಲನ್ನು

ಕಾರ್ಲಮಾರ್ಕ್ಸ ಅಂದರು."ಋಣವಂತೂ ತೀರಿತು.
ಗಾಯಗಳು ಮಾತ್ರವೆ ಉಳಿದವಲ್ಲ,
ನೆಲೆಯಿಲ್ಲದವರೆಲ್ಲ ಒಂದಾಗಿ. ನೆಲವೆಲ್ಲ
ನೆಲೆಯಾಗಿ ಬಾಳ್ವದಿನ ದೂರವಿಲ್ಲ"

(ಇತ್ತೀಚೆಗೆ ನಿಧನರಾದ ಕವಿ
ಸು.ರಂ. ಎಕ್ಕುಂಡಿಯವರ ಒಂದು ಕಥನ-ಕವನ)

> ಕಮ್ಯುನಿಸಂ ಮಾನವ ಸ್ವಭಾವಕ್ಕೆ, ತರ್ಕಕ್ಕೆ ಅಥವಾ ಮಾನವ ಹೃದಯಕ್ಕೆ ವಿರುದ್ಧವಾದುದಲ್ಲ ... ಅದು ವಾಸ್ತವತೆಯನ್ನು ಎಳ್ಳಷ್ಟೂ ಪರಿಗಣನೆಗೆ ತೆಗೆದುಕೊಳ್ಳದೆ ಕೇವಲ ಭ್ರಮಾಲೋಕದಲ್ಲಿ ವಿಹರಿಸುವ ಸಿದ್ಧಾಂತವಲ್ಲ.
>
> –ಎಂಗೆಲ್ಸ್



ಮಾರ್ಕ್ಸ್‌ವಾದಕ್ಕೆ ಎಂಗೆಲ್ಸ್‌ರ ವಿಶಿಷ್ಟ ಕಾಣಿಕೆ

ಎಂಗೆಲ್ಸರು ಸ್ವತಃ ರಚಿಸಿದ, ಪ್ರಕಟಿಸಲು ನೆರವಾದ ಕೃತಿಗಳ ಬಗ್ಗೆ ಕಾಂ.ಪಿ.ರಾಮಚಂದ್ರರಾವ್ ಸ್ಥೂಲವಾಗಿ ಇಲ್ಲಿ ಚರ್ಚಿಸಿದ್ದಾರೆ.

ಮಾರ್ಕ್ಸ್ ಮತ್ತು ಎಂಗೆಲ್ಸ್‌ರ ಸ್ನೇಹ 40 ವರ್ಷಕಾಲದ ಸ್ನೇಹ, ಮಾರ್ಕ್ಸ್ ಮತ್ತು ಎಂಗೆಲ್ಸ್ 1844ರಲ್ಲಿ ಪ್ಯಾರೀಸ್‌ನಲ್ಲಿ ಮುಖತಃ ಭೇಟಿಯಾಗಿ ಪರಸ್ಪರ ದೀರ್ಘ ಕಾಲ ಚರ್ಚೆ ನಡೆಸಿ, ವಿಚಾರ ಮಂಥನಗೈದು ಜಂಟಿಯಾಗಿ ದ್ವಂದ್ವಮಾನ ಭೌತಿಕವಾದ ಮತ್ತು ಚಾರಿತ್ರಿಕ ಭೌತಿಕವಾದದ ಮುಖ್ಯಾಂಶಗಳನ್ನು ಶೋಧಿಸಿ ಜಗತ್ತಿಗೆ ಮಾರ್ಕ್ಸ್‌ವಾದವನ್ನು ಕಾರ್ಮಿಕ ವರ್ಗದ ಸಿದ್ಧಾಂತವನ್ನು ಸಾರಿದರು. ಅವರಿಬ್ಬರೂ ಅಪ್ಪಟ ಮೇಧಾವಿಗಳು, ಮಾತ್ರವಲ್ಲ ಅಪ್ಪಟ ಕ್ರಾಂತಿಕಾರಿಗಳು. "ನಮ್ಮ ಸಿದ್ಧಾಂತ ಕೇವಲ ಜಗತ್ತನ್ನು ವಿವರಿಸುವ ಸಿದ್ಧಾಂತ ಮಾತ್ರವಲ್ಲ, ಬದಲು ಜಗತ್ತನ್ನು ಬದಲು ಮಾಡಲು ಸಾಧಕವಾಗುವ ಸಿದ್ಧಾಂತ" ಎಂದು ಸಾಧಿಸಿದ ಅವರು ಆ ಪ್ರಕಾರ ತಮ್ಮ ಸಿದ್ಧಾಂತವನ್ನು ರೂಪಿಸಿದರು. ಮಾತ್ರವಲ್ಲ ಅದರ ಆಧಾರದಲ್ಲಿ ಜಾಗತಿಕ ಶೋಷಿತವರ್ಗದ ಒಗ್ಗಟ್ಟನ್ನು ಕಟ್ಟಿ ಕಾರ್ಮಿಕ ವರ್ಗದ ರಾಜಕೀಯ ಹೋರಾಟವನ್ನು ಕಾರ್ಮಿಕ ವರ್ಗದ ನೇತೃತ್ವದಲ್ಲಿ ಜಗತ್ತಿನಾದ್ಯಂತ ಬಂಡವಾಳಶಾಹಿ ಪ್ರಭುತ್ವವನ್ನು ಕಿತ್ತು ಹಾಕಿ ಸಮಾಜವಾದ ಪ್ರಭುತ್ವವನ್ನು ಸ್ಥಾಪಿಸುವುದಕ್ಕೆ ಮುಂದಾದರು.

ಮಾರ್ಕ್ಸ್‌ವಾದದ ಎಲ್ಲಾ ಪ್ರಮುಖ ಕೃತಿಗಳನ್ನು ಮಾರ್ಕ್ಸ್ ಮತ್ತು ಎಂಗೆಲ್ಸರು ಇಬ್ಬರೂ ಪರಸ್ಪರ ಚರ್ಚೆ ನಡೆಸಿ ಮಂಥನ ನಡೆಸಿ ಸೃಷ್ಟಿಸಿದ ಕೃತಿಗಳು ಎಂದು ಧಾರಾಳವಾಗಿ ಹೇಳಬಹುದು. ಆದರೂ ಮಾರ್ಕ್ಸ್‌ವಾದಕ್ಕೆ ಎಂಗೆಲ್ಸ್‌ರದ್ದಂದೇ ರೂಢಿಯಲ್ಲಿ ಬಂದ ಕೃತಿಗಳ ಕುರಿತು ನಾವು ಈ ಲೇಖನದಲ್ಲಿ ಪರಿಶೀಲಿಸಿ ಅವುಗಳ ಮಹತ್ವ ಸಾಮಾನ್ಯವಾದುದಲ್ಲವೆಂಬುದನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡೋಣ.

1848ರಲ್ಲಿ ಪ್ರಕಟವಾದ "ಕಮ್ಯುನಿಸ್ಟ್ ಪ್ರಣಾಳಿಕೆ" ಮಾರ್ಕ್ಸ್‌ವಾದ ಮತ್ತು ಎಂಗೆಲ್ಸ್ ಇಬ್ಬರ ಕೃತಿಯೆಂದೇ ಪ್ರಖ್ಯಾತಿ ಇದೆ. ಹಾಗೇನೇ 'ಜರ್ಮನ್ ಸಿದ್ಧಾಂತ' ಎಂಬ ಕೃತಿಯೂ ಇಬ್ಬರ ಹೆಸರಿನಲ್ಲೇ ಪ್ರಖ್ಯಾತಿಯಾಗಿದೆ.

ಎಂಗೆಲ್ಸ್‌ರು 20 ವರ್ಷಕಾಲ ತನ್ನ ತಂದೆಯ ಗಿರಣಿಯೊಂದರಲ್ಲಿ ಮೇನೇಜರಾಗಿ ಇಂಗ್ಲೆಂಡಿನ ಮ್ಯಾಂಚೆಸ್ಟರ್‌ನಲ್ಲಿ ಕೆಲಸ ಮಾಡಿದ್ದರು. ಆ ಸಂದರ್ಭದಲ್ಲಿ ಅವರು ಇಂಗ್ಲೆಂಡಿನ ಕಾರ್ಮಿಕರ ಕಷ್ಟ ಕಾರ್ಪಣ್ಯದ ಜೀವವನ್ನು ಕಣ್ಣಾರೆ ಕಂಡು, ನೂರಾರು ಕಾರ್ಮಿಕ ಕುಟುಂಬಗಳ ಅನುಭವವನ್ನೇ ಆಧಾರವಾಗಿಟ್ಟುಕೊಂಡು 'ಇಂಗ್ಲೆಂಡಿನ

ಮಾಸ್ಕೋದಲ್ಲಿ ನವಂಬರ್ 7, 1918ರಂದು ಮಾರ್ಕ್ಸ್ ಮತ್ತು ಎಂಗೆಲ್ಸ್‌ರ ಪ್ರತಿಮೆ ಅನಾವರಣ ಮಾಡುತ್ತಾ ಲೆನಿನ್



ಕಾರ್ಮಿಕ ಜೀವನ ಪರಿಸ್ಥಿತಿ' ಎಂಬ ಗ್ರಂಥವನ್ನು 1846ರಲ್ಲಿ ಪ್ರಕಟಿಸಿದರು. ಇದರಲ್ಲಿ ಸ್ಫುಟವಾಗಿ ಕಾರ್ಮಿಕರ ದಯನೀಯ ಜೀವನದ ಸ್ಥಿತಿಗತಿಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಎಂಗೆಲ್ಸ್ ಈ ಕೃತಿಯಲ್ಲಿ ಅದೇ ವೇಳೆ ಇದೇ ಕಾರ್ಮಿಕ ವರ್ಗ ಹೋರಾಟ ನಡೆಸಿ ಮುಂದಕ್ಕೆ ತನ್ನ ಹಾಗೂ ತನ್ನ ಸಮಾಜದ ವಿಮೋಚನೆಯನ್ನು ಸಾಧಿಸಲಿದೆ ಎಂಬ ಆಶೋಕ್ತಿಯನ್ನು ಸ್ಪಷ್ಟವಾಗಿ ಈ ಕೃತಿಯಲ್ಲಿ ಪ್ರತಿಪಾದಿಸಿದ್ದಾರೆ.

ಎಂಗೆಲ್ಸ್‌ರ ಇನ್ನೊಂದು ಕೃತಿ 'ಎಂಟಿ ಡ್ಯೂರಿಂಗ್'. ಡ್ಯೂರಿಂಗ್ ಎಂಬ ಒಬ್ಬ ಜರ್ಮನ್ ಪ್ರೊಫೆಸರು ತಮ್ಮ ಪುಟ್ಟ ಬಂಡವಾಳಶಾಹಿ ಸೈದ್ಧಾಂತಿಕ ನಿಲುಮೆಗಳನ್ನು ಕಾರ್ಮಿಕ ವರ್ಗದ ನಿಜವಾದ ವಿಮೋಚನಾ ಸಾಧಕ ಸಿದ್ಧಾಂತವೆಂದು ಜರ್ಮನಿಯ ಕಾರ್ಮಿಕರ ಪಕ್ಷದಲ್ಲಿ ಹಲವು ಗ್ರಂಥಗಳನ್ನು ಬರೆದು ಪ್ರಚಾರ ಮಾಡುತ್ತಿರುವುದನ್ನು ಕಂಡು ಎಂಗೆಲ್ಸ್‌ರು ನಿಜವಾದ ಕಾರ್ಮಿಕ ವರ್ಗದ ಸಿದ್ಧಾಂತವನ್ನು - ಮಾರ್ಕ್ಸ್‌ವಾದವನ್ನು ಎಳೆಎಳೆಯಾಗಿ ಸಮಗ್ರವಾಗಿ ವಿವರಿಸುವ, ಅದೇ ವೇಳೆ ಡ್ಯೂರಿಂಗ್‌ರ ಸೈದ್ಧಾಂತಿಕ ನಿಲುಮೆಗಳನ್ನು, ಪೊಳ್ಳುಗಳನ್ನು ಬಯಲಿಗೆಳೆಯುವ ಕೆಲಸ ಮಾಡಿದರು. ಸಮಗ್ರವಾಗಿ ಮತ್ತು ಸೂಕ್ಷ್ಮವಾಗಿ 'ಮಾರ್ಕ್ಸ್‌ವಾದ'ದ ಸಿದ್ಧಾಂತದ ಅರಿವುಂಟಾಗಬೇಕಾದರೆ ಈ ಗ್ರಂಥವನ್ನು ಓದಬೇಕು ಎಂದು ಲೆನಿನ್ನರೇ ಈ ಕೃತಿಯ ಪ್ರಶಂಸೆಗೈದಿದ್ದರು.

ಎಂಗೆಲ್ಸ್‌ರು 'ಸಮಾಜವಾದ-ಕಾಲ್ಪನಿಕ ಮತ್ತು ವೈಜ್ಞಾನಿಕ' ಎಂಬ ಕೃತಿಯಲ್ಲಿ ಸರಳವಾಗಿ ಚಾರಿತ್ರಿಕವಾಗಿ 'ಸಮಾಜವಾದ' ಎಂಬ ಪರಿಕಲ್ಪನೆಯು ಯಾವ ಯಾವ ಘಟ್ಟಗಳಲ್ಲಿ ಬೆಳೆದು ಬಂದು, ಕೊನೆಗೆ 'ವೈಜ್ಞಾನಿಕ ಸಮಾಜವಾದ'ದ ಪರಿಕಲ್ಪನೆಯಾಗಿ ಬೆಳೆಯಿತು ಎಂಬುದನ್ನು ವಿವರಿಸಿದರು. "ಒಂದೆಡೆ ಬಂಡವಾಳಶಾಹಿ ಪದ್ಧತಿಯ ಟೀಕೆಯಾಗಿ, ಇನ್ನೊಂದೆಡೆ ಸಮಾಜದ ಬಹುಭಾಗದ ಬಡಜನರ 'ಆಶಾಗೋಪುರ'ವಾಗಿ ಬೆಳೆದು ಯಾವಾಗ ಬೇಕಾದರೂ ಬಂಡವಾಳಶಾಹಿ ಸಮಾಜವು ಸಿಡಿದು, ಒಬ್ಬ ಮಹಾತ್ಮರ ನೇತೃತ್ವದಲ್ಲಿ 'ಸಮಾಜವಾದ' ಸ್ಥಾಪಿಸಬಹುದೆಂದು ಬೆಳೆದು ಬಂದ ಪರಿಕಲ್ಪನೆಗಳು -ಓವೆನ್, ಸೈಮನ್ ಹೇಗೆ ಕಾರ್ಮಿಕ ವರ್ಗದ ನೇತೃತ್ವದಲ್ಲಿ ವರ್ಗ ಹೋರಾಟದ ಮೂಲಕ ಸಮಾಜವಾದೀ ನಿಯಮಬದ್ಧವಾಗಿ ಪಡೆದು ಸಮಾಜವಾದವು ಸ್ಥಾಪಿಸಲ್ಪಡುವುದು ಎಂದು ಎಂಗೆಲ್ಸ್‌ರು ಈ ಕೃತಿಯಲ್ಲಿ ಸರಳವಾಗಿ ಮತ್ತು ಶಾಸ್ತ್ರೀಯವಾಗಿ ವಿವರಿಸಿದ್ದಾರೆ.

ಎಂಗೆಲ್ಸರು ಇನ್ನೊಂದು ಅಗಾಧವಾದ ಕೊಡುಗೆ 'ಕುಟುಂಬ, ಸ್ವಂತ ಆಸ್ತಿ ಮತ್ತು ಪ್ರಭುತ್ವ" ಎಂಬ ಗ್ರಂಥ. ಇದು ಚಾರಿತ್ರಿಕ ಭೌತಿಕವಾದದ ಒಂದು ಆಧಾರ ಗ್ರಂಥವೆನ್ನಬಹುದು. ಕುಟುಂಬದ ಬಗ್ಗೆ ಜನಜನಿತವಾಗಿದ್ದ ಪರಿಕಲ್ಪನೆಯನ್ನು ನಿಸ್ಸಂದೇಹಪೂರ್ವಕವಾಗಿ ಟೀಕಿಸಿ, ಕುಟುಂಬ ಹೇಗೆ ಹುಟ್ಟಿತು, ಬೆಳೆಯಿತು ಮತ್ತು ಮುಂದಕ್ಕೆ ಖಾಸಗಿ ಆಸ್ತಿ ಅಸ್ತಿತ್ವಕ್ಕೆ ಬಂದು ಸಮಾಜವು ವರ್ಗ ಸಮಾಜವಾಗಿ ಇಬ್ಭಾಗವಾದಾಗ ಅದು 'ಸ್ತ್ರೀ'ಯನ್ನು 'ಪುರುಷ'ನ ಖಾಸಗಿ ಆಸ್ತಿಯಾಗಿರುವಂತೆ ಮಾಡಿತು ಎಂಬುದನ್ನು ಹೃದಯಸ್ಪರ್ಶಿಯಾಗಿ ಮತ್ತು ಆಧಾರಯುಕ್ತವಾಗಿ ಎಂಗೆಲ್ಸ್ ಈ ಗ್ರಂಥದಲ್ಲಿ ವಿವರಿಸಿದ್ದಾರೆ. "ಮೊರ್ಗನ್ ಎಂಬ 'ಮಾನವಶಾಸ್ತ್ರಜ್ಞ (Anthropologist)'ನ ಗ್ರಂಥವು ಪ್ರಕಟವಾದ ನಂತರ ಎಂಗೆಲ್ಸ್‌ರ ಚಿಂತನೆ ಎಷ್ಟು ಆಳವಾಗಿತ್ತು ಎಂಬುಪಕ್ಕೆ ವೈಜ್ಞಾನಿಕ ದೃಢತೆಯು ಒದಗಿಬಂತು. ಈ ಗ್ರಂಥದಲ್ಲಿ ಎಂಗೆಲ್ಸ್ ಅಷ್ಟೇ ಕರಾರುವಕ್ಕಾಗಿ ಖಾಸಗಿ ಆಸ್ತಿ ಹೇಗೆ ಶೋಷಣೆಗೆ ಆಧಾರವಾಗಿದೆ ಎಂದೂ, ವರ್ಗ ಸಮಾಜದ ತಳಹದಿಯಾಗಿದೆ ಎಂದೂ, ಸಮಾಜವು ವರ್ಗ ರಹಿತ, ಶೋಷಣೆ ರಹಿತ ಸಮಾನತೆಯುಳ್ಳ ಸಮಾಜವಾದಿ ಸಮಾಜ ಬೆಳೆದು ಬರಬೇಕಾದಲ್ಲಿ 'ಖಾಸಗಿ ಆಸ್ತಿ'ಯ ವಿರುದ್ಧದ ಹೋರಾಟವು ಯಶಸ್ವಿಯಾದರೆ ಮಾತ್ರ ಸಾಧ್ಯ ಎಂಬುದನ್ನು ಅವರು ತೋರಿಸಿಕೊಟ್ಟರು. ಖಾಸಗಿ ಆಸ್ತಿ ಸಮಾಜದಲ್ಲಿ ಬೆಳೆದು ಬಂದ ನಂತರ ವರ್ಗ ಸಮಾಜವಾಗಿ ಸಮಾಜವು ಒಡೆಯಿತು. ಸಮಾಜದ ಅಲ್ಪಸಂಖ್ಯಾತರ ಕೈಯಲ್ಲಿದ್ದ ಖಾಸಗಿ ಆಸ್ತಿಯನ್ನು ಅಂದರೆ ಆಳುವ ವರ್ಗದ ಹಿತಗಳನ್ನು ರಕ್ಷಿಸುವ ಸಲುವಾಗಿಯೇ 'ಪ್ರಭುತ್ವ' ಎಂಬ ಸರ್ಕಾರಿ ಯಂತ್ರವು ಬೆಳೆದು ಬಂತು ಎಂಬುದನ್ನು ಅವರು ಈ ಕೃತಿಯಲ್ಲಿ ವಿವರಿಸುತ್ತಾರೆ. ಮಾರ್ಕ್ಸ್‌ವಾದಿಗಳಿಗೆ ಇದೊಂದು ಆಕರ ಗ್ರಂಥ. ಜಗತ್ತಿನ ಎಲ್ಲಾ ಕ್ರಾಂತಿಗಳು ಸಮಾಜದಲ್ಲಿದ್ದ ಪ್ರಭುತ್ವವನ್ನು ಇನ್ನೂ ಗಟ್ಟಿಗೊಳಿಸುವತ್ತ ಹೋದವು; ಕಾರ್ಮಿಕ ವರ್ಗವು ನಡೆಸುವ ಕ್ರಾಂತಿ ಮಾತ್ರ ಸಮಾಜದಲ್ಲಿದ್ದ ಪ್ರಭುತ್ವವನ್ನು ಸಂಪೂರ್ಣವಾಗಿ ನಾಶಮಾಡಿ ಸಮಾಜ ಬಹುಭಾಗದ ಜನರ ಹಿತಗಳನ್ನು ಅಲ್ಪಸಂಖ್ಯಾತರು ಕಿತ್ತುಕೊಳ್ಳದಂತೆ ರಕ್ಷಿಸುವ ಸಲುವಾಗಿ ಬೇರೆಯೇತರದ ಪ್ರಭುತ್ವವನ್ನು ಕಟ್ಟಿ ಬೆಳೆಸಬೇಕಾಗುತ್ತದೆ ಎಂಬುದು ಈ ದಿಕ್ಕಿನಲ್ಲಿ ಮುಂದಕ್ಕೆ ಮಾರ್ಕ್ಸ್ ವಾದಿಗಳಿಗೆ ಚರಿತ್ರೆ ಸ್ಪಷ್ಟಮಾಡಿಕೊಟ್ಟ ಪಾಠವಾಗಿದೆ.

ಮಾರ್ಕ್ಸ್‌ರವರು 'ಬಂಡವಾಳ' ಗ್ರಂಥದ 1ನೇ ಸಂಪುಟವನ್ನು ತಮ್ಮ ಕಾಲದಲ್ಲೇ ಬರೆದು ಪ್ರಕಟಗೊಳಿಸಿದರು. ಆದರೆ 'ಬಂಡವಾಳ'ದ ಎರಡನೇ ಮತ್ತು ಮೂರನೇ ಗ್ರಂಥಗಳನ್ನು ಎಂಗೆಲ್ಸರೇ ಸಂಗ್ರಹಿಸಿ ಬರೆದರು. ಮೂರನೇ ಗ್ರಂಥದಲ್ಲಿ ಹಲವಾರು ಪರಿಚ್ಛೇದಗಳನ್ನು ಕುರಿತು ಮಾರ್ಕ್ಸ್‌ರು ಸೂಚಕವಾಗಿ ಬರೆದಿದ್ದುದನ್ನು ಎಂಗೆಲ್ಸ್‌ರು ಸ್ಪಷ್ಟವಾಗಿ ಬರೆಯಬೇಕಾಯಿತು, ಬರೆದರು. ಅದು ಅವರ ಶ್ರೇಷ್ಠತೆಯನ್ನು ತೋರಿಸುತ್ತದೆ. ಮಾರ್ಕ್ಸ್‌ರ ಚಿಂತನೆಯ ಕುರಿತು 40 ವರ್ಷಕಾಲದ ಸದಾ ಸಂಪರ್ಕ ಎಂಗೆಲ್ಸ್‌ರಿಗೆ ಇದ್ದುದರಿಂದ ಮಾತ್ರ ಇದು ಸಾಧ್ಯವಾಯಿತು.



'ಯುವ ಹೆಗೆಲಿಯನ್ನರು' ಎಂಬ ಬರ್ಲಿನ್ ಗುಂಪಿನ ಬಗ್ಗೆ ಎಂಗೆಲ್ಸ್‌ರ ವ್ಯಂಗ್ಯ. ಅವರು ಕೇವಲ ದೊಡ್ಡ ದೊಡ್ಡ ಮಾತುಗಳನ್ನಾಡುತ್ತಾ ಪ್ರಷ್ಯಾ ಸರ್ವಾಧಿಕಾರದ ವಿರುದ್ಧ ಯಾವುದೇ ಗಂಭೀರ ರಾಜಕೀಯ ಆಂದೋಳನಕ್ಕೆ ಸಿದ್ಧರಾಗಿರಲಿಲ್ಲ ಎಂಬ ಬಗ್ಗೆ ಈ ವ್ಯಂಗ್ಯ

ಕರ್ನಾಟಕ ಪ್ರಗತಿಪಥದ ಮುಂಚೂಣಿಯಲ್ಲಿ

ಭಾರತ ದಾಸ್ಯದ ಸಂಕೋಲೆಗಳಿಂದ ಬಿಡುಗಡೆಗೊಂಡು ಈಗ 48 ವರ್ಷಗಳು ಕಳೆದಿವೆ. ಸ್ವಾತಂತ್ರ್ಯಾ ನಂತರದ ಅವಧಿಯಲ್ಲಿ ಎಲ್ಲ ಕ್ಷೇತ್ರಗಳಲ್ಲೂ ಆಗಿರುವ ಪ್ರಗತಿ ಅಪಾರ. ದೇಶದ ಮುನ್ನಡೆಯ ಹಾದಿಯಲ್ಲೇ ಹೆಜ್ಜೆ ಹಾಕುತ್ತಿರುವ ಕರ್ನಾಟಕದಲ್ಲಿ ಅರ್ಥಪೂರ್ಣ ಅಭಿವೃದ್ಧಿಗೆ ಬದಲಾವಣೆಯ ಹೊಸ ಗಾಳಿ ಪಸರಿಸುತ್ತಿದೆ. ರಾಜ್ಯ ಸರ್ಕಾರದ ಆಡಳಿತ ಚುಕ್ಕಾಣಿ ಹಿಡಿದಿರುವ ಮಾನ್ಯ ಮುಖ್ಯಮಂತ್ರಿ ಶ್ರೀ ಎಚ್.ಡಿ.ದೇವೇಗೌಡರವರ ದಕ್ಷ ಮುಂದಾಳತ್ವದಲ್ಲಿ ಪ್ರಗತಿಯ ಹೊಸ ಅಧ್ಯಾಯ ಆರಂಭವಾಗಿದೆ. ದಕ್ಷ ನೀತಿಪೂರ್ಣ ಆಡಳಿತದಿಂದ ಜನತೆಯ ಸರ್ವಾಂಗೀಣ ಅಭಿವೃದ್ಧಿಗೆ ಸರ್ಕಾರ ಕಂಕಣ ಬದ್ಧ.

<u>ಜನತಾ ದರ್ಶನ:-</u> ಜನರ ಮನೆಬಾಗಿಲಿಗೇ ಸರ್ಕಾರವನ್ನು ಕೊಂಡೊಯ್ಯಲು ಮಾನ್ಯ ಮುಖ್ಯಮಂತ್ರಿ ಶ್ರೀ ಹೆಚ್.ಡಿ. ದೇವೇಗೌಡ ಅವರು ನಿಯೋಜಿಸಿರುವ ಅನುಪಮ ಕಾರ್ಯಕ್ರಮ 'ಜನತಾ ದರ್ಶನ' ಕರ್ನಾಟಕದ ನಾನಾ ಮೂಲೆಗಳಲ್ಲಿ ವಾಸಿಸುತ್ತಿರುವ ಜನರು ತಮ್ಮ ಕುಂದುಕೊರತೆಗಳ ಪರಿಹಾರಕ್ಕಾಗಿ ಈಗ ವಿಧಾನಸೌಧಕ್ಕೆ ಬರಬೇಕಾಗಿಲ್ಲ. ಮುಖ್ಯಮಂತ್ರಿಗಳೇ ಖುದ್ದಾಗಿ ಜಿಲ್ಲಾ ಕೇಂದ್ರಗಳಿಗೆ ಭೇಟಿಯಿತ್ತು, ಅವರ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಈ ಕಾರ್ಯಕ್ರಮದಿಂದ ಪ್ರಗತಿಪರ ಕಾರ್ಯಕ್ರಮಗಳ ಸರಾಗ ಅನುಷ್ಠಾನವನ್ನು ಪರಿಶೀಲಿಸಲು ಅವಕಾಶ.

<u>ಬರ ಪರಿಹಾರ:-</u> ರಾಜ್ಯದ ೧೦೬ ತಾಲ್ಲೂಕುಗಳಲ್ಲಿ ಸಕಾಲದಲ್ಲಿ ಮಳೆ ಆಗದೆ ಶೇ. 60-70 ರಷ್ಟು ಜಮೀನಿನಲ್ಲಿ ಕೃಷಿ ಕಾರ್ಯ ಆರಂಭವಾಗಿಲ್ಲ. ಬರ ಪರಿಹಾರ ಕಾರ್ಯಕ್ರಮಗಳಿಗೆ ಸರ್ಕಾರ ಈವರೆಗೆ ಮಾಡಿರುವ ವೆಚ್ಚ ರೂ. 44.86 ಕೋಟಿ. ಈ ಕಾರ್ಯಕ್ರಮದನ್ವಯ ಕುಡಿಯುವ ನೀರು ಪೂರೈಕೆ ಮತ್ತು ಉದ್ಯೋಗ ಸೃಷ್ಟಿಗೆ ಆದ್ಯತೆ. ಅಲ್ಲದೆ, ಕೇಂದ್ರದಿಂದ ರೂ. 250 ಕೋಟಿ ಮಂಜೂರಾತಿಗೆ ಸರ್ಕಾರದ ಮನವಿ.

<u>ವಿದ್ಯಾಭ್ಯಾಸ:-</u> ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಡ್ಡಾಯಗೊಳಿಸಲೋಸುಗ ಪ್ರಥಮ ಹೆಜ್ಜೆಯಾಗಿ 12,000 ಶಾಲಾ ಕೊಠಡಿಗಳ ನಿರ್ಮಾಣ. 18,500 ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ.

ಬಿ.ಇಡಿ., ಟಿ.ಸಿ.ಹೆಚ್. ವಿದ್ಯಾ ಸಂಸ್ಥೆಗಳಲ್ಲಿ ಕರ್ನಾಟಕದ ವಿದ್ಯಾರ್ಥಿಗಳಿಗೆ ಮನ್ನಣೆ ದೊರೆಯುವಂತೆ ಪ್ರವೇಶ ನೀತಿಯ ತಿದ್ದುಪಡಿ.

ಪಾಲಿಟೆಕ್ನಿಕ್‌ಗಳಲ್ಲಿ ಮಹಿಳೆಯರಿಗೆ ಶೇ. 30 ಮೀಸಲಾತಿ.

ಸಂಗೀತ ಶಿಕ್ಷಕರಾಗಿ ಅರ್ಹ ಅಭ್ಯರ್ಥಿಗಳ ಆಯ್ಕೆ.

<u>ಕುಡಿಯುವ ನೀರಿನ ಸೌಲಭ್ಯ:-</u> ಗ್ರಾಮೀಣ ಪ್ರದೇಶಗಳಿಗೆ ತ್ವರಿತವಾಗಿ ಕುಡಿಯುವ ನೀರು ಪೂರೈಸಲು ರೂ. 96.50 ಕೋಟಿ ಬಿಡುಗಡೆ.

<u>ಉದ್ಯೋಗ ಸೃಜನೆ:-</u> ಕೃಷಿ ಕಾರ್ಮಿಕರು, ಸಣ್ಣ ಅತಿ ಸಣ್ಣ ರೈತರಾದಿ ಉದ್ಯೋಗಾಪೇಕ್ಷಿಗಳಿಗಾಗಿ ವಿವಿಧ ಕಾರ್ಯಕ್ರಮಗಳಡಿ ಹೊಸ ಉದ್ಯೋಗಗಳನ್ನು ಕಲ್ಪಿಸಲು ರೂ. 187 ಕೋಟಿ ಮಂಜೂರು. <u>ರಿಯಾಯಿತಿ ದರದಲ್ಲಿ ಅಕ್ಕಿ:-</u> ಕಿಲೋಗೆ ರೂ. 3.20 ದರದಲ್ಲಿ 52,07,379 ಹಸಿರು ಪಡಿತರ ಚೀಟಿದಾರರಿಗೆ ಅಕ್ಕಿ ಸರಬರಾಜು. <u>ನೀರಾವರಿ:-</u> ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ಈ ವರ್ಷ ಸರ್ಕಾರ ಒದಗಿಸಿರುವ ರೂ. 200 ಕೋಟಿ ಸೇರಿ ಒಟ್ಟು ರೂ. 1000 ಕೋಟಿ ವೆಚ್ಚಕ್ಕೆ ಕ್ರಮ. <u>ಆರೋಗ್ಯ ನಿಧಿ:-</u> ಕ್ಯಾನ್ಸರ್, ಹೃದ್ರೋಗ, ಮೂತ್ರ ಸಂಬಂಧಿತ ರೋಗ ಇತ್ಯಾದಿ ಮಾರಕ ರೋಗಗಳಿಂದ ನರಳುತ್ತಿರುವ ಬಡಜನರಿಗೆ ಇದೊಂದು ವರದಾನ. ರೂ. 100 ಕೋಟಿ ನಿಧಿ ಸ್ಥಾಪನೆಯಾಗಿದ್ದು ಈಗಾಗಲೇ ಈ ವರ್ಷ ರೂ. 10 ಕೋಟಿ ಬಿಡುಗಡೆ <u>ಆಧಾರ:-</u> ಅಂಗವಿಕಲರಿಗೆ ಇದೊಂದು ಆಶಾಕಿರಣ. ಮೊದಲಿಗೆ 1000 ಅಂಗಡಿಗಳನ್ನು ಸ್ಥಾಪಿಸಲು ತಲಾ.ರೂ. 10000 ಅನುದಾನ. ಇದಕ್ಕಾಗಿ 1 ಕೋಟಿ ರೂ. ಮಂಜೂರು. ಅಂಗವಿಕಲರ ಸೇವೆಯಲ್ಲಿ ನಿರತವಾಗಿರುವ ಸ್ವಯಂಸೇವಾ ಸಂಸ್ಥೆಗಳಿಗೂ ರೂ. 50 ಲಕ್ಷ ಅನುದಾನ. <u>ಸ್ವಶಕ್ತಿ:-</u> ವಿಧವೆಯರಿಗೆ, ಅನಾಥ ಮಹಿಳೆಯರಿಗೆ ಇದೊಂದು ಊರುಗೋಲು. <u>ಮನೆ ಬೆಳಕು:-</u> ಕಾರ್ಯಕ್ರಮದಡಿ ಆಪತ್ತಿನಲ್ಲಿರುವ ಮಹಿಳೆಯರ ಉದ್ಧಾರಕ್ಕಾಗಿ ರೂ. 60 ಲಕ್ಷ ವಿಶೇಷ ಅನುದಾನ. <u>ಪರಿಶಿಷ್ಟ ವರ್ಗ:-</u> ಜಾತಿಗಳವರಿಗೂ ಮತ್ತು ಅಲ್ಪ ಸಂಖ್ಯಾತ ವರ್ಗದವರಿಗಾಗಿಯೂ ವಿಶೇಷ ಕಾರ್ಯಕ್ರಮಗಳು. ಮಂಗಳೂರು, ಮೈಸೂರು, ಗುಲ್ಬರ್ಗಾ ಮತ್ತು ವಿಜಾಪುರ ಜಿಲ್ಲೆಗಳಲ್ಲಿ ಅಲ್ಪ ಸಂಖ್ಯಾತ ವಿದ್ಯಾರ್ಥಿಗಳಿಗೆ 5 ವಸತಿ ಶಾಲೆಗಳ ನಿರ್ಮಾಣ. <u>ಈದ್ಗಾ ಮೈದಾನ ವಿವಾದಕ್ಕೆ ಶಾಂತಿಯುತ ಇತ್ಯರ್ಥ:-</u> ಹುಬ್ಬಳ್ಳಿ ಈದ್ಗಾ ಮೈದಾನದಲ್ಲಿ ಧ್ವಜಾರೋಹಣ ಕುರಿತು ಸರ್ಕಾರ ಸಂಯಮ ಮತ್ತು ಚಾಣಾಕ್ಷತನ ತೋರಿದ್ದರಿಂದ ವಿವಾದಕ್ಕೆ ಶಾಂತಿಯುತ ಇತ್ಯರ್ಥ.

ಕರ್ನಾಟಕ ಇಂದು ದೇಶದಲ್ಲೇ ಮಾದರಿ ರಾಜ್ಯವಾಗಿ ರೂಪುಗೊಳ್ಳುತ್ತಿದೆ.


ಜನರಿಗಾಗಿ ದುಡಿತ, ಜನರಿಗಾಗಿಯೇ ಮಿಡಿತ

ಕೇಂದ್ರ ಅರ್ಥ ಸಚಿವರ ಪ್ರಶಂಸೆ.

"ಆರ್ಥಿಕವಾಗಿ ಮತ್ತು ಔದ್ಯೋಗಿಕವಾಗಿ ದೇಶದಲ್ಲಿಯೇ ಪ್ರಥಮ ಸ್ಥಾನಕ್ಕೆ ಏರುವ ಎಲ್ಲಾ ಅರ್ಹತೆಗಳೂ ಕರ್ನಾಟಕಕ್ಕೆ ಇದ್ದು, ಮುಖ್ಯಮಂತ್ರಿ ಶ್ರೀ ಹೆಚ್.ಡಿ.ದೇವೇಗೌಡರ ನೇತೃತ್ವದ ಸರ್ಕಾರ ಅದನ್ನು ಸಾಧಿಸುವಲ್ಲಿ ನಮಗೆ ಯಾವುದೇ ಅನುಮಾನ ಇಲ್ಲ.

– ಡಾ. ಮನಮೋಹನ ಸಿಂಗ್

ಕರ್ನಾಟಕ ವಾರ್ತೆ



ಶ್ರಮಿಕ ವರ್ಗದ ತತ್ವಜ್ಞಾನಿ ಎಂಗೆಲ್ಸ್ ಹೀಗಂದಿದ್ದರು

ಕೇವಲ ಪ್ರಾಣಿ ಮಾತ್ರದ ಸ್ಥಿತಿಯಿಂದ ಹೊರಬರುವ ಸಾಮರ್ಥ್ಯವುಳ್ಳ ಏಕೈಕ ಪ್ರಾಣಿಯೆಂದರೆ ಮಾನವ-ಅವನ ಸಾಮಾನ್ಯ ಸ್ಥಿತಿ ಅವನ ಪ್ರಜ್ಞೆಗೆ ಸೂಕ್ತವಾದ ಸ್ಥಿತಿ. ಅವನೇ ಸ್ವತಃ ಸೃಷ್ಟಿಸಿಕೊಳ್ಳುವ ಸ್ಥಿತಿಯಿದು.

ಪ್ರಕೃತಿಯಷ್ಟೇ ಅಲ್ಲ, ಮನುಷ್ಯನು ಪ್ರಕೃತಿಯನ್ನು ಬದಲಿಸುವುದೇ ಮಾನವ ಚಿಂತನೆಯ ಅತ್ಯಂತ ಅಗತ್ಯವಾದ ಹಾಗೂ ತಕ್ಷಣದ ಆಧಾರ. ಮನುಷ್ಯ ಎಷ್ಟು ಪ್ರಮಾಣದಲ್ಲಿ ಪ್ರಕೃತಿಯನ್ನು ಬದಲಿಸಲು ಕಲಿತನೋ ಅಷ್ಟೇ ಪ್ರಮಾಣದಲ್ಲಿ ಅವನ ಬುದ್ಧಿ ಬೆಳೆಯಿತು

ಪ್ರಾಣಿ ಕೇವಲ ತನ್ನ ಪರಿಸರವನ್ನು ಬಳಸುತ್ತದೆ, ... ಮನುಷ್ಯ ಅದನ್ನು ಬದಲಿಸಿ ತನ್ನ ಕೆಲಸ ಈಡೇರಿಸಿಕೊಳ್ಳುತ್ತಾನೆ. ಅದರ ಮೇಲೆ ಒಡೆತನ ಸ್ಥಾಪಿಸುತ್ತಾನೆ... ಈ ವ್ಯತ್ಯಾಸ ತರುವಂತಾದ್ದು ಕೂಡಾ ಶ್ರಮವೇ.

ವಿಜೇತನೊಬ್ಬ ವಿದೇಶೀ ಜನಗಳ ಮೇಲೆ ಆಳ್ವಿಕೆ ನಡೆಸುವಂತೆ ನಾವು ಪ್ರಕೃತಿಯ ಮೇಲೆ ಆಳ್ವಿಕೆ ಖಂಡಿತಾ ನಡೆಸುತ್ತಿಲ್ಲ ಎಂಬುದನ್ನು ಪ್ರತಿಯೊಂದು ಹೆಜ್ಜೆಯೂ ನಮಗೆ ನೆನಪಿಸುತ್ತದೆ. ನಾವು ಪ್ರಕೃತಿಯ ಹೊರಗಿರುವವರಲ್ಲ, ರಕ್ತ, ಮಾಂಸ, ಮೆದುಳುಗಳ ನಾವು ಪ್ರಕೃತಿಗೇ ಸೇರಿದವರೇ, ಅದರ ಮಧ್ಯೆಯೇ ಇರುವವರು, ಮೇಲಾಗಿ ನಮ್ಮೆಲ್ಲಾ ಒಡೆತನವೆಂದರೆ ಇಷ್ಟೇ-ಇತರ ಜೀವಿಗಳಂತಿಲ್ಲದೆ ಅದರ ನಿಯಮಗಳನ್ನು ಕುರಿತು, ಅವನ್ನು ಸರಿಯಾಗಿ ಅನ್ವಯಿಸಲು ನಮಗೆ ಸಾಧ್ಯ.

ಮನುಷ್ಯ ಸನ್ನಿವೇಶವನ್ನು ರೂಪಿಸುವಂತೆ ಸನ್ನಿವೇಶವೂ ಮನುಷ್ಯನನ್ನು ರೂಪಿಸುತ್ತದೆ.

ಮನುಷ್ಯರು ತಿಳಿದೋ ತಿಳಿಯದೆಯೋ ಕೊನೆಗೂ ತಮ್ಮ ನೈತಿಕ ವಿಚಾರಗಳನ್ನು ಪಡೆಯುವುದು ತಮ್ಮ ವರ್ಗ ಸ್ಥಾನಮಾನದ ಮೇಲೆ ನಿಂತ ಸಂಬಂಧಗಳಿಂದ-ತಾವು ಯಾವ ಆರ್ಥಿಕ ಸಂಬಂಧಗಳ ಮೂಲಕ ಉತ್ಪಾದನೆ ಮತ್ತು ವಿನಿಮಯ ನಡೆಸುತ್ತಾರೋ ಅವುಗಳಿಂದ

ಧರ್ಮವೆಂಬುದೆಲ್ಲಾ ಮನುಷ್ಯರ ಮನಸ್ಸಿನಲ್ಲಿ ಅವರ ದೈನಂದಿನ ಜೀವನದ ಮೇಲೆ ಹತೋಟಿಯಿಡುವ ಹೊರಗಿನ ಶಕ್ತಿಗಳ ಅದ್ಭುತ ಪ್ರತಿಫಲನವಲ್ಲದೆ ಮತ್ತೇನೂ ಅಲ್ಲ.



ಫ್ರೆಡರಿಕ್ ಎಂಗೆಲ್ಸ್ ನಿಧನರಾದಾಗ ಒಂದು ಜರ್ಮನ್ ಪತ್ರಿಕೆ ತನ್ನ ಮುಖಪುಟದಲ್ಲಿ ಈ ರೀತಿ ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸಿತು

KRNM/BGS-405 MAG (2) PRB DECR 319-78/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27. ಫೋನ್ ನಂ. 2236462
ಮುದ್ರಣ: ರಾಜಾ ಪ್ರಿಂಟರ್ಸ್, ಸಂಪಂಗಿರಾಮನಗರ, ಬೆಂಗಳೂರು. -27